Editor: **NITYANANDASWAMI** Publisher: **U. BASAVARAJA** RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–15 ಏಪ್ರಿಲ್ 10–16, 2023 ಪುಟ 16 ರೂ. 10/–
Volume-17 Issue-15 April 10-16, 2023 Pages:16 Price: 10/-





ಇದ್ರಿಶ್ ಕೊಲೆ ದೀರ್ಘ ಸಂಚಿನ ಭಾಗ



ಮಜ್ದೂರ್ ಕಿಸಾನ್ ರ್‍ಯಾಲಿ ಒಂದುಗೂಡಿದ ಶ್ರಮಜೀವಿಗಳು

ರಾಮನವಮಿ ಹೆಸರಿನಲ್ಲಿ ಕೋಮು ಗಲಭೆ


ಕಲಾವಿದರ ಮೊರೆ ಹೋದ ಕಮಲ ಪಕ್ಷ

ಕಾಪಾಡಿಕೊಳ್ಳಬೇಕಾದ ಸಾಮರಸ್ಯ ಪರಂಪರೆ

‘ವೀರ’ ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ ‘ಸಾವರ್ಕರ್ ಅನ್‌ಮಾಸ್ಕ್ಡ್’ ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.

ಡಾ. ಶಮ್ಸುಲ್‌ಇಸ್ಲಾಂ
ಅನು: ಟಿ.ಸುರೇಂದ್ರರಾವ್



ಭಾಗ–24

ಇದುವರೆಗೆ ಮೂರು ಮಿಥ್ಯೆಗಳ ವಿಶ್ಲೇಷಣೆಗಳನ್ನು ಓದಿರುವಿರಿ
ಮಿಥ್ಯೆ 1: ‘ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ’!?
ಮಿಥ್ಯೆ 2: ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!?
ಮಿಥ್ಯೆ 3: ಸಾವರ್ಕರ್ ಅವರ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವಷ್ಟೆ!?
ಮಿಥ್ಯೆ 4: ಮುಸ್ಲಿಂ ಲೀಗಿನ ವಿರುದ್ಧ ಸಾವರ್ಕರ್ ಬಂಡೆಯಂತೆ ನಿಂತಿದ್ದರು ಎಂಬುದು.
ವಾಸ್ತವವಾಗಿ, ಜಿನ್ನಾರ ಮುಸ್ಲಿಂಲೀಗಿನ ಪ್ರತ್ಯೇಕತಾವಾದಕ್ಕೆ ಸಮರ್ಥನೆ ದೊರೆತದ್ದು ಸಾವರ್ಕರರಿಂದಲೇ ಮತ್ತು ಸಾವರ್ಕರ್ ಸಾಮಾನ್ಯವಾಗಿ ಕಾಂಗ್ರೆಸ್ ವಿರುದ್ಧ ಮುಸ್ಲಿಂ ಲೀಗಿನೊಂದಿಗೆ ಸೇರಿಕೊಳ್ಳುತ್ತಿದ್ದರು ಎಂಬುದನ್ನು ಈ ಮಿಥ್ಯೆಯಲ್ಲಿ ಓದಿದ್ದೀರಿ. ಈಗ ಮಿಥ್ಯೆ 5 .. ..

ಮಿಥ್ಯೆ 5–ಸಾವರ್ಕರ್ ಒಬ್ಬ ವಿಚಾರವಾದಿ, ಅಶ್ಪೃಶ್ಯತೆಯ ವಿರುದ್ಧ ಹೋರಾಡಿದವರು!?

ಸಾವರ್ಕರ್ ಒಬ್ಬ ವಿಚಾರವಾದಿಯಾಗಿದ್ದರು, ವೈಜ್ಞಾನಿಕ ಮನೋಭಾವ ಹೊಂದಿದ್ದರು ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ್ದರು ಎನ್ನುತ್ತಾರೆ ಅವರ ಸಮರ್ಥಕರು. ಇದು ಎಷ್ಟು ನಿಜ?

ಸಾವರ್ಕರ್ ಒಬ್ಬ ‘ವಿಚಾರವಾದಿ ಹಿಂದೂವಾಗಿದ್ದರು’ ಮತ್ತು ‘ಅಶ್ಪೃಶ್ಯತೆಯ ಆಚರಣೆಯನ್ನು ಕೊನೆಗೊಳಿಸಿದ’ ಒಬ್ಬ ಮುಖಂಡರಾಗಿದ್ದರು ಎಂದು ಅವರನ್ನು ಹಾಡಿ ಹೊಗಳಲಾಗಿದೆ. ಅವರು ‘ವೈಜ್ಞಾನಿಕ ಮನೋಭಾವ’ವನ್ನು ಬೆಳೆಸಿದರು ಹಾಗೂ ಒಬ್ಬ ನಿರೀಶ್ವರವಾದಿಯಾಗಿ ನಿಧನರಾದರು ಎಂದೂ ಹೇಳಲಾಗುತ್ತದೆ. ಅವರ “ದೃಷ್ಟಿಕೋನವು ಅಪ್ಪಟ ಆಧುನಿಕ, ವೈಜ್ಞಾನಿಕ ಹಾಗೂ ಜಾತ್ಯತೀತ” ಆಗಿತ್ತು ಎಂದು ಸಾವರ್ಕರ್‌ವಾದಿಗಳು ಪ್ರತಿಪಾದಿಸುತ್ತಾರೆ.

ವಾಸ್ತವಾಂಶಗಳು

ಮನುಸ್ಮೃತಿಯು ನಮ್ಮ ಸಂವಿಧಾನವಾಗಬೇಕು ಎಂದು ಸಾವರ್ಕರ್ ಬಯಸಿದ್ದರು

ಸಾವರ್ಕರ್ ಮಹಾನ್ ವಿಚಾರವಾದಿ, ಅಶ್ಪೃಶ್ಯತೆ ವಿರುದ್ಧದ ಹೋರಾಟಗಾರ ಮತ್ತು ವೈಜ್ಞಾನಿಕ ಮನೋಭಾವವನ್ನು ಆಚರಿಸುತ್ತಿದ್ದವರು ಎನ್ನುವುದನ್ನು ಮನುವಿನ ಸಂಹಿತೆಗಳಲ್ಲಿ ಅವರು ಇಟ್ಟುಕೊಂಡಿದ್ದ ದೃಢವಾದ ನಂಬಿಕೆಯಿಂದಲೇ ಯಾರೂ ತಿಳಿದುಕೊಳ್ಳಬಹುದು. ಮನುಸ್ಮೃತಿಯು ಹಿಂದೂಗಳ ಪವಿತ್ರ ಗ್ರಂಥ ಎಂದು ತಿಳಿದವರಾಗಿದ್ದರು ಸಾವರ್ಕರ್. ಹಿಂದುತ್ವದ ಮತ್ತು ಆರ್.ಎಸ್.ಎಸ್.ನ ತತ್ವ ಪ್ರತಿಪಾದಕ ಹಾಗೂ ಮಾರ್ಗದರ್ಶಕರಾಗಿ ಅನುಮಾನಕ್ಕೆ ಆಸ್ಪದವಿಲ್ಲದೇ ಅವರು ಹೇಳುತ್ತಾರೆ:

“ನಮ್ಮ ಹಿಂದೂ ರಾಷ್ಟ್ರದವರಿಗೆ ವೇದಗಳ ನಂತರ ಅತ್ಯಂತ ಪೂಜ್ಯನೀಯ ಗ್ರಂಥವೆಂದರೆ ಅದು ಮನುಸ್ಮೃತಿ ಮತ್ತು ಪ್ರಾಚೀನ ಕಾಲದಿಂದಲೂ ಅದು ನಮ್ಮ ಸಂಸ್ಕೃತಿ–ಸಂಪ್ರದಾಯಗಳು, ಚಿಂತನೆಗಳು ಹಾಗೂ ಆಚರಣೆಗಳಿಗೆ ಆಧಾರಸ್ತಂಭವಾಗಿದೆ. ಆ ಗ್ರಂಥವು ನಮ್ಮ ದೇಶದ ಆಧ್ಯಾತ್ಮಿಕ ಹಾಗೂ ದೈವಿಕ ನಡವಳಿಕೆಗಳನ್ನು ಶತಮಾನಗಳ ಕಾಲ ಕ್ರೋಢೀಕರಿಸಿದೆ. ಇವತ್ತಿಗೆ ಕೂಡ ಕೋಟ್ಯಾಂತರ ಹಿಂದೂಗಳು ತಮ್ಮ ದಿನನಿತ್ಯದ ಬದುಕು ಮತ್ತು ಆಚರಣೆಗಳಲ್ಲಿ ಮನುಸ್ಮೃತಿಯ ನಿಯಮಗಳನ್ನೇ ಪಾಲಿಸುತ್ತಿದ್ದಾರೆ. ಇವತ್ತು ಮನುಸ್ಮೃತಿ ಹಿಂದೂ ಕಾನೂನು ಆಗಿದೆ. ಅದು ಮೂಲಭೂತ ಸಂಗತಿ.”

ಮನುಸ್ಮೃತಿಯ ನಿಯಮಗಳನ್ನು ಜಾರಿ ಮಾಡಬೇಕೆಂಬ ಸಾವರ್ಕರ್ ಅವರ ಈ ಕನಸನ್ನು ನನಸು ಮಾಡುವುದೆಂದರೆ, ಅದು ನಿಸ್ಸಂಶಯವಾಗಿಯೂ ಭಾರತದ ದಲಿತರು ಹಾಗೂ ಮಹಿಳೆಯರ ಬದುಕಿನ ದಾರಿಯ ಕೊನೆಯಾಗುತ್ತದೆ. ಅವರ ಬದುಕು ಎಷ್ಟು ಸಂಕಟಕರವಾಗಿ ಹಾಗೂ ಅಮಾನವೀಯವಾಗಿ ಕೀಳು ಮಟ್ಟಕ್ಕೆ ಇಳಿಯಬಹುದು ಎನ್ನುವುದನ್ನು ತಿಳಿಯಲು ಮನುವಿನ ಸಂಹಿತೆಗಳತ್ತ ಒಮ್ಮೆ ಕಣ್ಣು ಹಾಯಿಸಿ ನೋಡೋಣ.”

ಶೂದ್ರರಿಗೆ ಸಂಬಂಧಪಟ್ಟ ಮನುವಿನ ನಿಯಮಗಳು

ಲೋಕಗಳ ಸಮೃದ್ಧಿಗಾಗಿ ಬ್ರಹ್ಮನು ತನ್ನ ಮುಖದಿಂದ ಬ್ರಾಹ್ಮಣನನ್ನೂ, ಭುಜದಿಂದ ಕ್ಷತ್ರಿಯನನ್ನೂ, ತೊಡೆಯಿಂದ ವೈಶ್ಯನನ್ನೂ, ಪಾದದಿಂದ ಶೂದ್ರನನ್ನೂ ನಿರ್ಮಿಸಿದನು. (ಅಧ್ಯಾಯ–1, ಶ್ಲೋಕ–31)

ಮಹಾಮಹಿಮ ಬ್ರಹ್ಮನು, ಈ ಮೇಲಿನ ಮೂರೂ ವರ್ಣಗಳ ಜನರ ನಿಸ್ವಾರ್ಥಸೇವೆ ಮಾಡಿಕೊಂಡಿರುವುದನ್ನೇ ಶೂದ್ರನಿಗೆ ಕರ್ತವ್ಯವೆಂದು ಆದೇಶಿಸಿದ್ದಾನೆ. (ಅ–1, ಶ್ಲೋ–91)

ಉಪನಯನ ಸಂಸ್ಕಾರ ಹೊಂದಲು ಅರ್ಹತೆಯಿಲ್ಲದ ಶೂದ್ರನು ದ್ವಿಜರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ಹೀನವಾದ ಕೆಟ್ಟ ಮಾತುಗಳಿಂದ ಬೈದರೆ, ಕೆಳಜಾತಿಯಲ್ಲಿ ಹುಟ್ಟಿದ ಆ ಶೂದ್ರನ ನಾಲಿಗೆಯನ್ನು ಛೇದಿಸತಕ್ಕದ್ದು, ಏಕೆಂದರೆ ಅವನು ಕೆಳ ಜಾತಿಯವನು.

(ಅ–8, ಶ್ಲೋ–270)

ಬ್ರಾಹ್ಮಣನಿಗೆ ಅಹಂಕಾರದಿಂದ ಧರ್ಮವನ್ನು ಬೋಧಿಸುವ ಶೂದ್ರನಿಗೆ ರಾಜನು ಬಾಯಿಯಲ್ಲಿ ಹಾಗೂ ಕಿವಿಯಲ್ಲಿ ಕಾದ ಎಣ್ಣೆಯನ್ನು ಹಾಕಿಸಬೇಕು. (ಅ–8, ಶ್ಲೋ–272)

ಬ್ರಾಹ್ಮಣನ ಜತೆಗೆ ಒಂದೇ ಆಸನದಲ್ಲಿ ಕುಳಿತ ಅಂತ್ಯಜನಿಗೆ ಅಥವಾ ಶೂದ್ರನಿಗೆ ಸೊಂಟದಲ್ಲಿ ಬರೆ ಎಳೆದು ಊರಿನಿಂದ ಹೊರಗೆ ಹಾಕಬೇಕು, ಇಲ್ಲವೇ ಕುಂಡೆಯನ್ನು ಕತ್ತರಿಸಬೇಕು (ಆಗ ಅವನು ಸಾಯಬಾರದು) (ಅ–8, ಶ್ಲೋ–281)

ಬ್ರಾಹ್ಮಣನಿಗೆ ಮಂಗಲ ಸೂಚಕವಾದ, ಕ್ಷತ್ರಿಯನಿಗೆ ಬಲ ಸೂಚಕವಾದ, ವೈಶ್ಯನಿಗೆ ಧನ ಸೂಚಕವಾದ ಹಾಗೂ ಶೂದ್ರನಿಗೆ ಜುಗುಪ್ಸಾ ಸೂಚಕವಾದ ಹೆಸರುಗಳನ್ನು ಇಡಬೇಕು. (ಅ–2, ಶ್ಲೋ–31)

ಬ್ರಾಹ್ಮಣನಿಗೆ ‘ಶರ್ಮ’ ಎಂತಲೂ, ಕ್ಷತ್ರಿಯ (ರಾಜ) ನಿಗೆ ‘ವರ್ಮ’ ಎಂತಲೂ, ವೈಶ್ಯನಿಗೆ ಸಮೃದ್ಧಿಯನ್ನು ಸೂಚಿಸುವ ‘ಗುಪ್ತ’ ಎಂತಲೂ ಹಾಗೂ ಶೂದ್ರನಿಗೆ ‘ದಾಸ’ ಎಂಬ ಹೆಸರನ್ನು ಉಪನಾಮಗಳಾಗಿ ಇಡಬೇಕು. (ಅ–2, ಶ್ಲೋ–32)

ಬ್ರಾಹ್ಮಣರ ಸೇವೆಯೇ ಶೂದ್ರನ ಅತ್ಯುತ್ತಮ ಕರ್ತವ್ಯವಾಗಿದೆ. ಅವನು ಇದು ಬಿಟ್ಟು ಬೇರೆ ಯಾವ ಕಾರ್ಯವನ್ನು ಮಾಡಿದರೂ ಅದರಿಂದ ಅವನಿಗೆ ಯಾವ ಫಲವೂ ಸಿಗುವುದಿಲ್ಲ. (ಅ–10, ಶ್ಲೋ–123)

ಕೆಲಸ ಮಾಡುವ ಶೂದ್ರನಿಗೆ ಉಳಿದ ಅನ್ನವನ್ನೂ, ಹಳೆಯ ಬಟ್ಟೆಗಳನ್ನೂ, ಕೇರಿಕೊಂಡು ಹಸನು ಮಾಡಿದ ನಂತರ ಉಳಿದ ಧಾನ್ಯಗಳನ್ನೂ ಕೊಡಬೇಕು. (ಅ–10, ಶ್ಲೋ–125)

ಧನಾರ್ಜನೆ ಮಾಡುವ ಶಕ್ತಿಸಾಮರ್ಥ್ಯಗಳಿದ್ದರೂ ಶೂದ್ರನು ಧನವನ್ನು ಗಳಿಸಬಾರದು. ಹಣ ಸಂಪಾದನೆ ಮಾಡಿದರೆ ಶೂದ್ರನು ಬ್ರಾಹ್ಮಣನನ್ನು ಕಡೆಗಣಿಸುತ್ತಾನೆ. (ಅ–10, ಶ್ಲೋ–129)

ಬ್ರಾಹ್ಮಣ, ಕ್ಷತ್ರಿಯ ಹಾಗೂ ವೈಶ್ಯರು ಶೂದ್ರ ಸ್ತ್ರೀಯಲ್ಲಿ ಹುಟ್ಟಿಸಿದ ಮಕ್ಕಳಿಗೆ ತಮ್ಮ ಆಸ್ತಿಯಲ್ಲಿ ಪಾಲು ಕೊಡುವ ಅವಶ್ಯಕತೆಯಿಲ್ಲ. ಹುಟ್ಟಿಸಿದ ತಂದೆಯು ಸಂತೋಷದಿಂದ ಎಷ್ಟು ಹಣ ಕೊಡುವನೋ ಅಷ್ಟೇ ಸಾಕು. (ಅ–9, ಶ್ಲೋ–155)

ಬ್ರಾಹ್ಮಣರಿಗೆ ಸೌಮ್ಯಶಿಕ್ಷೆ

ಮನು ಸಂಹಿತೆಯ ಪ್ರಕಾರ ಶೂದ್ರರು ಸಣ್ಣ ಪುಟ್ಟ ಅಪರಾಧಗಳನ್ನು/ತಪ್ಪುಗಳನ್ನು ಮಾಡಿದರೂ ಅವರಿಗೆ ಕಠಿಣ ಶಿಕ್ಷೆ ನೀಡಲಾಗುತ್ತದೆ, ಆದರೆ ಅದೇ ಬ್ರಾಹ್ಮಣರಿಗೆ ಬಹಳ ಸೌಮ್ಯ ಶಿಕ್ಷೆ ನೀಡಲಾಗುತ್ತದೆ.

ಶಾಸ್ತ್ರವಿಧಿಗಳನ್ನು ಆಚರಿಸುವ, ಶಿಷ್ಯರನ್ನು ಆಳುವ, ಧರ್ಮರಹಸ್ಯವನ್ನು ಹೇಳುವ, ಸರ್ವರನ್ನೂ ಮೈತ್ರಿಭಾವದಿಂದ ಕಾಣುವವನೇ ನಿಜವಾದ ಬ್ರಾಹ್ಮಣನೆನಿಸಿಕೊಳ್ಳುತ್ತಾನೆ. ಅಂತಹ ಬ್ರಾಹ್ಮಣನ ಬಗ್ಗೆ ಅಪನಿಂದೆ ಮಾಡಬಾರದು. ಕಟು ಮಾತುಗಳನ್ನಾಡಬಾರದು. ಅ–11, ಶ್ಲೋ–35)

ಎಲ್ಲಾ ವಿಧದ ಅಪರಾಧಗಳನ್ನು, ಪಾಪವನ್ನು ಮಾಡಿದ್ದಾಗ್ಯೂ ಸಹ ಬ್ರಾಹ್ಮಣನನ್ನು ಕೊಲ್ಲಬಾರದು. ಅವನ ಸರ್ವಸ್ವವನ್ನೂ ಅಪಹರಿಸಿ ಅವನನ್ನು ದೇಶಬಿಟ್ಟು ಹೊರಗೆ ಹಾಕಬೇಕು. (ಅ–8, ಶ್ಲೋ–380)

ಮಹಿಳೆಯರಿಗೆ ಸಂಬಂಧಪಟ್ಟ ಮನುವಿನ ನಿಯಮಗಳು

ಬಾಲಕಿಯಿದ್ದಾಗಲೂ, ಯುವತಿಯಾದಾಗಲೂ, ವೃದ್ಧೆಯಾದಾಗಲೂ ಮನೆಯಲ್ಲಿದ್ದಾಗಲೂ ತಾನೇ ಸ್ವತಂತ್ರವಾಗಿ ಸ್ತ್ರೀಯು ಯಾವ ಕಾರ್ಯವನ್ನೂ ಮಾಡಬಾರದು. (ಅ–5, ಶ್ಲೋ–147)

ಸ್ತ್ರೀಯು ಬಾಲ್ಯದಲ್ಲಿ ತಂದೆಯ ವಶದಲ್ಲಿ ಯೌವನದಲ್ಲಿ ಗಂಡನ ಅಧೀನದಲ್ಲಿ, ಗಂಡ ಸತ್ತನಂತರ ಪುತ್ರನ ಅಧೀನದಲ್ಲಿ ಬಾಳಬೇಕೇ ವಿನಃ ತಾನೇ ಸ್ವತಂತ್ರವಾಗಿ ವ್ಯವಹರಿಸಬಾರದು. (ಅ–5, ಶ್ಲೋ–148)

ಹಗಲಿರುಳೂ ತಂದೆ, ಗಂಡ, ಮಗ ಮೊದಲಾದ ಪುರುಷರು ಹೆಣ್ಣುಮಕ್ಕಳನ್ನು ಅಧೀನದಲ್ಲಿ ಇಟ್ಟುಕೊಳ್ಳಬೇಕು, ಸಾಮಾನ್ಯವಾಗಿ ಸುಖ–ಭೋಗಾದಿ ವಿಷಯಾಭಿಲಾಷೆಗಳಲ್ಲಿ ಪ್ರವರ್ತಿಸುವ ಸ್ತ್ರೀಯನ್ನು ತಮ್ಮ ಅಂಕೆಯಲ್ಲಿ ಇರಿಸಿಕೊಳ್ಳಬೇಕು. (ಅ–9, ಶ್ಲೋ–2)

ಸ್ತ್ರೀಯನ್ನು ಬಾಲ್ಯದಲ್ಲಿ ತಂದೆಯು ರಕ್ಷಿಸುತ್ತಾನೆ, ಯೌವನದಲ್ಲಿ ಗಂಡನು ರಕ್ಷಿಸುತ್ತಾನೆ, ಮುಪ್ಪಿನಲ್ಲಿ ಮಕ್ಕಳು ರಕ್ಷಿಸುತ್ತಾರೆ, ಆದ್ದರಿಂದ ಸ್ತ್ರೀಯು ಸ್ವತಂತ್ರಳಾಗಿ ಇರಲು ಅರ್ಹಳಲ್ಲ. (ಅ–9, ಶ್ಲೋ–3)

ಸೂಕ್ಷ್ಮವಾದ ಪ್ರಸಂಗಗಳಿಂದ (ಜಾರತನ–ಅತ್ಯಾಚಾರ ಇತ್ಯಾದಿಗಳಿಂದ) ವಿಶೇಷವಾಗಿ ಸ್ತ್ರೀಯರನ್ನು ರಕ್ಷಿಸಬೇಕು. ಹಾಗೆ ಸ್ತ್ರೀಯರನ್ನು ಕಾಪಾಡದಿದ್ದರೆ ಅವರು ಹೆತ್ತಮನೆ ಹಾಗೂ ಕೊಟ್ಟಮನೆ ಎರಡಕ್ಕೂ ಕೆಟ್ಟ ಹೆಸರು ತರುತ್ತಾರೆ ಮತ್ತು ದುಃಖವನ್ನುಂಟು ಮಾಡುತ್ತಾರೆ.

(ಅ–9 ಶ್ಲೋ–5)

ತಮ್ಮ ತಮ್ಮ ಪತ್ನಿಯರ ಹಾಗೂ ತಮ್ಮ ಮನೆಯ ಹೆಣ್ಣು ಮಕ್ಕಳ ರಕ್ಷಣೆ ಮಾಡುವುದೇ ಎಲ್ಲಾ ಜಾತಿಯ ಜನರ ಪರಮಧರ್ಮವಾಗಿದೆ. ಗಂಡಂದಿರು ದುರ್ಬಲರಾಗಿದ್ದರೂ ಸಹ ತಮ್ಮ ಹೆಂಡಂದಿರ ರಕ್ಷಣೆಗೆ ಯತ್ನಿಸಬೇಕು. (ಅ–9, ಶ್ಲೋ–6)

ತನ್ನ ಪತ್ನಿಯನ್ನು ರಕ್ಷಿಸಬಲ್ಲವನು ತನ್ನ ಸಂತಾನವನ್ನು, ವಂಶಗೌರವವನ್ನು, ತನ್ನನ್ನು, ಸ್ವಧರ್ಮವನ್ನೂ ಎಲ್ಲವನ್ನೂ ರಕ್ಷಿಸಿಕೊಳ್ಳುತ್ತಾನೆ.

(ಅ–9, ಶ್ಲೋ–7)

ಯಾವ ತರಹದ ಪುರುಷನನ್ನು ಮನಸಾರೆ ವರಿಸಿ ಸ್ತ್ರೀಯು ಸೇವಿಸುವಳೋ ಅದೇ ತರಹದ ಪುತ್ರನನ್ನು ಪಡೆಯುತ್ತಾಳೆ. ಆದ್ದರಿಂದ ಶುದ್ಧವಾದ ಸಂತಾನವುಂಟಾಗಲಿ ಎಂಬ ಅಪೇಕ್ಷೆಯಿಂದ ಸ್ತ್ರೀಯ ಶೀಲವನ್ನು ಪ್ರಯತ್ನಪಟ್ಟು ಕಾಪಾಡಿಕೊಳ್ಳಬೇಕು. (ಅ–9, ಶ್ಲೋ–9)

ಪತಿಯು ತನ್ನ ಪತ್ನಿಯನ್ನು ಧನ–ದ್ರವ್ಯ ಸಂಚಯದ ಕಾರ್ಯದಲ್ಲಿ, ಕುಟುಂಬ ನಿರ್ವಹಣೆಯ ಹಾಗೂ ಖರ್ಚಿನ ಚಟುವಟಿಕೆಯಲ್ಲಿ, ಶೌಚವಿಧಿಗಳಲ್ಲಿ, ಅಡುಗೆ ಮಾಡುವಲ್ಲಿ, ಧರ್ಮಕಾರ್ಯದಲ್ಲಿ, ಗೃಹಪಾತ್ರೆಗಳ ಹಾಗೂ ಯಜ್ಞ ಪಾತ್ರೆಗಳನ್ನು ತೊಳೆದು ಶುದ್ಧಗೊಳಿಸುವಲ್ಲಿ ತೊಡಗಿಸಬೇಕು.(ಅ–9, ಶ್ಲೋ–11)

ನಂಬಿಗಸ್ಥ ಮತ್ತು ವಿಧೇಯ ಸೇವಕರ ಅಡಿಯಲ್ಲಿ ಮನೆಯಲಿರುವ ಸ್ತ್ರೀಯರು ಸುರಕ್ಷಿತವಾಗಿರುವದಿಲ್ಲ, ಆದರೆ ತಮ್ಮ ಆತ್ಮಧರ್ಮವೆಂದು ತಿಳಿದು ತಮ್ಮ ಪಾತಿವ್ರತ್ಯವನ್ನು ತಾವೇ ಕಾಪಾಡಿಕೊಳ್ಳುವ ಸ್ತ್ರೀಯರೇ ಸುರಕ್ಷಿತವಾಗಿರುತ್ತಾರೆ. (ಅ–9, ಶ್ಲೋ–12)

ಸ್ತ್ರೀಯರು ಪುರುಷರ ರೂಪ ಹಾಗೂ ವಯಸ್ಸುಗಳನ್ನು ಕುರಿತು ಹೆಚ್ಚು ವಿಚಾರಿಸಲು ಹೋಗುವುದಿಲ್ಲ. ಕುರೂಪಿಯಾಗಿರಲಿ, ಸುರೂಪಿಯಾಗಿರಲಿ ಪುರುಷನಾಗಿದ್ದರೆ ಸಾಕು, ತಮ್ಮನ್ನು ಅರ್ಪಿಸಿಕೊಳ್ಳುವರು (ಅ–9, ಶ್ಲೋ–14)

ಪುರುಷ ಸಂಗದ ಚಪಲದಿಂದ, ಮನಸ್ಸಿನ ಚಂಚಲತೆಯಿಂದ ಅಥವ ತಮ್ಮ ಸಹಜ ಹೃದಯಹೀನತೆಯಿಂದ ಅವರು ತಮ್ಮ ಗಂಡಂದಿರಿಗೆ ಎಷ್ಟೇ ಪ್ರಯತ್ನಪಟ್ಟು ರಕ್ಷಿಸಿದರೂ ಅವಿಧೇಯರಾಗುತ್ತಾರೆ (ಅ–9, ಶ್ಲೋ–15)

ಸೃಷ್ಟಿಕರ್ತನು ಅವರಲ್ಲಿಟ್ಟ ಸ್ವಭಾವವನ್ನು ಅರ್ಥ ಮಾಡಿಕೊಂಡು ಪುರುಷನು ಸ್ತ್ರೀ ರಕ್ಷಣೆಯನ್ನು ವಿಶೇಷವಾಗಿ ಪ್ರಯತ್ನಿಸತಕ್ಕದ್ದು. (ಅ–9, ಶ್ಲೋ–16)

ಶಯ್ಯೆ, ಆಸನ, ಅಲಂಕಾರ ಇವುಗಳ ಮೋಹ, ಕಾಮ, ಕ್ರೋಧ, ಅಪ್ರಾಮಾಣಿಕತೆ, ಪತಿದ್ರೋಹ ಮತ್ತು ದುರ್ನಡತೆ ಇವು ಸಾಮಾನ್ಯವಾಗಿ ಸ್ತ್ರೀಯರಲ್ಲಿರುವ ಸ್ವಾಭಾವಿಕ ಗುಣಗಳೆಂದು ಮನುವು ಹೇಳುತ್ತಾನೆ. (ಅ–9, ಶ್ಲೋ–17)

ಸ್ತ್ರೀಯರಿಗೆ ಮಂತ್ರಪೂರ್ವಕವಾದ ಧರ್ಮಸಂಸ್ಕಾರಗಳಿಲ್ಲ ಎಂದು ಶಾಸ್ತ್ರವು ಹೇಳುತ್ತದೆ. ಇಂದ್ರಿಯಗಳನ್ನು ನಿಗ್ರಹಿಸುವ ಮಂತ್ರಸಾಧನಗಳು ಸ್ತ್ರೀಯರಿಗೆ ಹೇಳಲ್ಪಟ್ಟಿಲ್ಲವಾದ್ದರಿಂದ ಅವರು ಅಶುದ್ಧರಾಗಿಯೇ ಇರುತ್ತಾರೆ ಎಂಬುದು ಧರ್ಮದ ವಿಚಾರವಾಗಿದೆ. (ಅ–9, ಶ್ಲೋ–18)

ಸಾವರ್ಕರ್ ಅವರು ತಮ್ಮ ಬದುಕಿನುದ್ದಕ್ಕೂ ಮನುವಿನ ಆದೇಶಗಳಿಗೆ ಬದ್ಧರಾಗಿಯೇ ಇದ್ದರು. 1940 ರಲ್ಲಿ ಮದುರಾದಲ್ಲಿ ನಡೆದ ಹಿಂದೂ ಮಹಾಸಭಾದ 22 ನೇ ಅಧಿವೇಶನದಲ್ಲಿ ಅಧ್ಯಕ್ಷೀಯ ಭಾಷಣದಲ್ಲಿ ಮನುವು ಹಿಂದೂಗಳಿಗೆ ನ್ಯಾಯ ಸಂಹಿತೆ ರಚಿಸುವವನು ಎಂಬ ಮಾತನ್ನು ಹೇಳುತ್ತಾ, ‘ಮನುವು ಬೋಧಿಸಿದ ಪೌರುಷಯುತ ಪಾಠಗಳನ್ನು ಮತ್ತೆ ಕಲಿತರೆ ಹಿಂದೂ ರಾಷ್ಟ್ರವು ಅಜೇಯವೆಂದು ಸಾಬೀತಾಗುತ್ತದೆ’ ಎಂಬ ಬಹು ಮುಖ್ಯವಾದ ಅಂಶವನ್ನು ಒತ್ತಿ ಹೇಳಿದರು. ಒಮ್ಮೆ ಮನುಪ್ರಣೀತ ನಿಯಮಗಳನ್ನು ಜಾರಿಮಾಡಿದರೆ ‘ನಮ್ಮ ಹಿಂದೂ ರಾಷ್ಟ್ರವನ್ನು ಅಜೇಯವೆಂದೂ ಹಾಗೂ ಒಂದು ಜನಾಂಗವನ್ನು ಗೆದ್ದಂತೆ’ ಎಂದು ಸಾವರ್ಕರ್ ಬಲವಾಗಿ ನಂಬಿದ್ದರು.

(ಮುಂದುವರೆಯುವುದು)

ಸಂಪಾದಕೀಯ

‘ನಂದಿನಿ’ ನಾಶ ಮಾಡಲು ಬಿಡಬಾರದು

ಕರ್ನಾಟಕದ ಲಕ್ಷಾಂತರ ಕೃಷಿಕ ಕುಟುಂಬಗಳ ಜೀವನಾಡಿಯಾಗಿರುವ ಕರ್ನಾಟಕ ಮಿಲ್ಕ್ ಫೆಡರೇಷನ್ (ಕೆ.ಎಂ.ಎಫ್)–ನಂದಿನಿಯ ಅಸ್ಮಿತತೆ ಮತ್ತು ಅಸ್ತಿತ್ವಕ್ಕೆ ಧಕ್ಕೆ ತರುವಂತೆ ಭಾರತ ಸರ್ಕಾರ ಹಾಗೂ ಕರ್ನಾಟಕದ ಸರ್ಕಾರಗಳು ಕ್ರಮ ವಹಿಸುತ್ತಿವೆಯೇ ಎಂಬ ಗಂಭೀರ ಪ್ರಶ್ನೆ ಎದುರಾಗಿದೆ. ಗುಜರಾತ್ ಮೂಲದ 'ಅಮುಲ್' ಸಂಸ್ಥೆಯ ಹಾಲು, ಮೊಸರು ಒಳಗೊಂಡು ಹಲವಾರು ಉತ್ಪನ್ನಗಳನ್ನು ಕರ್ನಾಟಕದಲ್ಲಿ ಮಾರಲು, ಅದರಲ್ಲೂ ಬಳಕೆದಾರರ ಮನೆ ಬಾಗಿಲಿಗೆ ತಲುಪಿಸಲು ಮುಂದಾಗಿರುವುದು ಜನತೆಯಲ್ಲಿ ಭಾರೀ ಆತಂಕವನ್ನು ಸೃಷ್ಟಿಸಿದೆ. ಮುಖ್ಯಮಂತ್ರಿ, ಸಚಿವರು ಹಾಗೂ ಬಿಜೆಪಿಯ ನಾಯಕರು ಪ್ರತಿಪಾದಿಸುವಂತೆ ಇದು ಸಹಜ ಮುಕ್ತ ಮಾರಾಟದ ಸ್ಪರ್ದೆಯ ವಿಷಯ ಅಲ್ಲ ಎಂಬುದು ಸ್ಪಷ್ಟ. ಮಾರುಕಟ್ಟೆಗೆ ಪ್ರವೇಶಿಸುತ್ತಿರುವ ಅಮುಲ್ ನೀಡುತ್ತಿರುವ ರಿಯಾಯಿತಿ ಕೊಡುಗೆಗಳ 'ಆಮಿಷ'ಗಳ ಆವೇಗವನ್ನು ಗಮನಿಸಿದರೆ ಸಾಕು ನಂದಿನಿಗೆ ಅದು ಕುತ್ತು ತರುವ ಅಪಾಯವೇ ಹೆಚ್ಚಿದೆ ಅನಿಸುತ್ತದೆ. ಮತ್ತು ಇದರ ಹಿಂದೆ ಕೇಂದ್ರ ಅರಕಾರವೇ ಟೊಂಕ ಕಟ್ಟಿ ನಿಂತಿರುವುದು ಶೋಚನೀಯ. ಅಧಿಕಾರದಲ್ಲಿರುವವರು ವಾದಿಸುತ್ತಿರುವ ಮತ್ತು ರಾಜ್ಯದ ರೈತ ಕೂಲಿಕಾರರ ಬದುಕಿನ ಹಿತ ಸಮರ್ಥಿಸುವವರ ಮೇಲೆ ಬಿಜೆಪಿ ನಾಯಕರು ನಡೆಸುತ್ತಿರುವ ಮಾತುಗಳು ಧಾಳಿಯ ಸ್ವರೂಪದಲ್ಲಿವೆ. ಎಲ್ಲೆಡೆಗಳಲ್ಲಿ ರಾಜ್ಯಗಳ ಸ್ವಾಯತ್ತತೆ ನಾಶ ಮಾಡಿ, ದಿವಾಳಿಯೆಬ್ಬಿಸಿ ಏಕಸ್ವಾಮ್ಯವನ್ನು ಸ್ಥಾಪಿಸಲು ಹವಣಿಸುತ್ತಿರುವ ಮೊ–ಶಾ ರವರ ನಡೆಗಳನ್ನು ಸಮರ್ಥಿಸುತ್ತಿರುವ ರಾಜ್ಯ ಬಿಜೆಪಿ ಪ್ರಮುಖರ ನಡೆ ಗುಲಾಮಿತನದ್ದಾಗಿದೆ. ಕನಿಷ್ಠ ರಾಜ್ಯದ ಬಗೆಗೆ ಅಭಿಮಾನವು ಇಲ್ಲದ ವರ್ತನೆ ಉಗ್ರ ಖಂಡನೀಯ, ನಾಚಕೆಗೇಡಿನದ್ದಾಗಿದೆ.

ಕರ್ನಾಟಕದಲ್ಲಿ ಹೈನುಗಾರಿಕೆ ಎನ್ನುವುದು ನಿತ್ಯ ಅನ್ನದ, ಮಕ್ಕಳ ವಿದ್ಯಾಭ್ಯಾಸದ, ಆರೋಗ್ಯದ ಶಕ್ತಿ. ಹಲವು ದಶಕಗಳ ಪರಿಶ್ರಮದಿಂದ ಸಹಕಾರಿ ಕ್ಷೇತ್ರದಲ್ಲಿ ಬಹು ವಿಸ್ತಾರವಾದ ಜಾಲವೂ ಸುಸಂಘಟಿತವಾಗಿ ನಿರ್ಮಾಣವಾಗಿದೆ. ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ನೆರವಾಗಿದೆ. ಇಂದು 16 ಜಿಲ್ಲೆಗಳಲ್ಲಿನ ಹಾಲು ಉತ್ಪಾದಕರ ಒಕ್ಕೂಟದಲ್ಲಿ 15043 ಸಹಕಾರಿ ಸಂಘಗಳಿವೆ. ಇವು 26.38 ಲಕ್ಷ ಹಾಲು ಉತ್ಪಾದಕರಿದ್ದಾರೆ. ಇವು ಉತ್ತಮ ಮೂಲ ಸೌಕರ್ಯಗಳನ್ನು ಹೊಂದಿ ಲಾಭದಾಯಕವಾಗಿಯೂ ಕಾರ್ಯನಿರ್ವಹಿಸುತ್ತಾ ಗ್ರಾಮೀಣ ಆರ್ಥಿಕತೆಗೆ ಚೈತನ್ಯ ನೀಡಿವೆ. ಕೆ.ಎಂ.ಎಫ್.–ನಂದಿನಿ ಬ್ರಾಂಡ್ ಗುಣಮಟ್ಟವನ್ನು ಕಾಪಾಡಿಕೊಂಡು ವಿಶ್ವಾಸಾರ್ಹತೆಯ ಮೂಲಕ ಮೆಚ್ಚುಗೆ, ಪ್ರಗತಿಯನ್ನು ಕಾಯ್ದುಕೊಂಡಿದೆ. ಇದರ ವಹಿವಾಟು ಸಾವಿರಾರು ಕೋಟಿಗಳು.(49 ಬಿಲಿಯನ್ ರೂ.ಗಳು) ಇಂತಹ ಕಾಮಧೇನುವಿನ ಮೇಲೆ ನಾಯಕರಿಗೆ ಅಭಿಮಾನವಿರಬೇಕಿತ್ತು. ಆದರೆ ಅದರ ಮೇಲೆ ಗುಜರಾತ್ ಉದ್ಯಮಿಗಳ, ರಾಷ್ಟ್ರ ನಾಯಕರ ವಕ್ರಕಣ್ಣು ಬಿದ್ದು ಹತಗೊಳಿಸಲು ಮುಂದಾಗಿರುವುದು ದುರಂತ.

ಕಳೆದ ಕೆಲವು ತಿಂಗಳುಗಳ ಹಿಂದೆ ಮಂಡ್ಯಕ್ಕೆ ಬಂದಿದ್ದ ಸಹಕಾರಿ ಸಚಿವರೂ ಆಗಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾರವರು 'ನಂದಿನಿಯನ್ನು ಗುಜರಾತ್ ನ 'ಅಮುಲ್' ನೊಂದಿಗೆ ವಿಲೀನಗೊಳಿಸುವ ಮಾತನ್ನಾಡಿದ್ದರು. ನಷ್ಟದಲ್ಲಿರುವ ಅದರೊಂದಿಗೆ ಕೆ.ಎಂ.ಎಫ್.ನೊಂದಿಗೆ ವಿಲೀನಗೊಳಿಸುವ ಪ್ರಸ್ತಾಪವು ಸಾರ್ವಜನಿಕರ ಆಕ್ರೋಶಕ್ಕೂ ಕಾರಣವಾಗಿತ್ತು. ಅದನ್ನು ಮರೆಸಲು ಯತ್ನಿಸಲಾಯಿತಾದರೂ ಆ ದುಷ್ಟ ಯೋಚನೆ ನಿಂತಿರಲಿಲ್ಲ ಎಂಬುದು ಇದೀಗ ಮತ್ತಷ್ಟು ಬಯಲಾಗಿದೆ. ಕೆಲವೇ ದಿನಗಳ ಹಿಂದೆ ಮತ್ತೇ ಅಮಿತ್ ಶಾ ವಿಲೀನದ ಮಾತನ್ನಾಡಿ ಇದರಿಂದ ರೈತರಿಗೆ ಅನುಕೂಲ ಆಗಲಿದೆ ಎಂದಿದ್ದರು.

ಇತ್ತೀಚೆಗೆ ಕೆ.ಎಂ.ಎಫ್. ಹಾಲು ಉತ್ಪಾದನೆಯಲ್ಲಿ ಭಾರೀ ಕುಸಿತ ಕಂಡಿದೆ ಎನ್ನುವ ವರದಿಗಳು ಬರುತ್ತಲೇ ಇದ್ದವು. ಇದಕ್ಕೆ ಕಾರಣ ಏನು, ಅಡಗಿದ್ದ ಉದ್ದೇಶ ಏನು ಎಂಬುದು ಇದೀಗ ಗೋಚರಿಸುತ್ತಿದೆ. ಕುಸಿತ ಇದೆ ಎಂಬ ಸಂಗತಿಯ ಹಿಂದೆ ಸರಕಾರದ ಗೋಹತ್ಯಾ ನಿಷೇಧದ ಕಾಯ್ದೆಯ ಜಾರಿಯೂ ಒಂದು ಪ್ರಮುಖ ಅಂಶ ಎನ್ನುವುದನ್ನು, ಇಂತಹ ಕಾಯ್ದೆ ಕೇವಲ ಕೋಮು ಧೃವೀಕರಣ ಮಾತ್ರವಲ್ಲ ಇಂತಹ ದುಷ್ಟ ಆರ್ಥಿಕ ಹಿತಾಸಕ್ತಿಗಳಿರುತ್ತವೆ ಎನ್ನುವುದನ್ನು ಗಮನಿಸಬೇಕು. ಇದರೊಟ್ಟಿಗೆ ಇಂತಹ ಕುಸಿತಕ್ಕೆ ಇಲ್ಲಿನ ಆಡಳಿತ ಮಂಡಳಿ, ಉನ್ನತ ಅಧಿಕಾರಿಗಳ ಶಾಮೀಲುತನ ಇಲ್ಲದೇ ಸಾಧ್ಯವೇ? ಇದರ ಹಿಂದೆ ಇರುವ ಕೈಗಳು ಯಾವುವು ಎನ್ನುವುದಕ್ಕೆ ಆಳ ತನಿಖೆಯ ಅಗತ್ಯವಿಲ್ಲ. ಹೊರ ನೋಟದಲ್ಲೆ ವಾಸ್ತವ ಕಾಣಬಲ್ಲದು.

ನಂದಿನಿಯನ್ನು ಅಮೂಲ್ ಗೆ ವಿಲೀನ ಮಾಡುವಲ್ಲಿ ಕೇಂದ್ರ ಸರಕಾರದ ಥರಡ ಪ್ರಯತ್ನಗಳಿವೆ. ಅಮುಲ್ ಮಾರುಕಟ್ಟೆ ಪ್ರವೇಶಿಸುವ ಮೊದಲು ನಂದಿನ ಮೊಸರಿನ ಮೇಲೆ 'ದಹಿ' ಎಂದು ಮುದ್ರಿಸಬೇಕೆಂಬ ಆದೇಶ ಹೊರಡಿಸಲಾಗಿತ್ತು. ಇದು ಅಮುಲ್ ಪಾಕೆಟ್ ನ್ನು ಒಪ್ಪಿಕೊಳ್ಳಲು, ವಿಲೀನಗೊಳಿಸಲು ನಡೆಸಲಾದ ಮತ್ತೊಂದು ಹಂತದ ಪ್ರಯತ್ನ. ಜನತೆಯ ಪ್ರಬಲ ಪ್ರತಿರೋಧದಿಂದ ಆದೇಶವನ್ನು ಹಿಂಪಡೆಯಲಾಗಿತ್ತು. ಇದೀಗ ನೇರ ಮಾರುಕಟ್ಟೆಗೆ ಮುಕ್ತವಾಗಿ ಪ್ರವೇಶಿಸಿ ನಂದಿನಿ ಕೊನೆ ಉಸಿರೆಳೆಯುವಂತೆ ಮಾಡಲಾಗುತ್ತಿದೆ.

ಈಗಾಗಲೇ ಕೇಂದ್ರ ಸರಕಾರ ಕರ್ನಾಟಕದ ಹೆಮ್ಮೆಯಾಗಿದ್ದ , ಅಸ್ಮಿತತೆಯೂ ಆಗಿದ್ದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು ವಿಲೀನ ಮಾಡಿ ಅದನ್ನು ಕಣ್ಮರೆಯಾಗುವಂತೆ ಮಾಡಲಾಯಿತು.ಹಾಗೇ ಕನ್ನಡ ನಾಡಿನ ಇತರೆ ಬ್ಯಾಂಕ್ ಗಳನ್ನು ನಷ್ಟದಲ್ಲಿರುವ ಉತ್ತರದ, ಗುಜರಾತಿನ ಬ್ಯಾಂಕ್ ಗಳೊಂದಿಗೆ ವಿಲೀನ ಮಾಡಿ ಆಯ್ತು. ಹೀಗೆ ಒಂದೊಂದಾಗಿ ರಾಜ್ಯಗಳ ಹೆಮ್ಮೆಯ ಸಂಸ್ಥೆಗಳನ್ನು ನುಂಗುವ, ವಿಶಿಷ್ಟತೆಗನ್ನು ಹೊಸಕಿ ಹಾಕುವ, ಏಕಸ್ವಾಮ್ಯ ಸರ್ವಾಧಿಕಾರದ ಕುತಂತ್ರಗಳು ಒಂದೊಂದಾಗಿ ಜಾರಿಯಾಗುತ್ತಲೇ ಇವೆ. ಇಂತಹ ವಂಚನೆ, ಮೋಸ, ಲೂಟಿಗಳು 'ಹಿಂದುತ್ವ' ದ ಅಬ್ಬರದಲ್ಲಿ ಮರೆಯಾಗುತ್ತಿವೆ. ಮೂಲತಃ ನಮ್ಮ ಸಂವಿಧಾನದ ಒಕ್ಕೂಟ ವ್ಯವಸ್ಥೆಯನ್ನು ಕಳಚಿ ಹಾಕಿ ಕೇಂದ್ರದ ಏಕಸ್ವಾಮ್ಯ ಸರ್ವಾಧಿಕಾರಿ ಆಡಳಿತವನ್ನು ಹೇರುವುದು ಮುಖ್ಯ ಉದ್ದೇಶವಾಗಿದೆ. ರಾಜ್ಯಗಳ ಆರ್ಥಿಕತೆಯನ್ನು, ಸಂಪನ್ಮೂಲಗಳನ್ನುಅದಾನಿ, ಅಂಬಾನಿಯಂತಹ ಗುಜರಾತ್ ಮುಂತಾದ ಏಕಸ್ವಾಮ್ಯ ಬಂಡವಾಳಗಾರರಿಗೆ ಒಪ್ಪಿಸುವ ಕ್ರೂರ ಧ್ಯೇಯವನ್ನು ಬಿಜೆಪಿ ಸರಕಾರ ಹೊಂದಿದೆ. ಮಾತ್ರವಲ್ಲ, ಅದು ಹೇಳುವ ಒಂದು ದೇಶ, ಒಂದು ಭಾಷೆ, ಒಬ್ಬ ನಾಯಕ, ಒಂದೇ ಕಂಪನಿ ಯತ್ತ ಸಾಗುವ ಉದ್ದೇಶವಿದೆ. ಆ ಕಾರಣದಿಂದ ರಾಜ್ಯದ ವಿಧಾನಸಭಾ ಚುನಾವಣೆಗಳಲ್ಲಿ ಹೇಗಾದರೂ ಮಾಡಿ ಅಧಿಕಾರ ಹಿಡಿದರೆ ಈ ಉದ್ದೇಶದ ಸಾಧನೆ ಸುಗಮ ಎಂದು ಭಾವಿಸಿ ಇನ್ನಿಲ್ಲದ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಜನತೆ ಈ ಎಲ್ಲಾ ಷಡ್ಯಂತ್ರಗಳನ್ನುಅರ್ಥ ಮಾಡಿಕೊಳ್ಳ ಬೇಕು. ಎದುರಿಸಬೇಕು. ಅಮುಲ್ ನ್ನು ಒಳ ನುಗ್ಗಿಸುವುದನ್ನು, ನಂದಿನಿಯನ್ನು ನಾಶ ಮಾಡುವ ಕ್ರಮಗಳನ್ನು ಕೂಡಲೇ ಕೈ ಬಿಡಬೇಕು. ಇಲ್ಲವಾದರೆ ಈಗಾಗಲೇ ಬಿಕ್ಕಟ್ಟಿನಲ್ಲಿರುವ, ವಿನಾಶದ ಅಂಚಿಗೆ ನಿಂತಿರುವ ಗ್ರಾಮೀಣ ವ್ಯವಸ್ಥೆ ಮತ್ತಷ್ಟೂ ಶೋಚನೀಯವಾಗಿ ಕುಸಿಯಲಿದೆ. ಬದುಕಿಗೇ ಸಂಚಕಾರ ತರಲಿದೆ. ಮುಂದೆ ಇರುವುದು ಅಚ್ಛೆ ದಿನಗಳಲ್ಲ, ಕರಾಳ ದಿನಗಳು.

ಕಲಾವಿದರ ಮೊರೆಹೋದ ಕಮಲದ ಪಕ್ಷ


ನಿತ್ಯಾನಂದಸ್ವಾಮಿ

ಕರ್ನಾಟಕದ ಕಮಲದ ಪಕ್ಷ ಧೃತಿಗೇಡುತ್ತಿರುವಂತೆ ಕಾಣುತ್ತಿದೆ. ಅದರ ಅಖಿಲ ಭಾರತ ಮಟ್ಟದ ಹಿರಿಯ ನಾಯಕರು ಭಾಗವಹಿಸುತ್ತಿರುವ ಸಾರ್ವಜನಿಕ ಸಭೆಗಳು ಜನರನ್ನು ಆಕರ್ಷಿಸಲು ವಿಫಲವಾಗುತ್ತಿವೆ. ಬೃಹತ್ ವೇದಿಕೆಗಳು, ಹಾರಾಡುವ ಅಸಂಖ್ಯಾತ ಬಾವುಟಗಳು, ಜನರನ್ನು ಕರೆತರಲು ಸಜ್ಜುಗೊಳಿಸಲಾಗುವ ಅಸಂಖ್ಯಾತ ಚಿಕ್ಕ, ದೊಡ್ಡ ವಾಹನಗಳು, ನೂರಾರು ಬಾಣಸಿಗರಿಂದ ಸಿದ್ಧವಾಗುವ ವೈವಿಧ್ಯಮಯವಾದ ಭಕ್ಷ್ಯಗಳು ಇತ್ತೀಚಿಗೆ ಮತದಾರರನ್ನು ಕರೆತರುವಲ್ಲಿ ಮಾತ್ರ ವಿಫಲವಾಗುತ್ತಿರುವುದು ಕಮಲದ ನಾಯಕರನ್ನು ಚಿಂತೆಗೀಡುಮಾಡಿದೆ ಎಂದು ಪಕ್ಷದೊಳಗೆ ಗಂಭೀರ ಚರ್ಚೆಗೆ ಎಡೆಮಾಡಿದೆ ಎಂದು ಕೇಳಿ ಬರುತ್ತದೆ. ಆದ್ದರಿಂದಲೇ ಪ್ರಧಾನ ಪ್ರಚಾರಕರಾಗಿ ಚಲನಚಿತ್ರ ನಟರನ್ನು ಕರೆ ತರುವ ಪ್ರಯತ್ನ ನಡೆದಿದೆ. ಚಿತ್ರನಟರು ಯಾವುದೇ ರಾಜಕೀಯ ಪಕ್ಷವನ್ನು ಸೇರುವುದು ಅಪರೂಪ. ಆದರೆ ಅವರಿಗೆ ವಿವಿಧ ಸಮುದಾಯಗಳಲ್ಲಿ ಅಭಿಮಾನಿ ಬಳಗ ಇದ್ದೇ ಇರುತ್ತದೆ. ಚುನಾವಣೆಗಳಲ್ಲಿ ಅವುಗಳನ್ನು ಮತಬ್ಯಾಂಕ್ ಆಗಿ ಪರಿವರ್ತನೆಯಾಗುವ ಸಾಧ್ಯತೆಗಳೂ ಇರುತ್ತವೆ. ಆದರೆ ಕರ್ನಾಟಕದಲ್ಲಿ ಬಿಜೆಪಿಯಂತಹ ಪಕ್ಷ ಇಂದು ಸಿನೆಮಾ ನಟರನ್ನು ಮತ ಪಡೆಯಲು ಅವಲಂಬಿಸುವ ಪರಿಸ್ಥಿತಿ ಬಂದಿರುವುದು ಶೋಚನೀಯ ಸಂಗತಿಯಾಗಿದೆ. ಆದರೆ ರಾಜ್ಯದಲ್ಲಿ ಸ್ವತಂತ್ರವಾಗಿ ಅಧಿಕಾರಕ್ಕೆ ಬರುವ ಅದರ ಲೆಕ್ಕಾಚಾರ ನನಸಾಗಲಾಗದ ಕನಸೇ ಸರಿ. ಕರ್ನಾಟಕದಲ್ಲಿ ಕೆಲವು ಚಿತ್ರ ನಟರಿಗೆ ಬಲವಾದ ಚಿತ್ರ ಬಣ ಇದೆ. ಅವರನ್ನು ಜನ ಆರಾಧಿಸುತ್ತಾರೆ. ಅವರ ಅಭಿನಯದ ಚಿತ್ರಗಳು ತುಂಬಿದ ಸಿನೆಮಾ ಮಂದಿರಗಳಲ್ಲಿ ಇಂದಿಗೂ ಪ್ರದರ್ಶಿಸಲ್ಪಡುತ್ತವೆ. ಆದರೆ ಅವರ್‍ಯಾರಿಗೂ ಮತಬ್ಯಾಂಕ್ ಎಂಬುವುದಿಲ್ಲ. ಅವರು ಯಾವುದಾದರೊಂದು ರಾಜಕೀಯ ಪಕ್ಷವನ್ನೇ ಅವಲಂಬಿಸಬೇಕಾಗುತ್ತದೆ. ಅವರು ತಮ್ಮ ಸಿನಿಮಾಗಳಿಗೆ ಜನಸಾಗರವನ್ನು ಆಕರ್ಷಿಸಬಹುದೇ ಹೊರತು ಮತದಾರರನ್ನಲ್ಲ. ರಾಜ್ಯದ ಭವಿಷ್ಯವನ್ನು ಜನತೆ ನಿರ್ಧರಿಸುತ್ತದೆಯೇ ಹೊರತು ಚಿತ್ರನಟರಲ್ಲ. ರಾಜಕೀಯ ಪಕ್ಷ ನುಡಿದಂತೆ ನಡೆಯುತ್ತಿದೆಯೇ ಎಂಬುದು ಮುಖ್ಯವಾಗುತ್ತದೆ. ಅಭಿಮಾನಿಗಳು ತಮ್ಮ ಸಿನೆಮಾ ನಾಯಕರನ್ನು ನೋಡಲು ಸಾರ್ವಜನಿಕ ರ್‍ಯಾಲಿಗಳಲ್ಲಿ ಕಿಕ್ಕಿರಿದು ಸೇರಬಹುದು. ತಮ್ಮ ನಾಯಕನನ್ನು ಹಾಡಿ ಹೊಗಳಬಹುದು.

ಆದರೆ ಮತದಾನ ಮಾಡುವಾಗ ಪಕ್ಷಗಳು ಜನರ ಮುಂದಿಡುವ ರಾಜಕೀಯ ವಿಚಾರಗಳೇ ಮುಖ್ಯವಾಗುತ್ತದೆ. ದುಡ್ಡು ಗಳಿಸುವುದೇ ಆತನ ಅಂತರಾಳದ ಉದ್ದೇಶವಾಗಿದ್ದರೆ ಜನ ಅದನ್ನು ಗುರುತಿಸದೆ ಇರಲಾರರು. ಯಾರು ಯಾರಿಗಾಗಿ ಪ್ರಚಾರ ಮಾಡಿದರು ಎಂಬುವುದು ಮುಖ್ಯವಾಗದು. ಮತ ಗೆಲ್ಲುವುದು ಕೇವಲ ಅಧಿಕಾರ ಪಡೆಯುವುದಕ್ಕಾಗಿಯಾದರೆ, ಅಧಿಕಾರ ಪಡೆಯುವುದು ಕೇವಲ ಸ್ವಾರ್ಥ ಸಾಧನೆಗಾಗಿಯಾದರೆ ಯಾವ ನಾಯಕನೂ ಜನರ ಮನಸ್ಸಿನಲ್ಲಿ ಬಹುದಿನ ಉಳಿಯಲಾರ.

ಇತ್ತೀಚೆಗೆ ನಮ್ಮನ್ನು ಅಕಾಲಿಕವಾಗಿ ಅಗಲಿದ ಯುವ ಚಿತ್ರನಟ ಪುನೀತ್ ರಾಜ್‌ಕುಮಾರ್ ಜನ–ಮನದಲ್ಲಿ ಶಾಶ್ವತವಾಗಿ ಉಳಿಯುವ ಚಿತ್ರನಟ. ಅವನೊಬ್ಬ ಅಪ್ರತಿಮ ಸಿನೆಮಾ ನಟನಾಗಿದ್ದ ಮಾತ್ರವಲ್ಲ, ಅವನೊಬ್ಬ ಅತ್ಯುತ್ತಮ ಮನುಷ್ಯನಾಗಿದ್ದ, ಅವನಿಗಾಗಿ ಜನ ಇನ್ನೂ ಅಳುತ್ತಾರೆ. ರಾಜಕಾರಣದಲ್ಲಿ ಯಾರು ಯಾರ ಪರ ನಿಲ್ಲುತ್ತಾರೆ., ಯಾರು ಯಾರನ್ನು ಬೆಂಬಲಿಸುತ್ತಾರೆ ಎಂಬುದು ಅಷ್ಟೇ ಮುಖ್ಯವಾಗಿದೆ. ಒಬ್ಬನಿಗಾಗಿ, ಒಂದು ರಾಜಕೀಯ ಪಕ್ಷಕ್ಕಾಗಿ ಪ್ರಚಾರ ಮಾಡಿ ನಿರ್ಲಿಪ್ತರಾಗಿರಲು ಸಾಧ್ಯವಿಲ್ಲ. ಚುನಾವಣೆಯಲ್ಲಿ ನಾನು ಪ್ರಚಾರ ಮಾಡುವ ವ್ಯಕ್ತಿ ಅಥವ ಪಕ್ಷದ ಧೋರಣೆಗಳನ್ನು ಬೆಂಬಲಿಸದೆ ಇರಲು ಸಾಧ್ಯವಿಲ್ಲ. ಆದ್ದರಿಂದಲೇ ಒಬ್ಬರಿಗಾಗಿ ಪ್ರಚಾರ ಮಾಡುವವನು ನಿರ್ಲಪ್ತನಾಗಿರಲು ಸಾಧ್ಯವಾಗದು. ನಾನು ಒಬ್ಬ ಒಳ್ಳೆಯ ವ್ಯಕ್ತಿಯನ್ನು ಅಥವ ಪಕ್ಷವನ್ನು ಬೆಂಬಲಿಸಿದರೆ ಆ ವ್ಯಕ್ತಿ ಅಥವ ಪಕ್ಷದ ಒಳ್ಳೆಯ ಜನಪರ ಧೋರಣೆಗಳನ್ನು ನಾನು ಬೆಂಬಲಿಸಿದಂತಾಗುತ್ತದೆ. ನಾನು ಒಂದು ಪಕ್ಷದ ಪ್ರಚಾರಕ್ಕೆ ಮುಂದಾದರೆ ಅದರ ಒಳ್ಳೆಯ ಹಾಗೂ ಕೆಟ್ಟ ಧೋರಣೆಗಳಿಗೆ ಬದ್ಧನಾಗುತ್ತೇನೆ ಎಂಬುದನ್ನು ಮರೆಯಲಾಗದು. ಒಂದು ರಾಜಕೀಯ ಪಕ್ಷದ ಪ್ರಚಾರಕ್ಕೆ ಹೊರಡುವ ಮುನ್ನ ನಾನು ಪ್ರಚಾರ ಮಾಡುವ ಪಕ್ಷ ಪ್ರತಿಪಾದಿಸುವ ಸಿದ್ಧಾಂತ ಜನಪರವಾಗಿದೆಯೋ ಇಲ್ಲವೆ ಜನ ವಿರೋಧಿಯಾಗಿದೆಯೋ ಎಂಬುದನ್ನು ಖಚಿತ ಪಡಿಸಿಕೊಳ್ಳದೆ ಇರಬಾರದು.

ಚಿತ್ರ ತಾರೆಯರೂ ನಾಗರಿಕರು, ಪ್ರಜಾಪ್ರಭುತ್ವದಲ್ಲಿ ಅವರಿಗೂ ಚುನಾವಣೆಯಲ್ಲಿ ಸ್ಪರ್ಧಿಸುವ, ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡುವ ಹಕ್ಕಿದೆ. ತಮಗೆ ಒಪ್ಪಿಗೆ ಇರುವ ರಾಜಕೀಯ ಪಕ್ಷವನ್ನು ಅವರು ಬೆಂಬಲಿಸಬಹುದು ಹಾಗೂ ಪ್ರಚಾರ ಮಾಡಬಹುದು. ಅವರ ಈ ರಾಜಕೀಯ ಹಕ್ಕನ್ನು ಯಾರು ಕಿತ್ತುಕೊಳ್ಳಲಾರರು. ಆದರೆ ಒಂದು ರಾಜಕೀಯ ಪಕ್ಷವು ಚಲನಚಿತ್ರ ತಾರೆಯರನ್ನು ಹೆಚ್ಚೆಚ್ಚು ಅವಲಂಭಿಸುತ್ತಿರುವುದು ಆ ಪಕ್ಷದ ಬಲಹೀನತೆಯನ್ನಷ್ಟೇ ತೋರಿಸುತ್ತದೆ. ಒಂದು ಜನಪರ ರಾಜಕೀಯ ಪಕ್ಷ ತನ್ನ ಜನಪರ ನಿಲುಮೆಯಿಂದ ಗುರುತಿಸಲ್ಪಡಬೇಕೇ ಹೊರತು ಅದು ಚುನಾವಣಾ ಪ್ರಚಾರಕ್ಕಾಗಿ ಬಳಸಿಕೊಳ್ಳುವ ಸ್ಟಾರ್ ಕ್ಯಾಂಪೈನರ್‌ಗಳ ಮೇಲೆ ಆಗಿರಬಾರದು. ಚಿತ್ರ ತಾರೆಯರ ಮೇಲಿನ ಈ ಅವಲಂಭನೆ ಆಯಾ ಪಕ್ಷದ ಬಲಹೀನತೆಗೇ ಸಾಕ್ಷಿಯಾಗಲಿದೆ. ಒಂದು ಜನಪರವಾದ ರಾಜಕೀಯ ಪಕ್ಷ ಜನರನ್ನು ಒಂದುಗೂಡಿಸುತ್ತದೆಯೇ ಹೊರತು ಅವರನ್ನು ಮತ ಧರ್ಮದ ಆಧಾರದಲ್ಲಿ, ಜಾತಿ ಜನಾಂಗದ ಆಧಾರದಲ್ಲಿ ಒಡೆದು ಅದರ ಚುನಾವಣಾ ಲಾಭ ಪಡೆಯಲು ಹವಣಿಸುವುದಿಲ್ಲ. ಜಾತಿ ಆಧಾರದಲ್ಲಿ, ಮತ ಧರ್ಮದ ಆಧಾರದಲ್ಲಿ ಚುನಾವಣಾ ಲಾಭ ಪಡೆಯಲು ಪ್ರಯತ್ನಿಸುತ್ತಿರುವುದು ಆದರ್ಶ ರಾಜಕಾರಣ ಅಲ್ಲವೇ ಅಲ್ಲ. ಅದು ಕೇವಲ ಅಧಿಕಾರದ ಏಣಿ ಏರುವ ಸಮಯ ಸಾಧಕ ಮಾರ್ಗ ಆಗಬಹುದಷ್ಟೇ.



ಕೃಪೆ: ಪಿ.ಮಹಮ್ಮದ್, ವಾ.ಭಾ.

ಏಪ್ರಿಲ್ 15 ರಂದು ಬಾಗೇಪಲ್ಲಿ ನಾಮಪತ್ರ ಸಲ್ಲಿಕೆ

2023 ಏಪ್ರಿಲ್ 15ರಂದು ಬಾಗೇಪಲ್ಲಿಯಲ್ಲಿ ಸಿಪಿಐ(ಎಂ) ಅಭ್ಯರ್ಥಿ ಕಾಮ್ರೇಡ್ ಡಾ.ಎ.ಅನಿಲ್ ಕುಮಾರ್ ನಾಮಪತ್ರ ಸಲ್ಲಿಸಲಿದ್ದಾರೆ. ಬಳಿಕ ಬೃಹತ್ ಬಹಿರಂಗ ಸಭೆ ನಡೆಯಲಿದೆ. ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಸೀತರಾಮ್ ಯೆಚೂರಿಯವರು ಅಲ್ಲದೇ ರಾಜ್ಯ ನಾಯಕರು ಮಾತನಾಡಲಿದ್ದಾರೆ. ಜನತೆ ಭಾಗವಹಿಸಲು ಕೋರಲಾಗಿದೆ.

ನರೇಂದ್ರ ನಾಯಕ್‌ರವರಿಗೆ ಪೊಲೀಸ್ ಭದ್ರತೆ ಮುಂದುವರಿಸಲು ಆಗ್ರಹ

ವರದಿ: ವಾ.ಉಚ್ಚಿಲ್

ಅಖಿಲ ಭಾರತ ವಿಚಾರವಾದಿ ವೇದಿಕೆಯ ರಾಷ್ಟ್ರೀಯ ಅಧ್ಯಕ್ಷ ವಿಚಾರವಾದಿ ಪ್ರೊ. ನರೇಂದ್ರ ನಾಯಕ್ ಅವರಿಗೆ ಪೊಲೀಸ್ ಭದ್ರತೆ ಮುಂದುವರಿಸಲು ಆಗ್ರಹಿಸಿ ಸಮಾನ ಮನಸ್ಕ ಸಂಘಟನೆಗಳ ಪ್ರಮುಖರು ಮಂಗಳೂರು ನಗರ ಪೊಲೀಸ್ ಆಯುಕ್ತರನ್ನು ಎಪ್ರಿಲ್ 3 ರಂದು ಭೇಟಿಯಾಗಿ ಮನವಿ ಸಲ್ಲಿಸಿದ್ದಾರೆ.

ವೈಜ್ಞಾನಿಕ ಮನೋಭಾವ, ಜಾತ್ಯಾತೀತ ತಿಳುವಳಿಕೆಗಳನ್ನು ಸಮಾಜದಲ್ಲಿ ಮೂಡಿಸುವ ಕಾರಣಕ್ಕೆ ಪ್ರತಿಗಾಮಿ ಶಕ್ತಿಗಳಿಂದ ಹಲವು ಬಾರಿ ನರೇಂದ್ರ ನಾಯಕ್ ದಾಳಿಗಳಿಗೆ ಗುರಿಯಾಗಿದ್ದಾರೆ. ಅಲ್ಲದೆ ಸಮಾಜದಲ್ಲಿ ವೈಜ್ಞಾನಿಕ ಮನೋಭಾವನೆ ಮೂಡಿಸುವ ಕಾರಣಕ್ಕೆ ಬಲಫಂಥೀಯ ಶಕ್ತಿಗಳಿಂದ ಕೊಲೆಗೀಡಾದ ನರೇಂದ್ರ ದಾಬೋಳ್ಕರ್, ಗೋವಿಂದ ಪನ್ಸಾರೆಯವರು ಪ್ರೊ. ನರೇಂದ್ರ ನಾಯಕ್ ಸಹವರ್ತಿಗಳಾಗಿದ್ದರು. ರಾಜ್ಯದಲ್ಲಿ ಪ್ರೊ. ಕಲ್ಬುರ್ಗಿ, ಗೌರಿ ಲಂಕೇಶ್ ಕೊಲೆಯ ನಂತರ ಪ್ರೊ. ನರೇಂದ್ರ ನಾಯಕ್‌ರ ಜೀವಕ್ಕೆ ಅಪಾಯ ಇರುವುದು ಸರ್ಕಾರದ ಗಮನಕ್ಕೆ ಬಂದು ಅವರಿಗೆ ಪೊಲೀಸ್ ಭದ್ರತೆ ಒಗದಿಸಲಾಗಿತ್ತು. ಈಗ ಏಕಾಏಕಿ ಭದ್ರತೆಯನ್ನು ಹಿಂಪಡೆದಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಪ್ರೊ. ನಾಯಕ್ ಈಗಲೂ ವೈಜ್ಞಾನಿಕ ಮನೋಭಾವ ಮೂಡಿಸುವ ಕಾರ್ಯದಲ್ಲಿ ಸಕ್ರಿಯರಾಗಿದ್ದಾರೆ. ಅದಲ್ಲದೆ ಸ್ಥಳೀಯವಾಗಿ ಹಲವು ಸ್ಥಾಪಿತ ಹಿತಾಸಕ್ತಿಗಳ ವಿರುದ್ಧದ ಹೋರಾಟದಲ್ಲಿ ತೊಡಗಿಸಿಕೊಂಡಿರುತ್ತಾರೆ. ಮಾಹಿತಿ ಹಕ್ಕು



ಕಾರ್ಯಕರ್ತ ವಿನಾಯಕ ಬಾಳಿಗಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಅವರ ಅಸಹಾಯಕ ಕುಟುಂಬಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಆ ಕಾರಣಕ್ಕೂ ಬೆದರಿಕೆಗಳನ್ನು ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅವರಿಗೆ ನೀಡಿದ್ದ ಪೊಲೀಸ್ ಭದ್ರತೆ ವಾಪಾಸ್ ಪಡೆದಿರುವುದು ಸರಿಯಾದ ನಿರ್ಧಾರ ಅಲ್ಲ. ಇದರಿಂದ ಅವರ ಪ್ರಾಣವನ್ನು ಅಪಾಯಕ್ಕೆ ಒಡ್ಡಿದಂತಾಗಿದೆ. ಹಾಗಾಗಿ ಸರ್ಕಾರ ಅವರಿಗೆ ಈ ಹಿಂದಿನಂತೆ ಪೊಲೀಸ್ ಭದ್ರತೆಯನ್ನು ಒದಗಿಸಬೇಕೆಂದು ಒತ್ತಾಯಿಸಲಾಗಿದೆ.

ನಿಯೋಗದಲ್ಲಿ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ದಲಿತ ಸಂಘರ್ಷ ಸಮಿತಿಯ ಮುಖಂಡರಾದ ಎಂ. ದೇವದಾಸ್, ರಘು ಎಕ್ಕಾರ್, ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಸಿಪಿಐ ಜಿಲ್ಲಾ ಕಾರ್‍ಯದರ್ಶಿ ಬಿ. ಶೇಖರ್, ಕರುಣಾಕರ್, ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ್, ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ರೇವಂತ್ ಕದ್ರಿ ಉಪಸ್ಥಿತರಿದ್ದರು.

ಸೇತುವೆ ಗೇಟುಗಳಿಗೆ ಬೀಗ ಒಡೆದು ಸಂಚಾರಕ್ಕೆ ಅವಕಾಶ

ಉಳ್ಳಾಲ ತಾಲೂಕಿನ ಹರೇಕಳ ಗ್ರಾಮದಿಂದ ರಾಷ್ಟ್ರೀಯ ಹೆದ್ದಾರಿ 75ರ ಅಡ್ಯಾರ್-ಕಣ್ಣೂರಿಗೆ ನೇರ ಸಂಪರ್ಕ ಕಲ್ಪಿಸುವ ನೇತ್ರಾವತಿ ಸೇತುವೆಗೆ ಎರಡೂ ಕಡೆಗಳಲ್ಲಿ ಗೇಟು ನಿರ್ಮಿಸಿ ಹಾಕಲಾಗಿದ್ದ ಬೀಗವನ್ನು ಆಕ್ರೋಶಿತ ಸಾರ್ವಜನಿಕರ ಸಹಕಾರದಿಂದ ಎಪ್ರಿಲ್ 2ರಂದು ಬೆಳಿಗ್ಗೆ ಡಿವೈಎಫ್‌ಐ ಕಾರ್ಯಕರ್ತರು ಒಡೆದು ಸಂಚಾರಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದರೊಂದಿಗೆ ಸೇತುವೆಯಲ್ಲಿ ದ್ವಿಚಕ್ರ ಮತ್ತು ತ್ರಿಚಕ್ರ ಹಾಗೂ ನಾಲ್ಕು ಚಕ್ರಗಳ ವಾಹನಗಳು ಓಡಾಟ ಆರಂಭಿಸಿದೆ.

ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ಈ ಸೇತುವೆಯನ್ನು ಸ್ಥಳೀಯ ಜನಪ್ರತಿನಿಧಿಗಳ ಅನುಪಸ್ಥಿತಿಯಲ್ಲಿ ಲೋಕಾರ್ಪಣೆ ಕಾರ್ಯಕ್ರಮ ನಡೆಸಲು ಸಾಧ್ಯವಾಗದ್ದರಿಂದ ಎಪ್ರಿಲ್ 1ರಿಂದ ವಾಹನಗಳ ಸಂಚಾರ ನಡೆಸಲು ನಿರ್ಧರಿಸಲಾಗಿತ್ತು. ತಾಂತ್ರಿಕ ಕಾರಣದಿಂದ ಅದು ಸಾಧ್ಯವಾಗಲಿಲ್ಲ. ಅಲ್ಲದೆ ಎಪ್ರಿಲ್ 3ರಂದು ವಾಹನಗಳ ಸಂಚಾರ ಆರಂಭಗೊಳ್ಳಲಿದೆ ಎಂದು ಹೇಳಲಾಗಿತ್ತು. ಈ ನಿಟ್ಟಿನಲ್ಲಿ ಉಳ್ಳಾಲ ತಾಲೂಕು ಡಿವೈಎಫ್‌ಐ ಸಮಿತಿಯು ಸಂಚಾರ ಮುಕ್ತಗೊಳಿಸಬೇಕು ಎಂದು ಎಪ್ರಿಲ್ 3ರಂದು ದ.ಕ. ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿತ್ತು. ಆದರೆ ಅದಕ್ಕೂ ಸ್ಪಂದನ ಸಿಗದ ಕಾರಣ ಆಕ್ರೋಶಗೊಂಡ ಸ್ಥಳೀಯರ ಸಹಕಾರದಲ್ಲಿ ಡಿವೈಎಫ್‌ಐ ಮುಖಂಡರು ಎಪ್ರಿಲ್ 4ರಂದು ಬೆಳಗ್ಗೆ ಸೇತುವೆಯ ಎರಡೂ ಕಡೆಗಳಲ್ಲಿ ಅಳವಡಿಸಲಾಗಿದ್ದ ಗೇಟನ್ನು ಬೀಗ ಒಡೆದು ತೆರವುಗೊಳಿಸಿದ್ದಾರೆ. ಇದನ್ನೇ ಕಾಯುತ್ತಿದ್ದ ಸ್ಥಳೀಯರು ಸಂಭ್ರಮಿಸಿದರೆ, ವಾಹನಸವಾರರು ಮುಕ್ತವಾಗಿ ಸಂಚಾರ ಆರಂಭಿಸಿದ್ದಾರೆ.

ವಿಷಯ ತಿಳಿದ ಹರೇಕಳ ಗ್ರಾಮಸ್ಥರಲ್ಲದೆ, ಪಾವೂರು, ಪಜೀರು, ಬೋಳಿಯಾರು, ಕೊಣಾಜೆ ಗ್ರಾಮಗಳ ವಾಹನಸವಾರರು ಗ್ರಾಮಚಾವಡಿ, ನ್ಯೂಪಡ್ಪು ಮಾರ್ಗವಾಗಿ ಪಾವೂರು-ಹರೇಕಳ ಕಡವಿನ ಬಳಿಯಿಂದಾಗಿ ಸೇತುವೆ ಮೂಲಕ ರಾ.ಹೆ. 75ರ ಅಡ್ಯಾರ್‌ನತ್ತ ಸಾಗಿ ಮಂಗಳೂರು-ಬಿಸಿರೋಡ್ ಕಡೆಗೆ ಪ್ರಯಾಣ ಬೆಳೆಸಿದ್ದಾರೆ.

ಕಾರ್ಯಾಚರಣೆಯ ನೇತೃತ್ವವನ್ನು ಡಿವೈಎಫ್‌ಐ ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್, ಉಳ್ಳಾಲ ತಾಲೂಕು ಸಮಿತಿಯ ಅಧ್ಯಕ್ಷ ರಫೀಕ್ ಹರೇಕಳ, ಹರೇಕಳ ಗ್ರಾಮ ಸಮಿತಿಯ ಕಾರ್‍ಯದರ್ಶಿ ರಿಜ್ವಾನ್ ಖಂಡಿಗ, ಮಂಗಳೂರು ನಗರ ಅಧ್ಯಕ್ಷ ಜಗದೀಶ್ ಬಜಾಲ್, ಹರೇಕಳ ಗ್ರಾ.ಪಂ. ಸದಸ್ಯ ಅಶ್ರಫ್ ಮತ್ತಿತರರು ವಹಿಸಿದ್ದರು.

ಸೇತುವೆ ಕಾಮಗಾರಿ ಪೂರ್ಣಗೊಂಡಿದ್ದರೂ ನೀತಿ ಸಂಹಿತೆ ನೆಪವೊಡ್ಡಿ ವಾಹನ ಸಂಚಾರಕ್ಕೆ ಅಡ್ಡಿಪಡಿಸಿರುವುದು ಖಂಡನೀಯ. ಇದೀಗ ಡಿವೈಎಫ್‌ಐ ಗೇಟ್ ತೆರವುಗೊಳಿಸಿ ಸಂಚಾರಕ್ಕೆ ಅವಕಾಶ ಕಲ್ಪಿಸಿದೆ. ಇನ್ನು ಸೇತುವೆಯನ್ನು ಬಂದ್ ಮಾಡಿದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಡಿವೈಎಫ್‌ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್ ಹೇಳಿದರು.

ಮಳವಳ್ಳಿ ತಾಲೂಕಿನಲ್ಲಿ 10195 ಸದಸತ್ವ ಪ್ರಾಂತ ರೈತ ಸಂಘದ ಸದಸ್ಯತ್ವ ನೋಂದಣಿಯಲ್ಲಿ ದಾಪುಗಾಲು



ಕರ್ನಾಟಕ ಪ್ರಾಂತ ರೈತ ಸಂಘದ ಸದಸ್ಯತ್ವ ನೋಂದಣಿ ಆಂದೋಲನದಲ್ಲಿ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕು ಬಹು ದೊಡ್ಡ ಜಿಗಿತವನ್ನು ಸಾಧಿಸಿದೆ. ಕಳೆದ ಸುಮಾರು 20 ವರ್ಷಗಳಿಂದಲೂ ಇಲ್ಲಿ ಪ್ರಾಂತ ರೈತ ಸಂಘದ ಚಟುವಟಿಕೆಗಳಿದ್ದರೂ ಅನೇಕ ಏಳು ಬೀಳುಗಳಲ್ಲೇ ಸಾಗುತ್ತಿತ್ತು. ಈ ನಡುವೆ ಕೆಲವು ವರ್ಷಗಳ ಕಾಲ ಸದಸ್ಯತ್ವವಾಗಲಿ ಅಥವಾ ಯಾವುದೇ ಚಟುವಟಿಕೆಗಳಿಲ್ಲದೆ ಸ್ಥಗಿತವಾಗಿತ್ತು. ಆದರೂ ಆಗೊಮ್ಮೆ, ಹೀಗೊಮ್ಮೆ ಕೆಲವೊಂದು ಚಟುವಟಿಗಳು ನಡೆಯುತ್ತಿದ್ದವು.

2017ರ ಏಪ್ರಿಲ್ ನಲ್ಲಿ ಪ್ರಾಂತ ರೈತ ಸಂಘದ ಮಳವಳ್ಳಿ ತಾಲೂಕು ಮೂರನೇ ಸಮ್ಮೇಳನ ನಡೆದು, ನೂತನ ತಾಲೂಕು ಸಮಿತಿ ಆಯ್ಕೆಯಾಗಿ ಕ್ರಿಯಾಶೀಲ ಚಟುವಟಿಕೆಗಳು, ಕಾರ್ಯಕ್ರಮಗಳು, ಹೋರಾಟಗಳನ್ನು ನಡೆಸಿಕೊಂಡು ಬಂದರೂ, ಸದಸ್ಯತ್ವ ನೋಂದಣಿಗೆ ಹೆಚ್ಚು ಗಮನವನ್ನು ನೀಡಲಾಗುತ್ತಿರಲಿಲ್ಲ. ಕೇವಲ ಎರಡರಿಂದ ಮೂರೂವರೆ ಸಾವಿರ ಸದಸ್ಯತ್ವಕಷ್ಟೇ ಸೀಮಿತವಾಗಿತ್ತು.

ಕಳೆದ ಐದು ವರ್ಷಗಳಲ್ಲಿ ತಾಲೂಕಿನಲ್ಲಿ ಪ್ರಾಂತ ರೈತ ಸಂಘಟನೆ ಜನಾನುರಾಗಿಯಾಗಿ ಕೆಲಸ ನಿರ್ವಹಿಸುತ್ತಿದ್ದರೂ ರೈತರನ್ನು ಸಂಘಟಿಸಿ ಸಂಘದ ಸುಪರ್ದಿಗೆ ತರಲು ಹೆಚ್ಚು ಮುತುವರ್ಜಿ ವಹಿಸಿರಲಿಲ್ಲ. ಆದರೆ ಕಳೆದ ವರ್ಷ, ಸಂಘಕ್ಕೆ ಇರುವ ಪ್ರಭಾವಕ್ಕೆ 5,000 ಸದಸ್ಯತ್ವ ನೋಂದಣಿ ಮಾಡಿಸಲು ಸಾಧ್ಯವಿಲ್ಲವೇ? ಎಂದು ತಾಲೂಕು ಸಮಿತಿಯಲ್ಲಿ ಚರ್ಚಿಸಿ 5,000ದ ಗುರಿ ಮುಟ್ಟಲೇಬೇಕೆಂದು ಪ್ರಯತ್ನ ಮಾಡಲಾಯಿತು. ಈ ಗುರಿಯನ್ನೂ ಮೀರಿ ಇಂದು 5,431 ಸದಸ್ಯತ್ವ ಮಾಡಿಸಲು ಸಾಧ್ಯವಾಗಿದೆ.

2022 ರ ಆಕ್ಟೋಬರ್ 2ರಂದು 4ನೇ ತಾಲೂಕು ಸಮ್ಮೇಳನವನ್ನು ಜಿಲ್ಲಾ ಸಮ್ಮೇಳನಕ್ಕಿಂತಲೂ ಮಿಗಿಲಾಗಿ ಮೆರವಣಿಗೆ, ಬಹಿರಂಗ ಸಭೆ, ಕಲಾತಂಡಗಳ ಪ್ರದರ್ಶನ, ಪ್ರತಿನಿಧಿ ಅಧಿವೇಶನ ನಡೆಸಿ 27 ಮಂದಿಯ ತಾಲೂಕು ಸಮಿತಿ ರಚಿಸಿ, ಅದ್ಯಕ್ಷರಾಗಿ ಭರತ್ ರಾಜ್, ಕಾರ್ಯದರ್ಶಿಯಾಗಿ ಲಿಂಗರಾಜಮೂರ್ತಿ ಪುನರ್ ಆಯ್ಕೆಯಾದರು. ನಾಲ್ಕು ಹೋಬಳಿಗಳಲ್ಲೂ ಸಮಾವೇಶಗಳನ್ನು ನಡೆಸಿ ತಲಾ 25 ಮಂದಿಯ ಹೋಬಳಿ ಸಮಿತಿಯನ್ನು ಆಯ್ಕೆ ಮಾಡಲಾಗಿತ್ತು.

ರಾಜ್ಯ ಸಮಿತಿಯು ಈ ವರ್ಷದ ಸದಸ್ಯತ್ವ ಕೋಟಾ ನೀಡುವಾಗ 10,000 ಸದಸ್ಯತ್ವವನ್ನು ಮಾಡಿಸಲೇಬೇಕೆಂದು ತಿಳಿಸಿತು. ಆಗ, ರಾಜ್ಯ ಸಮಿತಿ ವಾಸ್ತವಿಕ ನೆಲೆಗಟ್ಟಿನ ಆಧಾರದಲ್ಲಿ ಕೋಟಾ ನೀಡಬೇಕು, ಕಳೆದ ಸಾಲಿಗಿಂತ ಈಗ ಶೇ. 20 ರಿಂದ 30 ರಷ್ಟು ಹೆಚ್ಚಳ ಮಾಡಲು ಸಾಧ್ಯ. ಆದರೆ ಶೇ. ನೂರರಷ್ಟು ಹೆಚ್ಚಿಸಲು ಸಾಧ್ಯವೇ ಎಂದು ತಾಲೂಕು ಸಮಿತಿಯ ಮುಖಂಡರು ಗೊಣಗಾಡಿಕೊಂಡು, ತಕರಾರು ಮಾಡಿದರೆ ರಾಜ್ಯ ಸಮಿತಿ ಸಭೆಯಲ್ಲಿ ಗೊಂದಲವಾಗಬಹುದು ಎಂದು ಸುಮ್ಮನಾಗಿದ್ದರು.

ಮೂರನೆ ಹಂತದ ಸದಸ್ಯತ್ವದ ವೇಳೆ ಕೇಂದ್ರದ ನಾಯಕರಾದ ಡಿ. ರವೀಂದ್ರನ್ ರವರು ಕಳೆದ ವರ್ಷದ ಸದಸ್ಯತ್ವಕ್ಕಿಂತ ಈ ವರ್ಷದ ಸದಸ್ಯತ್ವದಲ್ಲಿ ಕನಿಷ್ಠ 20% ರಷ್ಟು ಹೆಚ್ಚಳ ಮಾಡಿಸಬೇಕೆಂದಾಗ ಅಷ್ಟರಲ್ಲೇ ಸದಸ್ಯತ್ವ ದಲ್ಲಿ 20% ರಷ್ಟು ಹೆಚ್ಚಳವಾಗಿತ್ತು. ಅದು ಸರಿಯಾದ ವಿಧಾನ ಎಂದು ಸ್ಥಳೀಯ ನಾಯಕರು ಸುಮ್ಮನಾದರು. ಆದರೂ ಎಲ್ಲೋ ಒಂದು ಕಡೆ 'ನಾವು 10,000 ಸದಸ್ಯತ್ವ ಮಾಡಿಸಲು ಸಾಧ್ಯವಿಲ್ಲವೇ? ನಾಲ್ಕು ಹೋಬಳಿಗಳಿಗೆ ತಲಾ 3,000 ದಂತೆ ಕೋಟಾ ನೀಡಿದ್ದೇವೆ, ಮಾರ್ಚ್ 31ರ ತನಕ ಸಮಯಾವಕಾಶ ಇದೆ, ಅದನ್ನು ಬಳಸಿಕೊಳ್ಳೋಣ' ಎಂದುಕೊಳ್ಳುತ್ತ ಸದಸ್ಯತ್ವ ಮಾಡಿಸಲು ನಿರಂತರ ಪ್ರಯತ್ನಿಸಿದರು. ಇದರ ಪರಿಣಾಮವಾಗಿ ಇಂದು ಮಳವಳ್ಳಿ ತಾಲೂಕಿನ ಸದಸ್ಯತ್ವ 10,195 ಆಗಿದೆ.

ಇಡೀ ರಾಜ್ಯದಲ್ಲೇ ಒಂದು ತಾಲೂಕಿನಲ್ಲಿ 10,000 ಸದಸ್ಯತ್ವ ಮಾಡಿಸಿರುವ ಕೀರ್ತಿ ಮಳವಳ್ಳಿ ತಾಲೂಕಿಗೆ ಸಲ್ಲುತ್ತದೆ. ಎಂದು ಮಳವಳ್ಳಿ ತಾಲೂಕು ಅಧ್ಯಕ್ಷರಾದ ಎನ್. ಎಲ್. ಭರತ್ ರಾಜ್ ಮತ್ತು ಕಾರ್ಯದರ್ಶಿ ಎನ್. ಲಿಂಗರಾಜ ಮೂರ್ತಿ ಹೇಳುತ್ತಾರೆ.

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ
ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080-22234369
ಫೋನ್ : 9448578021, 9483966467

ಟೋಲ್ ದರ ಮತ್ತೆ ಹೆಚ್ಚಳ
2021–22ರಲ್ಲಿ 2.7 ಲಕ್ಷ ಕೋಟಿ ಸಂಗ್ರಹ



ಮಾರ್ಚ್ ತಿಂಗಳ ಕೊನೆಯ ದಿನ ಬಂದ ಟೋಲ್ ಶುಲ್ಕ ಹೆಚ್ಚಳದ ಸುದ್ದಿ ಬೆಂಗಳೂರು, ಮೈಸೂರು ರಸ್ತೆ ಬಳಕೆದಾರರನ್ನು ಸಿಟ್ಟಿಗೇಳಿಸಿತ್ತು. ಇಷ್ಟು ವರ್ಷಗಳ ಕಾಲ ಯಾವುದೇ ಶುಲ್ಕ ಇಲ್ಲದೆ ಪ್ರಯಾಣಿಸುತ್ತಿದ್ದ ರಸ್ತೆಯನ್ನು ವಿಸ್ತರಣೆ ಮತ್ತು ಒಂದಷ್ಟು ಅಭಿವೃದ್ಧಿ ಪಡಿಸಿ, ಅಧಿಕ ಶುಲ್ಕ ವಸೂಲಿಗೆ ಇಳಿದ ಸರ್ಕಾರದ ಮೇಲೆ ಜನರಿಗೆ ಮೊದಲೇ ಸಿಟ್ಟಿತ್ತು. ಅದು ಇನ್ನೂ ಮರೆಯಾಗದೇ ಇರುವಾಗಲೇ ಏಪ್ರಿಲ್ ಒಂದರಿಂದ ಮತ್ತೆ ಟೋಲ್ ದರ ಹೆಚ್ಚಳದ ಸುದ್ದಿ ಇವರಲ್ಲಿ ಮತ್ತಷ್ಟು ಸಿಟ್ಟು ಬರಿಸಿತು. ಸಾಮಾಜಿಕ ಜಾಲತಾಣಗಳ ಮೂಲಕ ಜನರು ತಮ್ಮ ಸಿಟ್ಟನ್ನು ವ್ಯಕ್ತಪಡಿಸತೊಡಗಿದರು. ವಿರೋಧ ಪಕ್ಷಗಳೂ ಟೋಲ್ ಹೆಚ್ಚಳದ ವಿರುದ್ಧ ಮಾತನಾಡತೊಡಗಿದರು. ರಾಜ್ಯದ ವಿಧಾನಸಭಾ ಚುನಾವಣೆ ಘೋಷಣೆಯಾಗಿರುವ ಸಂದರ್ಭದಲ್ಲಿ ಇದು ಬಿಜೆಪಿಗೆ ಇರುಸು ಮುರುಸು ಉಂಟಾಯಿತು. ಇದನ್ನು ಅರಿತ ಆಳುವ ಬಿಜೆಪಿ ಪಕ್ಷ ಟೋಲ್ ಗುತ್ತಿಗೆದಾರರ ಮನವೊಲಿಸಿಯೋ, ಆಗುವ ನಷ್ಟ ತುಂಬಿಕೊಡುವುದಾಗಿ ಹೇಳಿಯೋ ಏರಿಕೆಯಾದ ಶುಲ್ಕ ವಸೂಲಿಗೆ ಸದ್ಯಕ್ಕೆ ತಡೆಹಿಡಿದಿದ್ದಾರೆ. ಮಾರ್ಚ್ 31ರಂದು ಸಂಸದ ಪ್ರತಾಪ್ ಸಿಂಹ ಅವರು "ರಸ್ತೆಯ ಕಾಮಗಾರಿ ಇನ್ನೂ ಪೂರ್ಣಗೊಳ್ಳದ ಕಾರಣ ಟೋಲ್ ಶುಲ್ಕ ಹೆಚ್ಚಳವನ್ನು ತಾತ್ಕಾಲಿಕವಾಗಿ ತಡೆಹಿಡಿಯುವಂತೆ ಓಊಂಖ ಅಧ್ಯಕ್ಷರು, ಯೋಜನಾ ನಿರ್ದೇಶಕರು ಮತ್ತು ಪ್ರಾದೇಶಿಕ ಅಧಿಕಾರಿಗೆ ಮನವಿ ಮಾಡಿದ್ದೇನೆ." ಎಂದು ಸಾಮಾಜಿಕ ಜಾಲತಾಣದಲ್ಲಿ ಹೇಳಿಕೊಂಡರು. ಇದರರ್ಥ, ಚುನಾವಣೆ ಮುಗಿಯುತ್ತಿದ್ದಂತೆ ಹೆಚ್ಚಿಸಿರುವ ದರ ವಸೂಲಿಗೆ ಮುಂದಾಗುವುದಂತೂ ಖಂಡಿತ.

ಇಡೀ ದೇಶಕ್ಕೆ ಅನ್ವಯ

ಈ ಟೋಲ್ ದರ ಹೆಚ್ಚಳ ಬೆಂಗಳೂರು–ಮೈಸೂರು ರಸ್ತೆಗಷ್ಟೇ ಸೀಮಿತವಾಗಿಲ್ಲ. ರಾಷ್ಟ್ರೀಯ ಹೆದ್ದಾರಿ ಶುಲ್ಕ (ರೇಟಿಂಗ್ ಮತ್ತು ಸಂಗ್ರಹಣೆಯ ನಿರ್ಣಯ) ನಿಯಮಗಳು, 2008 ರ ಶಾಸನದಂತೆ ಹೆದ್ದಾರಿ ಟೋಲ್ ದರಗಳ ಪರಿಷ್ಕರಣೆಯನ್ನು ಮಾಡಲಾಗುತ್ತದೆ. 2023 ಆರ್ಥಿಕ ವರ್ಷದಲ್ಲಿ, ಭಾರತದಾದ್ಯಂತ ಟೋಲ್ ದರಗಳ ಸರಾಸರಿ 10.5% ಹೆಚ್ಚಳವಾಗಬೇಕು. ಮತ್ತೊಂದೆಡೆ, ಟೋಲ್ ಶುಲ್ಕಗಳ ಬೆಲೆ ಪರಿಷ್ಕರಣೆಯು ದೇಶದ ಹಲವು ಭಾಗಗಳಲ್ಲಿ ಬದಲಾಗುತ್ತದೆ. ಈಗಿನ ಹೆಚ್ಚಳ ಶೇ. 18ರ ವರೆಗೂ ಇರುತ್ತದೆ. ಇದು ಏಪ್ರಿಲ್ ಒಂದರಿಂದ ಅನ್ವಹಿಸುತ್ತದೆ.

ಭಾರತದಲ್ಲಿ ಪ್ರಸ್ತುತ 599 ರಾಷ್ಟ್ರೀಯ ಹೆದ್ದಾರಿಗಳಿವೆ. ಮುಂಬೈ–ಪುಣೆ ರಸ್ತೆ ಹೆದ್ದಾರಿ ಟೋಲ್ ಶುಲ್ಕದಲ್ಲಿ ಶೇ. 18 ರಷ್ಟು ಹೆಚ್ಚಿನ ಏರಿಕೆಯನ್ನು ಕಾಣಲಿದೆ. ಹೀಗಾಗಿ, ಇದು ಬೆಂಗಳೂರು–ಮೈಸೂರು ರಸ್ತೆಗೂ ಇದು ಅನ್ವಹಿಸುತ್ತದೆ.

ದೇಶಾದ್ಯಂತ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುವ ಎಲ್ಲಾ ವಾಹನಗಳಿಗೆ ಟೋಲ್ ಶುಲ್ಕವನ್ನು ವಿಧಿಸಲಾಗುತ್ತದೆ. ಕೆಲವೆಡೆ ಏಪ್ರಿಲ್ನಲ್ಲಿ ಭಾಗಶಃ ಮತ್ತು ಸೆಪ್ಟೆಂಬರ್ನಲ್ಲಿ ಭಾಗಶಃ ಟೋಲ್ ಶುಲ್ಕಗಳನ್ನು ಹೆಚ್ಚಿಸಲಾಗುವುದು. ಅದರ ಆಧಾರದ ಮೇಲೆ, ಏಪ್ರಿಲ್ 1 ರಂದು ಅನೇಕ ಟೋಲ್ ಶುಲ್ಕಗಳನ್ನು ಹೆಚ್ಚಿಸಲಾಗಿದೆ.

'ಗುಣಮಟ್ಟದ' ರಸ್ತೆಗೆ ಹಣ ನೀಡುವುದು ತಪ್ಪೇ?

ಟೋಲ್ ಶುಲ್ಕ ವಸೂಲಿ ಮಾಡಬಾರದು ಎಂದು ಧ್ವನಿ ಎತ್ತುತ್ತಲೇ "ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ, ಇದಕ್ಕೆ ಹೆಚ್ಚು ಹಣ ವೆಚ್ಚವಾಗುತ್ತದೆ, ಹೀಗಾಗಿ ಸುಂಕ ವಿಧಿಸುವುದರಲ್ಲಿ ತಪ್ಪೇನಿದೆ," ಎಂದು ಆಳುವವರು ಮತ್ತು ಅವರ ಬೆಂಬಲಿಗರು ಪ್ರಶ್ನಿಸುತ್ತಾರೆ. ನಾಗರೀಕ ಸಮಾಜ ರಚನೆಯಾದ ಕಾಲದಿಂದಲೂ ರಾಜಪ್ರಭುತ್ವದ ಆಡಳಿತವೇ ಇರಲಿ, ಸರ್ವಾಧಿಕಾರಿ ಆಡಳಿತವೇ ಇರಲಿ, ರಸ್ತೆ ನಿರ್ಮಾಣ, ಕುಡಿಯುವ ನೀರು ಒದಗಿಸುವ ಮೂಲಭೂತ ಕೆಲಸವನ್ನು ಸರಕಾರಗಳು ಮಾಡುತ್ತಲೇ ಬಂದಿವೆ. ಸಂಚಾರವಿಲ್ಲದೆ ಯಾವುದೇ ಸರ್ಕಾರವು ವ್ಯಾಪಾರ, ವ್ಯವಹಾರವನ್ನು ವಿಸ್ತರಿಸಲು ಸಾಧ್ಯವಿಲ್ಲ. ಸರಕಾರದ ಅಗತ್ಯಕ್ಕಾದರೂ ರಸ್ತೆ ನಿರ್ಮಿಸುವುದು ಅಗತ್ಯವಾಗಿದೆ. ಬ್ರಿಟಿಷರ ಆಳ್ವಿಕೆಯಲ್ಲಿ ಭಾರತಕ್ಕೆ ರೈಲ್ವೇಗಳು ಬಂದದ್ದು ಈ ಕಾರಣಕ್ಕಾಗಿ.

ಸಂಗ್ರಹಿಸಿದ 2.7 ಲಕ್ಷ ಕೋಟಿ ಎಲ್ಲಿ ಹೋಯಿತು?

ಟೋಲ್ ಶುಲ್ಕ ವಿಧಿಸದಿರಲು ಇದು ಮೂಲಭೂತ ತರ್ಕಬದ್ಧವಾಗಿದ್ದರೂ, ಈ ತರ್ಕಕ್ಕೆ ಇತರ ಕಾರಣಗಳೂ ಇವೆ. ಪೆಟ್ರೋಲ್ ಮತ್ತು ಡೀಸೆಲ್ ನಂತಹ ಇಂಧನದಿಂದ ವಾಹನಗಳು ಚಲಿಸುತ್ತವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಹೆಚ್ಚಿನ ತೆರಿಗೆಯನ್ನು ಸಂಗ್ರಹಿಸುತ್ತವೆ. ಕೇಂದ್ರ ಸರ್ಕಾರವು ಮೂಲಸೌಕರ್ಯ ಅಭಿವೃದ್ಧಿ ಶುಲ್ಕದ ಹೆಸರಿನಲ್ಲಿ 1 ಲೀಟರ್ ಪೆಟ್ರೋಲ್ ಗೆ ರೂ. 5, ಡೀಸೆಲ್ ರೂ. 2ನ್ನು ವಸೂಲಿ ಮಾಡಲಾಗುತ್ತದೆ. 2017 ರವರೆಗೆ ಇದು 'ರಸ್ತೆ ಅಭಿವೃದ್ಧಿ ನಿಧಿ' ಎಂಬ ಹೆಸರನ್ನು ಹೊಂದಿತ್ತು. ಮೋದಿ ಸರ್ಕಾರವೇ ಈ ಹೆಸರನ್ನು 'ಮೂಲಸೌಕರ್ಯ ಅಭಿವೃದ್ಧಿ ನಿಧಿ' ಎಂದು ಬದಲಾಯಿಸಿತು. 2021–22ರಲ್ಲೇ 3,08,49,000 ಮೆಟ್ರಿಕ್ ಟನ್(MT) ಪೆಟ್ರೋಲ್ ಮತ್ತು 7,66,59,000 ಮೆಟ್ರಿಕ್ ಟನ್(MT) ಡೀಸೆಲ್ ಮಾರಾಟವಾಗಿದೆ. ಈ ಮೂಲಕ ಕೇವಲ ಒಂದು ವರ್ಷದಲ್ಲಿ ಮೂಲಸೌಕರ್ಯ ನಿಧಿಗಾಗಿ ರೂ.2,70,000 ಕೋಟಿ (ಇನ್ನೂರ ಎಪ್ಪತ್ತು ಸಾವಿರ ಕೋಟಿ) ಸಂಗ್ರಹಿಸಲಾಗಿದೆ. ರಸ್ತೆ ಅಭಿವೃದ್ಧಿಗೆಂದು ವಾಹನ ಮಾಲೀಕರಿಂದ ಇಷ್ಟೊಂದು ಹಣ ವಸೂಲಿ ಮಾಡಿ, ಅದರ ಮೇಲೆ ಟೋಲ್ ಶುಲ್ಕ ವಸೂಲಿ ಮಾಡುವುದು ದೊಡ್ಡದೊಂದು ದರೋಡೆಯಲ್ಲದೆ ಮತ್ತೇನು?

ಶುಲ್ಕ ವಸೂಲಿಗೆ ಅಂತ್ಯ ಯಾವುದು?

ಟೋಲ್ ರಸ್ತೆಗಳಿಗೆ ಎರಡು ರೀತಿಯಲ್ಲಿ ಶುಲ್ಕ ವಿಧಿಸಲಾಗುತ್ತದೆ. ಮೊದಲನೆಯದಾಗಿ, ಖಾಸಗಿಯವರು ನಿರ್ವಹಣೆ ಮಾಡುವ ರಸ್ತೆಗಳು. ನಿಗದಿತ ಅವಧಿಗೆ ಶುಲ್ಕ ವಸೂಲಿ ಮಾಡಿದ ಬಳಿಕ ಅದನ್ನು ಸರಕಾರಕ್ಕೆ ಹಸ್ತಾಂತರಿಸಬೇಕು. ಎರಡನೆಯದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವೇ ನಿರ್ಮಿಸಿರುವ ರಸ್ತೆಗಳಿಗೆ ಟೋಲ್ ಸಂಗ್ರಹಿಸಲು ಗುತ್ತಿಗೆದಾರರನ್ನು ನೇಮಿಸಲಾಗುವುದು. ರಸ್ತೆ ನಿರ್ಮಾಣದ ನಂತರದ ನಿಗದಿತ ಗಡುವು ಮುಗಿದ ನಂತರ ಶೇ. 40ರಷ್ಟು ಮಾತ್ರ ಶುಲ್ಕ ಸಂಗ್ರಹಿಸಬೇಕು ಎಂದು ನಿಯಮ ಹೇಳುತ್ತದೆ. ಆದರೆ, ಈ ರೀತಿ ಇಲ್ಲಿಯೂ ಮಾಡುತ್ತಿಲ್ಲ. ನಿರ್ದಿಷ್ಟ ಅವಧಿ ಮುಗಿದರೂ ಟೋಲ್ ಸಂಗ್ರಹ ನಿಂತಿಲ್ಲ ಅಥವಾ ಶುಲ್ಕದ ಪ್ರಮಾಣ ಕಡಿಮೆ ಮಾಡಿಲ್ಲ. ವರ್ಷಗಳು ಕಳೆದಂತೆ ವಾಹನಗಳ ಸಂಖ್ಯೆಯೂ ಹೆಚ್ಚಿದೆ. ಶುಲ್ಕ ಸಂಗ್ರಹದ ಆದಾಯವೂ ಹೆಚ್ಚಿದೆ. ಆದರೂ ಶುಲ್ಕ ವಸೂಲಿ ಎಂಬ ದರೋಡೆ ಮುಂದುವರಿದೇ ಇದೆ.

ಭಾರೀ ಹಗರಣ

ಟೋಲ್ ಶುಲ್ಕ ದರ ಏರಿಕೆ ಒಂದು ದೊಡ್ಡ ಹಗರಣವಾಗಿ ಪರಿಣಮಿಸಿದೆ. ಇದರಲ್ಲಿ ಕೆಲವು ಕಂಪನಿಗಳಿಗೆ ಭಾರಿ ಮೊತ್ತದ ಹಣ ಸಂಗ್ರಹಿಸುವ ಹಕ್ಕನ್ನು ನೀಡಲಾಗಿದೆ. ವಾಣಿಜ್ಯ ವಾಹನಗಳಾದ ಬಸ್, ಲಾರಿ, ಲಘು ಸರಕು ಸಾಗಣೆ ವಾಹನ, ಮ್ಯಾಕ್ಸಿ ಕ್ಯಾಬ್, ಟ್ಯಾಕ್ಸಿ ಮುಂತಾದ ಪ್ರವಾಸಿ ವಾಹನಗಳಿಗೆ ಸುಂಕವನ್ನು ಹೆಚ್ಚಿಸಲಾಗಿದೆ. ಇದು ಅಂತಿಮವಾಗಿ ಜನರ ತಲೆಯ ಮೇಲೆ ಹೇರಲಾಗುತ್ತದೆ. ಸರಕಾರ ಮುಕ್ತ ಆರ್ಥಿಕ ನೀತಿಗಳ ಕಾರಣದಿಂದ ಜನ ಕುಡಿಯುವ ನೀರು, ರಸ್ತೆ, ಶಿಕ್ಷಣ, ವೈದ್ಯಕೀಯ ಸೇವೆ ಇವುಗಳನ್ನು ಹಣ ಕೊಟ್ಟು ಪಡೆಯಬೇಕಾಗಿದೆ. ಬಂಡವಾಳಶಾಹಿ ಸಮಾಜದ ಅನಿಷ್ಟಗಳಲ್ಲಿ ಟೋಲ್ ಶುಲ್ಕ ಕೂಡ ಸೇರಿಕೊಂಡಿದೆ!

–ಸಿದ್ದಯ್ಯ ಸಿ

ಕಾಂ. ಸುನಿತ್ ಚೋಪ್ರಾ ನಿಧನ



ಭಾರತದ ಕೃಷಿ ಕೂಲಿಕಾರರ ಆಂದೋಲನದ ಹಿರಿಯ ಮುಖಂಡ ಸುನಿತ್ ಚೋಪ್ರಾ ಎಪ್ರಿಲ್ 5ರಂದು ನಿಧನರಾಗಿದ್ದಾರೆ.

ದಿಲ್ಲಿಯ ಹೊರವಲಯದಲ್ಲಿರುವ ಗುರ್ಗಾಂವ್‌ನಿಂದ ದಿಲ್ಲಿಯ ರಾಮಲೀಲಾ ಮೈದಾನದಲ್ಲಿ ನಡೆಯಲಿದ್ದ ಮಜ್ದೂರ್–ಕಿಸಾನ್ ಸಂಘರ್ಷ ರ್‍ಯಾಲಿಯ ಸಿದ್ಧತೆಯಲ್ಲಿ ಪಾಲ್ಗೊಳ್ಳಲು ದಿಲ್ಲಿಗೆ ಮೆಟ್ರೋದಲ್ಲಿ ಪ್ರಯಾಣಿಸುತ್ತಿದ್ದಾಗ ಕುಸಿದುಬಿದ್ದ ಕಾಮ್ರೇಡ್ ಸುನೀತ್ ಚೋಪ್ರಾ ಅವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಅವರಿಗೆ 81 ವರ್ಷ ವಯಸ್ಸಾಗಿತ್ತು.

ಸುನೀತ್ ಚೋಪ್ರಾ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಚಳವಳಿಯಲ್ಲಿ ಸಕ್ರಿಯರಾಗಿದ್ದರು ಮತ್ತು ಎಸ್‌ಎಫ್‌ಐನ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾದರು. ಅವರು 1972 ರಲ್ಲಿ ಪಕ್ಷಕ್ಕೆ ಸೇರಿದರು.

ಸುನೀತ್ ಅವರು ಮುಂದೆ ಯುವ ಸಂಘಟನೆಯಾದ ಡಿವೈಎಫ್‌ಐ ನ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದರು.

ಅವರು ಕೃಷಿ ಕಾರ್ಮಿಕರ ಚಳವಳಿಯ ಸಮರ್ಪಿತ ಕಾರ್ಯಕರ್ತರಾಗಿ ಭಾರತದ ವಾಯುವ್ಯ ಭಾಗದಲ್ಲಿ ಕೃಷಿ ಕಾರ್ಮಿಕರನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಅವರು ಸುದೀರ್ಘ ಕಾಲ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜಂಟಿ ಕಾರ್ಯದರ್ಶಿಯಾಗಿದ್ದರು.

ಸುನೀತ್ ಚೋಪ್ರಾ ಅವರು 1995 ರಲ್ಲಿ 15 ನೇ ಮಹಾಧಿವೇಶನದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಗೆ ಆಯ್ಕೆಯಾದರು ಮತ್ತು 2015 ರವರೆಗೆ ಆ ಸ್ಥಾನದಲ್ಲಿ ಇದ್ದರು.

ಕಲೆಯ ಬಗ್ಗೆ ತಮ್ಮ ವ್ಯಾಪಕ ಓದು ಮತ್ತು ಜ್ಞಾನದಿಂದಾಗಿ ಅವರೊಬ್ಬ ಪ್ರಸಿದ್ಧ ಕಲಾ ವಿಮರ್ಶಕರಾದರು.

ಅವರ ನಿಧನದಿಂದ ಪಕ್ಷವು ಒಬ್ಬ ಬದ್ಧ ಮಾರ್ಕ್ಸ್‌ವಾದಿಯನ್ನು ಕಳೆದುಕೊಂಡಿದೆ ಎನ್ನುತ್ತ ಪೊಲಿಟ್‌ಬ್ಯುರೊ ಅವರ ಕುಟುಂಬದ ಎಲ್ಲ ಸದಸ್ಯರಿಗೆ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದೆ.

ಕಾಂ. ಸುನೀತ್ ಚೋಪ್ರಾ ಅರ್ಧ ಶತಮಾನದ ಕಾಲ ಹೋರಾಟಗಳಲ್ಲಿ ಸಂಗಾತಿಯಾಗಿದ್ದರು ಎಂದಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, 1973ರಲ್ಲಿ ಜೆಎನ್‌ಯು ನಲ್ಲಿ ಭೇಟಿಯಾದಾಗಿನಿಂದ ಸಮಾಜವಾದಕ್ಕಾಗಿ ಜನಗಳ ಹೋರಾಟಗಳ ಏಳು–ಬೀಳುಗಳಲ್ಲಿ ಜತೆಯಾಗಿ ಪಯಣಿಸಿದ್ದೆವು, ಅವರು ಅವಿರತವಾಗಿ ಜನತೆಯ ಹಿತಾಸಕ್ತಿಗಳನ್ನು ಪ್ರತಿಪಾದಿಸಿಕೊಂಡು ಬಂದಿದ್ದರು ಎಂದು ಶ್ರದ್ಧಾಂಜಲಿ ಅರ್ಪಿಸಿದ್ದಾರೆ.



ನಾ ದಿವಾಕರ

ಮತ–ಮತದಾರ–ಮತದಾನ ಮತ್ತು ಮತದ ಮೌಲ್ಯ

ಜನಮತದ ಅಪಮೌಲ್ಯೀಕರಣದಿಂದ ಪ್ರಜಾಪ್ರಭುತ್ವದ ತಳಪಾಯವೇ ಶಿಥಿಲವಾಗುತ್ತದೆ

ಸಂವಿಧಾನ ರಚನ ಮಂಡಳಿಯ ಸಭೆಯಲ್ಲಿ ತಮ್ಮ ಅಂತಿಮ ಭಾಷಣ ಮಾಡುವ ಸಂದರ್ಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ "ರಾಜಕಾರಣದಲ್ಲಿ ಭಾರತದ ಪ್ರತಿಯೊಬ್ಬ ಪ್ರಜೆಯೂ ಮತದಾನದ ಹಕ್ಕು ಹೊಂದಿರುತ್ತಾನೆ, ರಾಜಕೀಯ ಪಕ್ಷವನ್ನು ಕಟ್ಟುವ, ಪಕ್ಷಕ್ಕೆ ಸೇರುವ ಸ್ವಾತಂತ್ರ್ಯ ಹೊಂದಿರುತ್ತಾನೆ. ರಾಜಕಾರಣದಲ್ಲಿ ನಾವು ಒಬ್ಬ ವ್ಯಕ್ತಿಗೆ ಒಂದು ಮತ ಒಂದು ಮೌಲ್ಯ ಎಂಬ ತತ್ವವನ್ನು ಅನುಸರಿಸುತ್ತೇವೆ. ಆದರೆ ನಮ್ಮ ಸಾಮಾಜಿಕ– ಆರ್ಥಿಕ ಸಂರಚನೆಯ ಕಾರಣ ಒಬ್ಬ ವ್ಯಕ್ತಿಗೆ ಒಂದು ಮೌಲ್ಯವನ್ನು ಕಲ್ಪಿಸಲು ನಿರಾಕರಿಸುತ್ತೇವೆ,,,,," ಎಂದು ಹೇಳಿರುವುದನ್ನು ಭಾರತದ ರಾಜಕೀಯ ಪಕ್ಷಗಳು, ನಾಯಕರು, ಸಾಮಾಜಿಕ ಕಾರ್ಯಕರ್ತರು, ಸಂಘಟನೆಗಳು ಮತ್ತು ವಿವಿಧ ಸಿದ್ಧಾಂತಗಳ ಅನುಯಾಯಿಗಳು ವರ್ಷಕ್ಕೆ ಕನಿಷ್ಠ ಎರಡು ಬಾರಿಯಾದರೂ ನೆನಪಿಸಿಕೊಳ್ಳುವುದು ವಾಡಿಕೆಯಾಗಿದೆ. ಪ್ರತಿಯೊಂದು ಚುನಾವಣೆಯ ಸಂದರ್ಭದಲ್ಲೂ ಸಾರ್ವಭೌಮ ಪ್ರಜೆಗಳು ಆಳುವ ಸರ್ಕಾರಗಳನ್ನು ಆಯ್ಕೆ ಮಾಡಲು ಚಲಾಯಿಸುವ ಅಮೂಲ್ಯ ಮತದ ಮೌಲ್ಯ, ಪ್ರಾಮುಖ್ಯತೆ ಮತ್ತು 'ಪಾವಿತ್ರ್ಯತೆ'ಯ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತವೆ.

ಮತದಾರ ಜಾಗೃತಿ ಅಭಿಯಾನಗಳು ವಿಭಿನ್ನ ಸ್ತರಗಳಲ್ಲಿ ನಡೆಯುತ್ತವೆ. ಸಂಘ ಸಂಸ್ಥೆಗಳು, ರಾಜಕೀಯ ಪಕ್ಷಗಳು, ಸಾಮಾಜಿಕ ಕಾರ್ಯಕರ್ತರು ಮತದಾರರಲ್ಲಿ ಜಾಗೃತಿ ಮೂಡಿಸುವ ಸಲುವಾಗಿಯೇ ವಿಶಿಷ್ಟ–ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದನ್ನು ಸಾಮಾನ್ಯವಾಗಿ ಗಮನಿಸಬಹುದು. ಪ್ರಜಾಪ್ರಭುತ್ವದ ಅಳಿವು–ಉಳಿವು ಮತದಾರರ ಜಾಗೃತ ಪ್ರಜ್ಞೆಯನ್ನೇ ಅವಲಂಬಿಸಿರುತ್ತದೆ ಎನ್ನುವುದನ್ನು ಇತಿಹಾಸ ಹಲವು ಸಂದರ್ಭಗಳಲ್ಲಿ ನಿರೂಪಿಸಿದೆ.

ಆಡಳಿತ ವ್ಯವಸ್ಥೆಯಲ್ಲಿ ಸದ್ದಿಲ್ಲದೆ ನುಸುಳುವ ಸರ್ವಾಧಿಕಾರಿ ಧೋರಣೆ ಮತ್ತು ವ್ಯವಸ್ಥೆಯ ಎಲ್ಲ ಹಂತಗಳಲ್ಲೂ ವ್ಯಾಪಿಸುವ ನಿರಂಕುಶಾಧಿಕಾರದ ಕುಡಿಗಳು ಇಡೀ ವ್ಯವಸ್ಥೆಯನ್ನೇ ಕ್ಯಾನ್ಸರ್ ಪೀಡಿತ ಜೀವಕೋಶದಂತೆ ಶಿಥಿಲವಾಗಿಸುತ್ತಲೇ ಇರುತ್ತವೆ. ಮೂಲತಃ ಸಾಮಾನ್ಯ ಜನತೆಯಲ್ಲಿ ಪ್ರಜಾಪ್ರಭುತ್ವ ಮತ್ತು ಮತದಾನದ ನಡುವೆ ಇರುವ ಸೂಕ್ಷ್ಮ ಸಂಬಂಧದ ಬಗ್ಗೆ ಅರಿವು ಮೂಡಿಸುವುದು ನಮ್ಮ ಇಂದಿನ ಆದ್ಯತೆಯಾಗಬೇಕಿದೆ.

ಮತದಾನ ಮತ್ತು ರಾಜಕಾರಣ

ಸಮಕಾಲೀನ ರಾಜಕಾರಣದಲ್ಲಿ ಸಾರ್ವಭೌಮ ಜನತೆಯ ಪಾಲಿಗೆ ಶ್ರೇಷ್ಠ ಅಥವಾ ಪವಿತ್ರ ಎನಿಸುವ ಮತ ಅಥವಾ ಜನಮತ, ಆಳುವ ವರ್ಗಗಳ ದೃಷ್ಟಿಯಲ್ಲಿ ಖರೀದಿಸಬಹುದಾದ ಮಾರುಕಟ್ಟೆಯ ಸರಕಿನಂತೆ ಕಾಣುತ್ತಿರುವುದನ್ನು ಗಮನಿಸಬೇಕಿದೆ. ಮತದಾರರನ್ನು ಪ್ರಭುಗಳು ಎಂದೇ ಸಂಬೋಧಿಸುವ ರಾಜಕೀಯ ಪಕ್ಷಗಳೂ ಸಹ ತಾವು ಎಸೆಯುವ ತುಣುಕುಗಳನ್ನು ಆಯ್ದುಕೊಳ್ಳಲು ಇದೇ ಮತದಾರ ಪ್ರಭುಗಳನ್ನು ವಿಭಿನ್ನ ರೀತಿಗಳಲ್ಲಿ ಪ್ರಚೋದಿಸುತ್ತಿರುತ್ತವೆ. ಹಣ, ಹೆಂಡ, ಸೀರೆ, ಪಂಚೆ, ಗೃಹೋಪಯೋಗಿ ವಸ್ತುಗಳ ಹಂತವನ್ನು ದಾಟಿ ಈಗ ಈ ತುಣುಕುಗಳು ಬಾಡೂಟ, ಔತಣಗಳ ಸ್ವರೂಪ ಪಡೆದುಕೊಂಡಿವೆ. ಸಸ್ಯಾಹಾರಿಗಳಿಗಾಗಿ ಸಮಾರಾಧನೆಗಳನ್ನು ಏರ್ಪಡಿಸಿದರೂ ಅಚ್ಚರಿಯೇನಿಲ್ಲ. ಏಕೆಂದರೆ ತಾವು ಎಸೆಯುವುದನ್ನು ಆಯ್ದುಕೊಳ್ಳುವ ಜನರು ನಮ್ಮ ನಡುವೆ ಇದ್ದಾರೆ ಎಂಬ ವಾಸ್ತವದ ಅರಿವು ರಾಜಕೀಯ ಪಕ್ಷಗಳಿಗಿದೆ. ಹಾಗೆಯೇ ಚುನಾವಣೆಗಳು ಬಂತೆಂದರೆ ನಮ್ಮ ಮನೆ ಬಾಗಿಲಿಗೆ ಯಾವುದಾದರೂ ವಸ್ತುಗಳು ಬಂದು ಬೀಳುತ್ತವೆ ಎಂಬ ಖಾತರಿ ಜನಸಾಮಾನ್ಯರಲ್ಲೂ ಇದೆ. ಈ ವಿಕೃತ ಸನ್ನಿವೇಶಕ್ಕೆ ಕಾರಣ ಯಾರು?

75 ವರ್ಷಗಳ ಸ್ವಾತಂತ್ರ್ಯವನ್ನು ಪೂರೈಸಿರುವ ಭಾರತದ ಸಾಮಾನ್ಯ ಜನರು ಸಂವಿಧಾನ ನೀಡಿರುವ ಮತದ ಹಕ್ಕು, ಪ್ರತಿಯೊಂದು ಮತದ ಮೌಲ್ಯ ಮತ್ತು ಮತದಾನ ಎಂಬ ಕಾಲಿಕ ಪ್ರಕ್ರಿಯೆಯ ಹಿಂದಿನ ಸದುದ್ದೇಶಗಳನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಂಡಿದ್ದಾರೆಯೇ ಎಂಬ ಪ್ರಶ್ನೆಯೇ ನಮ್ಮನ್ನು ವಿಚಲಿತಗೊಳಿಸುತ್ತದೆ. ಆರಂಭದಲ್ಲಿ ಉಲ್ಲೇಖಿಸಿದ ಡಾ. ಬಿ.ಆರ್. ಅಂಬೇಡ್ಕರ್ ಅವರ ನುಡಿಗಳ ಹಿಂದಿರುವ ಕಾಳಜಿ, ಕಳಕಳಿ ಮತ್ತು ಆತಂಕಗಳನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡಾಗ ಮಾತ್ರ ನಮಗೆ ಮತ ಮತ್ತು ಮತದಾನದ ಮೌಲ್ಯವೂ ಅರ್ಥವಾಗಲು ಸಾಧ್ಯವಾದೀತು. ಸಂವಿಧಾನವೇ ನಮ್ಮ ಉಸಿರು, ಪ್ರಜಾಪ್ರಭುತ್ವವೇ ನಮ್ಮ ಜೀವಾಳ ಎಂಬ ಪ್ರತಿಯೊಂದು ಘೋಷಣೆಯ ಹಿಂದೆಯೂ ಮತ್ತೊಂದು ಅರ್ಥಸೂಸುವ 'ಮತ' ಅಥವಾ ಧರ್ಮ ಪ್ರೇರಿತ ರಾಜಕಾರಣವನ್ನು ತಿರಸ್ಕರಿಸುವ ಇಚ್ಛಾಶಕ್ತಿಯೂ ಇದ್ದಾಗ ಮಾತ್ರವೇ ಅಂಬೇಡ್ಕರ್ ಅವರ ಆಶಯಗಳನ್ನು ಸಾಕಾರಗೊಳಿಸಲು ಸಾಧ್ಯವಾಗುತ್ತದೆ. ಇತ್ತೀಚೆಗೆ ಸುಪ್ರೀಂಕೋರ್ಟ್ ನ್ಯಾಯಪೀಠವೂ ಇದೇ ಮಾತನ್ನು ಹೇಳಿರುವುದನ್ನು ಗಮನಿಸಬೇಕಿದೆ.



ಸಂವಿಧಾನ ಸಾರ್ವಭೌಮ ಪ್ರಜೆಗಳಿಗೆ ನೀಡಿರುವ ಮತದ ಮೌಲ್ಯ ಅರಿವಾಗುವುದು ಮತದಾನದ ಸಂದರ್ಭದಲ್ಲಿ ಮತ್ತು ಮತದಾರನ ವ್ಯಕ್ತಿಗತ ನೆಲೆಯಲ್ಲಿ ಮಾತ್ರ. ಒಂದು ಮತಕ್ಕೆ ಒಂದು ಮೌಲ್ಯ ಇದೆ ಎಂದಾದರೆ ಆ ಮೌಲ್ಯ ಯಾವುದು? ಬಿಕರಿಯಾಗಬಹುದಾದ ಮಾರುಕಟ್ಟೆ ಮೌಲ್ಯವೋ ಅಥವಾ ಸಂವಿಧಾನ–ಪ್ರಜಾತಂತ್ರವನ್ನು ರಕ್ಷಿಸಲು ಅಗತ್ಯವಾದ ವಾಸ್ತವಿಕ ಮೌಲ್ಯವೋ ? 18 ವರ್ಷಗಳನ್ನು ಪೂರೈಸುತ್ತಲೇ ಮತದಾರ ಎನಿಸಿಕೊಳ್ಳುವ ಪ್ರತಿಯೊಬ್ಬ ಪ್ರಜೆಗೂ ಪ್ರಥಮ ಮತದಾನ ಮಾಡುವ ಕ್ಷಣದಲ್ಲಿ ತನ್ನ ಸುತ್ತಲಿನ ಸಮಾಜವನ್ನು ಕಣ್ತೆತ್ತಿ ನೋಡುವ ವ್ಯವಧಾನ ಇರಬೇಕಾಗುತ್ತದೆ. " ಮೊದಲ ಸಲ ಮತ ಚಲಾಯಿಸುವ ಮತದಾರ" ತಾನು ನಿಂತ ನೆಲ, ತಾನು ರೂಪಿಸಿಕೊಂಡ ಬದುಕು ಮತ್ತು ತನ್ನ ಸುತ್ತ ಢಾಳಾಗಿ ಕಾಣುವ ಸಾಮಾನ್ಯ ಜನತೆಯ ವಾಸ್ತವ ಬದುಕು ಇವುಗಳನ್ನು ಗಮನಿಸದೆ ಹೋದರೆ, ಆ ವ್ಯಕ್ತಿಗೆ ಮತ ಮತ್ತು ಮತದಾನದ ಮೌಲ್ಯ ಅರ್ಥವಾಗಿಲ್ಲ ಎಂದೇ ಅರ್ಥ. ಸಂವಿಧಾನ ನೀಡಿರುವ ಎಲ್ಲ ಪ್ರಜಾಸತ್ತಾತ್ಮಕ ಹಕ್ಕುಗಳನ್ನೂ, ಸೌಲಭ್ಯಗಳನ್ನೂ ಬಳಸಿಕೊಂಡೇ ತಮ್ಮದೇ ಆದ ಹಿತಕರ ಗೂಡು ಕಟ್ಟಿಕೊಂಡಿರುವ ಸುಶಿಕ್ಷಿತರೂ ಸಹ ತಮ್ಮ ಪೂರ್ವಸೂರಿಗಳ ಸಾಮಾಜಿಕ ಕಾಳಜಿ–ಕಳಕಳಿ ಮತ್ತು ಆಶಯಗಳನ್ನು ಮರೆತು, ಸರ್ವಾಧಿಕಾರ ಮತ್ತು ನಿರಂಕುಶಾಧಿಕಾರದ ಆಲೋಚನಾ ವಿಧಾನಗಳಿಗೆ ಬಲಿಯಾಗುತ್ತಿರುವುದನ್ನು ವರ್ತಮಾನದ ಸಂದರ್ಭದಲ್ಲಿ ವಿಷಾದದಿಂದಲೇ ಗಮನಿಸಬೇಕಿದೆ. ಈ ಬೃಹತ್ ಸಂಖ್ಯೆಯ ಯುವ ಸಮೂಹವನ್ನೇ ರಾಜಕೀಯ ಪಕ್ಷಗಳು ತಮ್ಮ ಸೈದ್ಧಾಂತಿಕ ಆಮಿಷಗಳ ಮೂಲಕ ಆಕರ್ಷಿಸುತ್ತವೆ. ಬಂಡವಾಳಶಾಹಿ ಮಾರುಕಟ್ಟೆ ವ್ಯವಸ್ಥೆ ಮುಂದಿಡುವ ಕ್ಷಿಪ್ರ ಪ್ರಗತಿಯ ಹಾದಿಗಳು ಮತ್ತು ಈ ಹಾದಿಯಲ್ಲಿ ಕಾಣಬಹುದಾದಂತಹ ಭ್ರಮಾಲೋಕದ



ಸರಕುಗಳು ಭವಿಷ್ಯ ಭಾರತದ ಸಂಕೇತಗಳಾಗಿ ಕಾಣುವುದು ಸಹಜ. ಈ ದೇಶದ ಬಹುತೇಕ ಮಾಧ್ಯಮಗಳೂ ಸಹ ತಮ್ಮ ವೃತ್ತಿಪರತೆಯನ್ನೇ ಕಳೆದುಕೊಂಡು, ವಂದಿಮಾಗಧ ಸಂಸ್ಕೃತಿಯನ್ನು ರೂಢಿಸಿಕೊಂಡಿರುವುದರಿಂದ, ಇದೇ ಭ್ರಮಾಲೋಕವನ್ನೇ ಮತ್ತಷ್ಟು ರಂಜನೀಯವಾಗಿ ಬಿತ್ತರಿಸುತ್ತಿರುತ್ತವೆ. ಒಂದೆಡೆ ಹಿರಿಯ ಪೀಳಿಗೆಯು ಜಾತಿ, ಧರ್ಮ ಮತ್ತು ಸಾಮುದಾಯಿಕ ಅಸ್ಮಿತೆಗಳಿಗೆ ಬಲಿಯಾಗಿ ತಮ್ಮ ಮತದ ಮೌಲ್ಯವನ್ನು ಮರೆಯುತ್ತಿದ್ದರೆ ಮತ್ತೊಂದೆಡೆ ಯುವ ಸಮೂಹ ಭ್ರಮಾಧೀನತೆಗೆ ಬಲಿಯಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಮತದ ಮೌಲ್ಯ ಮತ್ತು ಅಪಮೌಲ್ಯ

ಮತದ ಮೌಲ್ಯ ಎಂದರೇನು? ಈ ಪ್ರಶ್ನೆ ಇಂದು ಪ್ರತಿಯೊಬ್ಬ ಶ್ರೀಸಾಮಾನ್ಯನನ್ನೂ ಕಾಡಬೇಕಿದೆ. ಪ್ರಜಾಪ್ರಭುತ್ವದಲ್ಲಿ ಜನಾಭಿಪ್ರಾಯವೇ ಅಂತಿಮ ಎಂದಾದಲ್ಲಿ, ಈ ಜನಾಭಿಪ್ರಾಯಕ್ಕೆ ತನ್ನದೇ ಆದ ಸ್ವಾಯತ್ತತೆಯೂ ಇರಬೇಕಲ್ಲವೇ? ಈ ಸ್ವಾಯತ್ತತೆ ಮೂಡುವುದಾದರೂ ಹೇಗೆ? ಜನತೆಯಲ್ಲಿ ಸ್ವಂತ ಆಲೋಚನೆ, ಚಿಂತನೆ ಮತ್ತು ಅಭಿವ್ಯಕ್ತಿಯ ನೆಲೆಗಳು ಸ್ಪಷ್ಟವಾದಾಗ ಮಾತ್ರ ಇದು ಸಾಧ್ಯ. ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥ ರಾಜಕಾರಣಕ್ಕಾಗಿ ಜಾತಿ, ಧರ್ಮ ಮತ್ತು ಪ್ರಾದೇಶಿಕ ಅಸ್ಮಿತೆಗಳನ್ನೇ ಮಾರುಕಟ್ಟೆಯ ತಂತ್ರಗಳಂತೆ ಬಳಸಿಕೊಂಡು ಈ ಸ್ವಾಯತ್ತತೆಯ ನೆಲೆಗಳನ್ನು ಭ್ರಷ್ಟಗೊಳಿಸುತ್ತಿರುತ್ತವೆ. ಈ ತಂತ್ರಗಾರಿಕೆಯನ್ನೇ ಪ್ರಜೆಗಳು ಪ್ರತಿ ಚುನಾವಣೆಯ ಸಂದರ್ಭದಲ್ಲಿ ಎಸೆಯಲಾಗುವ ತುಣುಕುಗಳ, ಪೊಳ್ಳು ಆಶ್ವಾಸನೆಗಳ, ಮಾಯಾ ನಗರಿಗಳ ಮತ್ತು ಭವಿಷ್ಯದ ಭ್ರಮೆಗಳ ನಡುವೆ ಕಾಣುತ್ತಿರುತ್ತಾರೆ. 75 ವರ್ಷಗಳಿಂದಲೂ ಇದೇ ಪರಂಪರೆಯನ್ನು ಮತದಾರರಾದ ನಾವು ಪೋಷಿಸುತ್ತಲೂ ಬಂದಿದ್ದೇವೆ ಅಲ್ಲವೇ?

ಪ್ರತಿಯೊಬ್ಬರಿಗೂ ಸೂರು, ಮನೆಮನೆಗೂ ವಿದ್ಯುತ್, ಹಳ್ಳಿಹಳ್ಳಿಗೂ ರಸ್ತೆ, ಎಲ್ಲ ಮಕ್ಕಳಿಗೂ ಶಿಕ್ಷಣ, ಎಲ್ಲ ಮನೆಗಳಿಗೂ ಶೌಚಾಲಯ ಇವೇ ಮುಂತಾದ ಆಶ್ವಾಸನೆಗಳು ಪ್ರತಿಯೊಂದು ಚುನಾವಣೆಯಲ್ಲೂ ಕೇಳಿಬರುವುದೇ ಆಳುವ ವರ್ಗಗಳ ವೈಫಲ್ಯದ ಸೂಚಕ ಅಲ್ಲವೇ? ರೈತರ ಆದಾಯ ದುಪ್ಪಟ್ಟು ಮಾಡುವ ಭರವಸೆಯನ್ನೇ 2002ರ ವಾಜಪೇಯಿ ಸರ್ಕಾರದ ಅವಧಿಯಿಂದಲೂ ಕೇಳುತ್ತಲೇ ಬಂದಿದ್ದೇವೆ. ಇಂದಿಗೂ ರೈತನ ಬದುಕು ಅನಿಶ್ಚಿತತೆಯ ನೆರಳಲ್ಲೇ ಸಾಗುತ್ತಿದೆ. ಮಾರುಕಟ್ಟೆ ಆರ್ಥಿಕ ನೀತಿಗಳನ್ನು ಅನುಸರಿಸುವುದರಿಂದ ಭಾರತ ಸ್ವರ್ಗವಾಗುತ್ತದೆ ಎಂಬ ಭರವಸೆಯ ನಡುವೆಯೇ ಭಾರತ ಮೂರು ದಶಕಗಳ ಮಾರುಕಟ್ಟೆ ಆರ್ಥಿಕತೆಯನ್ನು ಕಂಡಿದೆ. ಆದರೆ ಸ್ವರ್ಗ ಎನ್ನುವ ಕಲ್ಪನೆಯೇ ಸಾಪೇಕ್ಷವಾದುದರಿಂದ, ಬಡತನ ಹಸಿವೆ ನಿರ್ಗತಿಕತೆ ಅಭದ್ರತೆ ಮತ್ತು ಸಾಮಾಜಿಕ ಕ್ರೌರ್ಯಗಳು ನಮ್ಮ ಕಣ್ಣಿಗೆ ಕಾಣದಂತಾಗುತ್ತವೆ.

ಈ ಸನ್ನಿವೇಶದಲ್ಲಿ ನಮಗೆ ಮತದ ಮೌಲ್ಯ ಮುಖ್ಯವಾಗುತ್ತದೆ. ನಾವು ಚಲಾಯಿಸುವ ಮತ ಯಾರನ್ನು ಆಯ್ಕೆ ಮಾಡಲು ನೆರವಾಗುತ್ತದೆ ಎನ್ನುವುದಕ್ಕಿಂತಲೂ, ಆಯ್ಕೆಯಾಗುವ ವ್ಯಕ್ತಿ ಅಥವಾ ಪಕ್ಷ ನಮ್ಮ ಹಾಗೂ ಸುತ್ತಲಿನ ಸಮಾಜದ ದೈನಂದಿನ ಬದುಕಿಗೆ ಯಾವ ರೀತಿಯಲ್ಲಿ ಸ್ಪಂದಿಸಬಹುದು ಎಂಬ ಪ್ರಶ್ನೆ ನಮ್ಮನ್ನು ಕಾಡಬೇಕಿದೆ. ಸರ್ವರಿಗೂ ಶಿಕ್ಷಣ ಎಂಬ ಉದಾತ್ತ ಘೋಷಣೆಯೊಂದಿಗೆ ವಾಜಪೇಯಿ ಸರ್ಕಾರ ಜಾರಿಗೊಳಿಸಿದ ಸರ್ವಶಿಕ್ಷಣ ಅಭಿಯಾನ ಎಷ್ಟರ ಮಟ್ಟಿಗೆ ಸಮಸ್ತ ಪ್ರಜೆಗಳಿಗೂ ಪ್ರಾಥಮಿಕ ಶಿಕ್ಷಣವನ್ನು ಒದಗಿಸಿದೆ ಎಂಬ ಪ್ರಶ್ನೆ ನಮ್ಮನ್ನು ಕಾಡದೆ ಹೋದರೆ, ನಮಗೆ ಮತದ ಮೌಲ್ಯ ಅರಿವಾಗಿಲ್ಲ ಎಂದೇ ಅರ್ಥೈಸಬೇಕಾಗುತ್ತದೆ. ಹಸಿವು, ಬಡತನ, ಅನಕ್ಷರತೆ, ಅನೈರ್ಮಲ್ಯ, ಅನಾರೋಗ್ಯ ಮತ್ತು ನಿರುದ್ಯೋಗ ಈ ಸಮಸ್ಯೆಗಳು ನಮ್ಮ ಸುತ್ತಲಿನ ಬೀದಿಗಳಲ್ಲೇ ತಾಂಡವಾಡುತ್ತಿರುವುದಕ್ಕೆ ಕಾರಣಗಳಾದರೂ ಏನು ಎಂಬ ಯೋಚಿಸುವ ವ್ಯವಧಾನವನ್ನು ಬೆಳೆಸಿಕೊಂಡರೆ ಮಾತ್ರವೇ ತಾನು ಚಲಾಯಿಸುವ ಪ್ರತಿಯೊಂದು ಮತದ ➚

ರಾಮ ನವಮಿ ಹೆಸರಲ್ಲಿ ಕೋಮುಗಲಭೆ

ಪ್ರಕಾಶ ಕಾರತ್



ಮಾರ್ಚ್ 30 ರಂದು ರಾಮನವಮಿ ಆಚರಣೆಯ ಸಂದರ್ಭದಲ್ಲಿ ವಿವಿಧ ಸ್ಥಳಗಳಲ್ಲಿ ಭುಗಿಲೆದ್ದ ಹಿಂಸಾಚಾರ ಮತ್ತು ಘರ್ಷಣೆಗಳು ಮೊದಲೇ ನಿರೀಕ್ಷಿಸಲಾದ ಘಟನೆಯಾಗಳಾಗಿವೆ. ಹಲವು ವರ್ಷಗಳಿಂದ ಹಿಂದುತ್ವ ಶಕ್ತಿಗಳು ರಾಮನವಮಿ ಮೆರವಣಿಗೆಗಳನ್ನು ಮುಸ್ಲಿಮರ ಮೇಲಿನ ಆಕ್ರಮಣ ಮತ್ತು ದಾಳಿಯ ಸಾಧನವಾಗಿ ರೂಪಿಸಿವೆ. ಕಳೆದ ವರ್ಷ, 2022 ರಲ್ಲಿ, ರಾಮನವಮಿ ಮೆರವಣಿಗೆಗಳು ಮಧ್ಯಪ್ರದೇಶದ ಖಾರ್ಗೋನ್, ಮಹಾರಾಷ್ಟ್ರ, ಗುಜರಾತ್, ಗೋವಾ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದ ಹೌರಾದ ಶಿಬ್ಪುರ್ ಪ್ರದೇಶದಲ್ಲಿ ವ್ಯಾಪಕ ದಾಳಿ ಮತ್ತು ಘರ್ಷಣೆಗಳಿಗೆ ಕಾರಣವಾಯಿತು.

ಈ ವರ್ಷವೂ, ರಾಮನವಮಿ ಹಬ್ಬವು ರಂಜಾನ್ ಅವಧಿಯಲ್ಲಿ ಸಂಭವಿಸಿವೆ. ಮುಸ್ಲಿಮರು ರಂಜಾನ್ ಮತ್ತು ಮಸೀದಿಗಳಲ್ಲಿ ಪ್ರಾರ್ಥನೆಗಳನ್ನು ಆಚರಿಸುವ ಪ್ರದೇಶಗಳಲ್ಲಿ ಪ್ರಚೋದನೆಗಳಿಗೆ ವೇದಿಕೆಯನ್ನು ಒದಗಿಸಿತು.

ಮಾರ್ಚ್ 30 ಮತ್ತು ನಂತರದ ದಿನಗಳಲ್ಲಿ, ಜಲಗಾಂವ್, ಮಲಾಡ್ ಮತ್ತು ಔರಂಗಾಬಾದ್ (ಈಗ ಸಂಭಾಜಿನಗರ ಎಂದು ಹೆಸರಿಸಲಾಗಿದೆ) ನಲ್ಲಿ ಹಿಂಸಾಚಾರ ಮತ್ತು ದಾಳಿಗಳು ನಡೆದವು, ಅಲ್ಲಿ ಒಬ್ಬ ವ್ಯಕ್ತಿಯನ್ನು ಕೊಂದರು. ಬಿಹಾರದಲ್ಲಿ ಸಸಾರಾಮ್ ಮತ್ತು ಬಿಹಾರ ಷರೀಫ್‌ನಲ್ಲಿ ಗಂಭೀರ ಹಿಂಸಾಚಾರ ಭುಗಿಲೆದ್ದಿತು. ಹರ್ಯಾಣ ಮತ್ತು ಗುಜರಾತ್‌ನ ವಡೋದರಾದಲ್ಲಿ ಘಟನೆಗಳು ನಡೆದಿವೆ. ಪಶ್ಚಿಮ ಬಂಗಾಳದ ಹೌರಾದಲ್ಲಿ ರಾಮನವಮಿ ಮೆರವಣಿಗೆಯಲ್ಲಿ ಹಿಂಸಾಚಾರ ಭುಗಿಲೆದ್ದಿತು. ನಂತರ ಹೂಗ್ಲಿ ಜಿಲ್ಲೆಯ ರಿಶ್ರಾದಲ್ಲಿ ಘರ್ಷಣೆಗಳು ಸಂಭವಿಸಿದವು.

ಬಿಜೆಪಿ ಆಡಳಿತವಿರುವ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳ ಹೊರತಾಗಿ, ರಾಮನವಮಿ ಮೆರವಣಿಗೆಗಳಿಗೆ ಸಂಬಂಧಿಸಿದ ಹಿಂಸಾಚಾರವು ಪಶ್ಚಿಮ ಬಂಗಾಳ ಮತ್ತು ಬಿಹಾರದಲ್ಲಿ ಕೇಂದ್ರೀಕೃತವಾಗಿತ್ತು. ಆರೆಸ್ಸೆಸ್ ಬೆಂಬಲಿತ ಸಂಘಟನೆಗಳು ಪಶ್ಚಿಮ ಬಂಗಾಳದಲ್ಲಿ ರಾಮನವಮಿ ಮೆರವಣಿಗೆಗಳನ್ನು ಮುಸ್ಲಿಂ ಪ್ರದೇಶಗಳಿಗೆ ಪ್ರವೇಶಿಸಲು ಮತ್ತು ಮಸೀದಿಗಳ ಹೊರಗೆ ಪ್ರಚೋದನೆಯನ್ನು ಸೃಷ್ಟಿಸಲು, ಜೋರಾಗಿ ಸಂಗೀತ ನುಡಿಸಲು, ಬೆಂಕಿಯಿಡುವ ಘೋಷಣೆಗಳನ್ನು ಕೂಗಲು ಮತ್ತು ಕತ್ತಿಗಳು ಮತ್ತು ಇತರ ಆಯುಧಗಳನ್ನು ಝುಳಪಿಸುವುದಕ್ಕೆ ಬಳಸಿಕೊಂಡಿರುವುದು ಸ್ಪಷ್ಟವಾಗಿದೆ. ಪರಿಣಾಮವಾಗಿ, ಹೌರಾ ಮತ್ತು ದಲ್ಖೋಲಾದಲ್ಲಿ ಹಿಂಸಾಚಾರ ಭುಗಿಲೆದ್ದಿತು, ಅಲ್ಲಿ ಒಬ್ಬ ವ್ಯಕ್ತಿ ಸಾವನ್ನಪ್ಪಿದರು ಮತ್ತು ಹಲವರು ಗಾಯಗೊಂಡರು.

ಹೌರಾದಲ್ಲಿ ರಾಮನವಮಿ ಮೆರವಣಿಗೆ ಮಾರ್ಗವನ್ನು ಬೇರೆಡೆಗೆ ತಿರುಗಿಸುವುದನ್ನು ತಡೆಯಲು ಪೊಲೀಸರು ಮತ್ತು ಆಡಳಿತವು ಅಗತ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳದಿರುವುದು ಆಶ್ಚರ್ಯಕರವಾಗಿದೆ. ಕೆಲವೆಡೆ ಪೊಲೀಸರು ಸ್ಥಳದಿಂದ ಪಲಾಯನ ಮಾಡಿದ್ದು, ಇನ್ನು ಕೆಲವೆಡೆ ಗುಂಪು ದಾಳಿಗೆ ಕೈಜೋಡಿಸಿದ್ದು ಕಂಡುಬಂತು. ಹಿಂದುತ್ವ ಶಕ್ತಿಗಳ ಆಟಕ್ಕೆ ಕಡಿವಾಣ ಹಾಕಲು ದೃಢವಾದ ಕ್ರಮಗಳನ್ನು ತೆಗೆದುಕೊಳ್ಳದ ಮಮತಾ ಬ್ಯಾನರ್ಜಿ ಸರ್ಕಾರವನ್ನು ದೂಷಿಸಬೇಕಾಗಿದೆ. ಅವರಿಗೆ ಮುನ್ನೆಚ್ಚರಿಕೆ ಇರಲಿಲ್ಲವೆಂದಲ್ಲ. ಕಳೆದ ವರ್ಷವೂ ಹೌರಾದ ಶಿಬ್‌ಪುರದಲ್ಲಿ ಘರ್ಷಣೆ ನಡೆದಿತ್ತು.

ಹಿಂದಿನ ವರ್ಷಗಳಲ್ಲಿ, ಆರ್‌ಎಸ್‌ಎಸ್–ಬಿಜೆಪಿ ರಾಮನವಮಿ ಮೆರವಣಿಗೆಗಳನ್ನು ಕೋಮು ಉದ್ವಿಗ್ನತೆ ಮತ್ತು ಘರ್ಷಣೆಗಳನ್ನು ಸೃಷ್ಟಿಸಲು ಬಳಸಿಕೊಂಡಿತ್ತು. ತೃಣಮೂಲ ಕಾಂಗ್ರೆಸ್ ತಮ್ಮ ಕೋಮುವಾದಿ ಅಜೆಂಡಾವನ್ನು ಎದುರಿಸುವ ಬದಲು ರಾಮ ನವಮಿ ದಿನದಂದು ಅಂತಹ ಮೆರವಣಿಗೆಗಳಲ್ಲಿ ಭಾಗವಹಿಸಲು ಅಥವಾ ತಾನೇ ಪ್ರಾರಂಭಿಸಿತು. ಪ್ರಸ್ತುತ ಸನ್ನಿವೇಶದಲ್ಲಿ, ಅಲ್ಪಸಂಖ್ಯಾತರ ಮೇಲೆ ಮೇಲುಗೈ ಸಾಧಿಸುವ ಭಯದ ಮನೋವಿಕಾರವನ್ನು ನಗದೀಕರಿಸಿದ ಮೇಲೆ ಟಿಎಂಸಿ ಕೂಡ ಇದೇ ವ್ಯವಹಾರ ಮಾಡುತ್ತಿದೆ.

ರಾಜ್ಯದಲ್ಲಿ ಅವಳಿ ರಾಜಕಾರಣವನ್ನು ಮುಂದುವರಿಸಲು ಬಿಜೆಪಿ ಮತ್ತು ಟಿಎಂಸಿ ಎರಡೂ ಪಕ್ಷಗಳು ಆಸಕ್ತಿ ಹೊಂದಿರುವುದರಿಂದ ಕೋಮು ವಿಭಜನೆಯನ್ನು ಸೃಷ್ಟಿಸುವ ಪ್ರಯತ್ನಗಳಲ್ಲಿ ಭಾಗಿಯಾಗಿವೆ. ವಿಶೇಷವಾಗಿ, ಸಿಪಿಐ(ಎಂ) ಮತ್ತು ಎಡರಂಗವು ಟಿಎಂಸಿಯ ಭ್ರಷ್ಟ ಆಡಳಿತದ ವಿರುದ್ಧ ಹುರುಪಿನ ಪ್ರಚಾರವನ್ನು ನಡೆಸುತ್ತಿರುವ ಸಮಯದಲ್ಲಿ, ಇದು ಜನರಲ್ಲಿ ಆಕರ್ಷಣೆಯನ್ನು ಗಳಿಸಿದೆ.

ಬಿಹಾರದಲ್ಲಿ, ಬಿಹಾರ ಷರೀಫ್ ಮತ್ತು ಸಸಾರಾಮ್ ಭೀಕರ ಹಿಂಸಾಚಾರಕ್ಕೆ ಸಾಕ್ಷಿಯಾಗಿವೆ. ಅಲ್ಲಿ ಮಸೀದಿಗಳು, ಮದರಸಾಗಳು, ಮನೆಗಳು, ವಾಹನಗಳು ಮತ್ತು ಅಂಗಡಿಗಳನ್ನು ಲೂಟಿ ಮಾಡಿ ಬೆಂಕಿ ಹಚ್ಚಲಾಯಿತು. ಅತ್ಯಂತ ಆಘಾತಕಾರಿ ಘಟನೆಯೆಂದರೆ ಮದ್ರಸಾ ಇ–ಅಝೀಝಿಯಾ ಎಂಬ ಹಳೆಯ ಶಿಕ್ಷಣ ಸಂಸ್ಥೆಗಳ ಮೇಲೆ ಬೆಂಕಿ ಹಚ್ಚಿ 4,500 ಪುಸ್ತಕಗಳು ಮತ್ತು ಅಪರೂಪದ ಹಸ್ತಪ್ರತಿಗಳೊಂದಿಗೆ ಬೆಂಕಿ ಹಚ್ಚಿ ನಾಶಪಡಿಸಲಾಯಿತು.

ಬಿಹಾರದಲ್ಲಿ, ನಿತೀಶ್ ಕುಮಾರ್ ಸರ್ಕಾರವು ಹಿಂದುತ್ವ ಶಕ್ತಿಗಳ ನೀಚ ಅಜೆಂಡಾವನ್ನು ನಿಭಾಯಿಸಲು ಸರಿಯಾದ ಜಾಗರೂಕತೆ ಮತ್ತು ಸನ್ನದ್ಧತೆಯನ್ನು ನಡೆಸದೆ ಸಂತೃಪ್ತಿ ತೋರುತ್ತಿದೆ. ನಿತೀಶ್ ಕುಮಾರ್ ಮತ್ತು ಜೆಡಿಯು ಮಹಾಘಟಬಂಧನ್‌ಗೆ ಹಿಂದಿರುಗಿದಾಗಿನಿಂದ, ಬಿಜೆಪಿ ಪ್ರತ್ಯೇಕವಾಗಿದೆ. ಪ್ರಸ್ತುತ ರಾಮನವಮಿ ದಿನದ ಹಿಂಸಾಚಾರವು ಆರೆಸ್ಸೆಸ್–ಬಿಜೆಪಿ ತನ್ನ ರಾಜಕೀಯ ಸ್ಥಾನವನ್ನು ಗಟ್ಟಿಗೊಳಿಸಲು ಕೋಮು ಧ್ರುವೀಕರಣವನ್ನು ಸೃಷ್ಟಿಸಲು ಆಟದ ಯೋಜನೆ ರೂಪಿಸಿದೆ ಎಂದು ತೋರಿಸುತ್ತದೆ. ಇತ್ತೀಚೆಗೆ ಸರನ್‌ನಲ್ಲಿ ಗೋಮಾಂಸ ಸಾಗಿಸಿದ ಆರೋಪದ ಮೇಲೆ ಮುಸ್ಲಿಂ ಯುವಕನೊಬ್ಬನನ್ನು ಹತ್ಯೆಗೈದ ಘಟನೆ ಎಚ್ಚರಿಕೆಯ ಸಂಕೇತವಾಗಿತ್ತು. ಯಾವುದೇ ಕೋಮು ಪ್ರಚೋದನೆಗಳನ್ನು ತಡೆಗಟ್ಟಲು ರಾಜ್ಯ ಸರ್ಕಾರ ಮತ್ತು ಆಡಳಿತವು ಎಚ್ಚರದಿಂದಿರಬೇಕು. ಪಶ್ಚಿಮ ಬಂಗಾಳಕ್ಕೆ ಭಿನ್ನವಾಗಿ, ಮಹಾಘಟಬಂಧನ್ ಸರ್ಕಾರ ಕೋಮುವಾದಿ ಸಿದ್ಧಾಂತ ಮತ್ತು ಶಕ್ತಿಗಳನ್ನು ಎದುರಿಸುವಲ್ಲಿ ದೃಢವಾಗಿರಬೇಕು. ಮತ್ತು ಇದು ಸರ್ಕಾರದ ದೃಢವಾದ ಆಡಳಿತಾತ್ಮಕ ಕ್ರಮಗಳ ಮೂಲಕ ವ್ಯಕ್ತವಾಗಬೇಕು.

ಕೇಂದ್ರದ ಪಾತ್ರವು ಸ್ಪಷ್ಟವಾಗಿ ಪಕ್ಷಪಾತದಿಂದ ಕೂಡಿದೆ. ಗೃಹ ಸಚಿವ ಅಮಿತ್ ಶಾ ಅವರು ಎರಡು ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಮಾತನಾಡದೆ ರಾಜ್ಯಪಾಲರೊಂದಿಗೆ ಕೋಮು ಪರಿಸ್ಥಿತಿಯ ಬಗ್ಗೆ ಮಾತನಾಡಿದ್ದಾರೆ. ರಾಜ್ಯಪಾಲರು ಚುನಾಯಿತ ರಾಜ್ಯ ಸರ್ಕಾರಗಳನ್ನು ಮೀರಿಸುವ ಪಾತ್ರವನ್ನು ವಹಿಸುತ್ತಾರೆ ಎಂದು ಕೇಂದ್ರವು ನಿರೀಕ್ಷಿಸುತ್ತಿದೆ ಎಂಬುದರ ಸಂಕೇತವಾಗಿದೆ. ಇದಲ್ಲದೆ, ಬಿಹಾರ ಪ್ರವಾಸದಲ್ಲಿ ಅಮಿತ್ ಶಾ ಅವರು ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಯಾವುದೇ ಕೋಮುಗಲಭೆ ಮಾಡುವುದಿಲ್ಲ ಎಂದು ಘೋಷಿಸಿದರು. ಗಲಭೆಕೋರರನ್ನು ತಲೆಕೆಳಗಾಗಿ ಗಲ್ಲಿಗೇರಿಸುವುದಾಗಿ ಅವರು ಘೋಷಿಸಿದರು– ಮುಸ್ಲಿಮರು ಗಲಭೆಕೋರರು ಮತ್ತು ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂಬ ಸಂದೇಶ ಇದು.

ಧಾರ್ಮಿಕ ಹಬ್ಬಗಳಾದ ರಾಮ ನವಮಿ, ಗಣೇಶ ಚತುರ್ಥಿ ಮತ್ತು ಇತ್ತೀಚೆಗೆ ಪ್ರಕಟವಾದ ಹನುಮ ಜಯಂತಿಗಳನ್ನು ಅಲ್ಪಸಂಖ್ಯಾತರನ್ನು ಗುರಿಯಾಗಿಸಲು ಮತ್ತು ಕೋಮುಗಲಭೆ ಮತ್ತು ಧ್ರುವೀಕರಣವನ್ನು ಸೃಷ್ಟಿಸಲು ಅಸ್ತ್ರವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳು ಮತ್ತು ಬಿಜೆಪಿಯೇತರ ರಾಜ್ಯ ಸರ್ಕಾರಗಳು, ನಿರ್ದಿಷ್ಟವಾಗಿ, ರಾಜಕೀಯವಾಗಿ ಮತ್ತು ಆಡಳಿತಾತ್ಮಕವಾಗಿ ಈ ಆಕ್ರಮಣಕಾರಿ ಕೋಮು ಸಂಚಲನಗಳನ್ನು ಎದುರಿಸಲು ತಂತ್ರವನ್ನು ರೂಪಿಸಬೇಕು.

ಅನು: ಸಿಚಿ

ಮೌಲ್ಯವೂ ಮತದಾರನಿಗೆ ಅರ್ಥವಾಗುತ್ತದೆ. ಇದನ್ನು ಅರ್ಥಮಾಡಿಸುವ ಜವಾಬ್ದಾರಿ ಯಾರದು? ಮತದಾರ ಜಾಗೃತಿ ಎನ್ನುವ ಪರಿಕಲ್ಪನೆಯಲ್ಲಿ ಮೊಳೆಯುವ ಚಿಂತನೆಗಳಿಗೆ ಈ ಪ್ರಶ್ನೆಯೇ ಬುನಾದಿಯಾಗಬೇಕು. ಮತ–ಮತದಾರ ಮತ್ತು ಮತದಾನ ಈ ಮೂರೂ ವಿದ್ಯಮಾನಗಳ ಮೌಲ್ಯ ಅರ್ಥವಾಗಬೇಕಾದರೆ ಮೊದಲು ನಮಗೆ ಸಂವಿಧಾನದ ಆಶಯಗಳ ಅರಿವು ಅಗತ್ಯವಾಗಿ ಇರಬೇಕು. ಸಂವಿಧಾನವನ್ನು ಅರಿಯುವುದಕ್ಕೂ, ಸಾಂವಿಧಾನಿಕ ಆಶಯಗಳನ್ನು ಅರ್ಥಮಾಡಿಕೊಳ್ಳುವುದಕ್ಕೂ ನಡುವೆ ಇರುವ ಸೂಕ್ಷ್ಮ ವ್ಯತ್ಯಾಸವನ್ನೂ ನಾವು ಅರಿತಿರಬೇಕು. ಏಕೆಂದರೆ ಪ್ರಸ್ತುತ ಸಂದರ್ಭದಲ್ಲಿ ನಾವೇ ನೋಡುತ್ತಿರುವಂತೆ, ಸಂವಿಧಾನದ ಚೌಕಟ್ಟಿನ ಒಳಗೇ ಈ ಆಶಯಗಳನ್ನು ಉಲ್ಲಂಘಿಸುವ ಕಾಯ್ದೆ ಕಾನೂನುಗಳು ಜಾರಿಯಾಗುತ್ತಿವೆ. ಹಾಗಾಗಿ ಮತದ ಮೌಲ್ಯವನ್ನು ಅಳೆಯಲು ಮಾಪನವಾಗಿ ಬಳಕೆಯಾಗಬೇಕಿರುವುದು ಸಂವಿಧಾನದ ಆಶಯಗಳು. ಇದನ್ನು ಉಲ್ಲಂಘಿಸಲು ನೆರವಾಗುವ ಪ್ರತಿಯೊಂದು ಮತವೂ ತನ್ನ ವಾಸ್ತವಿಕ ಮೌಲ್ಯವನ್ನು ಕಳೆದುಕೊಳ್ಳುತ್ತದೆ.

ಹಾಗಾಗಿ ಮತದ ಮೌಲ್ಯ ಎಂದಾಗ ನಮಗೆ ಅಪಮೌಲ್ಯೀಕರಣಕ್ಕೊಳಗಾಗುತ್ತಿರುವ ಶ್ರೀಸಾಮಾನ್ಯರ, ಸುಶಿಕ್ಷಿತರ ಮತಗಳು ಕಂಡುಬರುತ್ತವೆ. ತಮ್ಮ ಬದುಕು ರೂಪಿಸಿಕೊಳ್ಳಲು ಹಕ್ಕೊತ್ತಾಯಗಳಿಗಾಗಿ ಆಶ್ರಯಿಸುವ ಸೈದ್ಧಾಂತಿಕ ನೆಲೆಗಳನ್ನು ಚುನಾವಣೆಗಳ ಸಂದರ್ಭದಲ್ಲಿ ಧಿಕ್ಕರಿಸಿ, ಅದೇ ಹಕ್ಕುಗಳನ್ನು ಕಸಿದುಕೊಳ್ಳುವ ಪಕ್ಷಗಳಿಗೆ ಮತ ನೀಡುವ ಈ 'ಪ್ರಜ್ಞಾವಂತ' ಮತದಾರರಲ್ಲಿ ಜಾಗೃತಿ ಮೂಡಿಸುವುದು ಆದ್ಯತೆಯೂ ಆಗಬೇಕಿದೆ. ಸಂವಿಧಾನದ ಆಶಯದಂತೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಅಡಿಪಾಯದ ಮೇಲೆ 75 ವರ್ಷಗಳ ಕಾಲ ಕೋಟ್ಯಂತರ ಜನರ ಪರಿಶ್ರಮದೊಂದಿಗೆ ನಿರ್ಮಿತವಾಗಿರುವ ಪ್ರಜಾಸತ್ತಾತ್ಮಕ ಭಾರತವನ್ನು ರಕ್ಷಿಸುವುದೆಂದರೆ ಸಾಂವಿಧಾನಿಕ ಆಶಯಗಳಾದ ಭ್ರಾತೃತ್ವ, ಸೌಹಾರ್ದತೆ ಮತ್ತು ಬಹುತ್ವವನ್ನು ಕಾಪಾಡುವುದೇ ಆಗಿದೆ. ಮತದಾರರಲ್ಲಿ ಜಾಗೃತಿ ಮೂಡಿಸುವುದೆಂದರೆ ಈ ಆಶಯಗಳನ್ನು ಸಾಕಾರಗೊಳಿಸುವ ವೇದಿಕೆ ನಿರ್ಮಿಸುವುದೇ ಆಗಿರುತ್ತದೆ. ಜನರು ಚಲಾಯಿಸುವ 'ಮತ'ದ ಸ್ವಾಯತ್ತತೆ, ಮತದಾರನ ಸ್ವಂತಿಕೆ ಮತ್ತು ಮತದಾನದ ಪಾವಿತ್ರ್ಯತೆ ಈ ಮೂರೂ ವಿದ್ಯಮಾನಗಳನ್ನು ಆರಂಭದಲ್ಲಿ ಉಲ್ಲೇಖಿಸಿರುವ ಅಂಬೇಡ್ಕರ್ ಅವರ ಮಾತುಗಳ ಚೌಕಟ್ಟಿನೊಳಗಿಟ್ಟು ನೋಡಿದಾಗ ನಮಗೆ ಪ್ರತಿಯೊಂದು ಮತದ ಮೌಲ್ಯವನ್ನು ಅಳೆಯುವ ಮಾನದಂಡಗಳೂ ಸ್ಪಷ್ಟವಾಗುತ್ತವೆ. ಮತದಾರ ಜಾಗೃತಿಯ ಕಾರ್ಯಸೂಚಿಯಾಗಿ ನಾವು ಈ ಮಾನದಂಡಗಳನ್ನೇ ಅನುಸರಿಸಬೇಕಿದೆ. ಆಗಲೇ ಪ್ರಜಾಪ್ರಭುತ್ವದ ನೆಲೆಗಳನ್ನು ಸಂರಕ್ಷಿಸಲು ಸಾಧ್ಯ.







ಕರ್ನಾಟಕದ ಸಾಮರಸ್ಯ ಪರಂಪರೆ

ಡಾ. ಮೀನಾಕ್ಷಿ ಬಾಳಿ

ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯ್ಯಾಯಿಕಾಃ॥
ಅರ್ಹನ್ನಿತ್ಯಥ ಜೈನ ಶಾಸನ ರತಾಃ ಕರ್ಮೇತು ಮೀಮಾಂಸಕಃ
ಸೋಽಯಂ ವೋ ವಿಧಧಾತು ವಾಂಛಿತ ಫಲಂ ಕೇಶವೇಶಸ್ಸದಾ॥

ಕ್ರಿ.ಶ. 1050 ರಲ್ಲಿ ರಚನೆಯಾದ ಬೇಲೂರಿನ ಶಾಸನವೊಂದರಲ್ಲಿ ಧರ್ಮ ಸಮನ್ವಯತೆಯನ್ನು ಹೀಗೆ ಎತ್ತಿ ತೋರಿಸಲಾಗಿದೆ. ಶೈವರು ಶಿವನೆಂದು, ವೇದಾಂತಿಗಳು ಬ್ರಹ್ಮನೆಂದು, ಬೌದ್ಧರು ಬುದ್ಧನೆಂದು, ನೈಯಾಯಿಕರು ಶಬ್ದ ಪ್ರಮಾಣವೆನ್ನುವ, ಜೈನರು ಜಿನನೆಂದು ಮೀಮಾಂಸಕರು ಕರ್ತೃ–ಕರ್ಮವೆಂದು ಯಾವ ಶಕ್ತಿಯನ್ನು ಆರಾಧಿಸುತ್ತಾರೋ ಅದು ಕೇಶವನೇ ಆಗಿದ್ದು, ಸಕಲರಿಗೂ ಇಚ್ಛಿತ ಫಲವನ್ನು ನೀಡುತ್ತಿದೆ ಎಂಬ ನಂಬಿಕೆ ಇಲ್ಲಿದೆ. ಇರುವ ಒಂದೇ ಸತ್ಯಕ್ಕೆ ನಾಮ ಹಲವು. ಮಾರ್ಗ ಹಲವು. ಆಚರಣೆ, ವಿಧಿ, ವಿಧಾನ ಏನೇ ಇರಲಿ ಎಲ್ಲವೂ ಮನುಷ್ಯರನ್ನು ಒಂದು ಆತ್ಯಂತಿಕ ಸ್ಥಿತಿಯತ್ತ ನಡೆಸುತ್ತವೆ ಎನ್ನುತ್ತಾರೆ ದಾರ್ಶನಿಕರು. ಅಂದರೆ ಆ ಕಾಲಕ್ಕಾಗಲೇ ಕರ್ನಾಟಕ ಒಳಗೊಂಡಂತೆ ಭಾರತದಲ್ಲಿ ಹತ್ತಾರು ಪಂಥಗಳು, ಲೆಕ್ಕವಿಲ್ಲದಷ್ಟು ದಾರ್ಶನಿಕ ಧಾರೆಗಳು ಅಸ್ತಿತ್ವಗೊಂಡಿದ್ದವು. ಜನರು ಹಲವು ನಂಬಿಕೆಗಳಲ್ಲಿ ಹಂಚಿ ಹೋಗಿದ್ದರು. ಆದರೆ ಎಲ್ಲರ ಹುಟ್ಟು, ಸಾವು, ಬದುಕಿನ ತತ್ವಗಳು ಮಾತ್ರ ಏಕವಾಗಿದ್ದವಲ್ಲ. ನೆಲದ ಮೇಲಿನ ಬದುಕು ಎಲ್ಲರಿಗೂ ಒಂದೇ. ಮತ್ತು ಅದು ಮಾತ್ರ ಏಕೈಕ ಸತ್ಯವಾಗಿತ್ತು. ಬದುಕು ನಂಬಿಕೆಯ ಸಂಗತಿಯಲ್ಲ. ಅದು ವಾಸ್ತವ. ಹುಟ್ಟು–ಸಾವುಗಳ ಮಧ್ಯದ ಬದುಕು ಬಹಳ ಮುಖ್ಯ ಮತ್ತು ನಿತ್ಯ ಸತ್ಯವು ಆಗಿದೆ. ಹುಟ್ಟಿದ ಎಲ್ಲರಿಗೂ ಬದುಕುವ ಸಮಾನ ಹಕ್ಕು ಮತ್ತು ಅವಕಾಶವನ್ನು ನಿಸರ್ಗ ನೀಡಿದೆ. ನಿಸರ್ಗ ಮಡಿಲಿನಲ್ಲಿ ಸಚರಾಚರ ಜೀವಿಗಳೆಲ್ಲ ಸಮಾನವಾಗಿವೆ.

ವಿಕಸಿತ ಮೆದುಳು ಹೊಂದಿದ ಮನುಷ್ಯ ಪ್ರಾಣಿಗಳು ತಮಗಾಗಿ ಹತ್ತಾರು ಸಂಗತಿಗಳನ್ನು ಗುಡ್ಡೆ ಹಾಕಿಕೊಂಡಿವೆ. ಹೀಗೆ ಗುಡ್ಡೆ ಹಾಕೊಕೊಂಡ ಸಂಗತಿಗಳಲ್ಲಿ ಧರ್ಮವು ಒಂದು. ಮನುಷ್ಯರ ಅದಮ್ಯ ಕುತೂಹಲ ಮತ್ತು ದಣಿವರಿಯದ ಅನ್ವೇಷಣೆಯಿಂದಾಗಿ ಭೂಮಿಯ ಮೇಲೆ ಅನೇಕ ಧರ್ಮಗಳು ಹುಟ್ಟಿಕೊಂಡಿವೆ. ಅತ್ಯಂತ ಪ್ರಾಚೀನ ಕಾಲದಿಂದಲೂ ಭಾರತವೆಂಬ ಭೂಪ್ರದೇಶದಲ್ಲಿ ಮಾನವ ವಾಸವು ಅಸ್ತಿತ್ವಗೊಂಡಿದ್ದರಿಂದ ಇಲ್ಲಿ ಕಾಲಕಾಲಕ್ಕೂ ಹಲವು ಧರ್ಮ, ಮತ, ಪಂಥಗಳು ಹುಟ್ಟಿಕೊಂಡಿವೆ. ಹೊರಗಿನಿಂದಲೂ ಅನೇಕ ಧರ್ಮಗಳು ಹರಿದು ಬಂದಿವೆ. ಹೀಗೆ ಹರಿದು ಬಂದ ಧರ್ಮಗಳು ಕೂಡ ಸ್ಥಳೀಯ ಮತ, ಪಂಥಗಳೊಂದಿಗೆ ಕೊಡು–ಕೊಳೆ ನಡೆಸಿ ಸಾಮರಸ್ಯದ ಬಾಳನ್ನು ಹೂಡಿವೆ. ಕ್ರಮೇಣ ಧರ್ಮಗಳನ್ನು ಗುತ್ತಿಗೆ ತೆಗೆದುಕೊಂಡ ಪುರೋಹಿತರು ಮತ್ತು ನಿಸರ್ಗ ಸಂಪತ್ತಿನ ಮೇಲೆ ತಮ್ಮದೆ ಆಧಿಪತ್ಯ ಸ್ಥಾಪಿಸಬೇಕೆಂದು ಹಪಹಪಿ ಉಳ್ಳವರು ಧರ್ಮ ಮತ್ತು ದೇವರುಗಳನ್ನು ದುರ್ಬಳಕೆ ಮಾಡಿಕೊಂಡರು. ತಮ್ಮ ಧರ್ಮ ಮಾತ್ರ ಶ್ರೇಷ್ಠ ಉಳಿದವು ಅಪ್ರಯೋಜಕ ಎಂದು ವಾದಿಸತೊಡಗಿದರು. ಇಂಥವರೇ ಧರ್ಮಾಂಧರಾಗಿ, ಮೂಲಭೂತವಾದಿಗಳಾಗಿ ತಮ್ಮ ಮತ, ಪಂಥಗಳಲ್ಲದವರನ್ನು ದಮನಿಸುವ ಕ್ರೂರತನಕ್ಕೆ ಇಳಿದರು. ಮನುಷ್ಯರ ಒಳಿತಿಗಾಗಿ ಹುಟ್ಟಿದ ಧರ್ಮಗಳು ಮನುಷ್ಯರ ಮಾರಣ ಹೋಮಕ್ಕೆ ಕಾರಣವಾದವು. ದಾರ್ಶನಿಕರು ಮಾತ್ರ ಧರ್ಮಾಂಧರ ಈ ನಡೆಗಳನ್ನು ಖಂಡಿಸುತ್ತಲೆ ಬಂದರು. ಕರ್ನಾಟಕದಲ್ಲಿಯಂತೂ ಧರ್ಮ ಸಮನ್ವಯಕಾರರು ಇಡೀ ದೇಶಕ್ಕೆ ಮಾದರಿಯಾಗುವಂತೆ ಬಾಳಿ ಹೋಗಿದ್ದಾರೆ.

ಕನ್ನಡದ ಮೊದಲ ಕೃತಿ ಕವಿರಾಜ ಮಾರ್ಗದಲ್ಲಿ "ಕಸವರಮೆಂಬುದು ನೆರೆ। ಸೈರಿಲಾರ್ಪೊಡೆ ಪರವಿಚಾರಮಂ ಧರ್ಮಮುಮಂ। ಕಸವೇಂ ಕಸವರಮೇನುಬ್ಬಸಮಂ ಬಸಮಲ್ಲದಿರ್ದು ಮಾಡುವುವೆಲ್ಲಂ॥" ಎಂದು ಹೇಳಲಾಗಿದೆ. ಇದರರ್ಥ, ಇತರರ ವಿಚಾರವನ್ನು ಧರ್ಮವನ್ನು ಸಹಿಸಿಕೊಳ್ಳುವುದೇ ನಿಜವಾದ ಬಂಗಾರ. ಇಂತಹ ಗುಣವಿಲ್ಲದಿದ್ದರೆ ಬಂಗಾರವೂ ಕಸವೇ. ತನ್ನ ಧರ್ಮವನ್ನು ಪಾಲಿಸಬೇಕು. ಇತರ ಧರ್ಮವನ್ನು ಗೌರವಿಸಬೇಕು. ಹೀಗೆ ಬದುಕುವುದೇ ನಿಜವಾದ ಆಧ್ಯಾತ್ಮ ಎಂದು ರಾಮಕೃಷ್ಣ ಪರಮಹಂಸರು ಬೋಧಿಸಿದರು.

ಸಂಪತ್ತಿನ ಮೇಲೆ ತಮ್ಮದೆ ಒಡೆತನ ಸಾಧಿಸಬೇಕೆಂಬ ಸತ್ತಾವಾದಿಗಳು ಪುರೋಹಿತರೊಂದಿಗೆ ಸೇರಿ ದೇವರು ಮತ್ತು ಧರ್ಮದ ಹೆಸರಿನಿಂದ ಜನಸಾಮಾನ್ಯರ ಮಧ್ಯೆ ಎಷ್ಟೆಲ್ಲ ಭೇದಗಳನ್ನು ಸೃಷ್ಟಿಸಿ ಸ್ವಾರ್ಥ ಸಾಧಿಸಬೇಕೆಂದು ಪ್ರಯತ್ನ ಪಟ್ಟರೂ ಅದುಸಾಧ್ಯವಾಗಲಿಲ್ಲ. ಜನಸಾಮಾನ್ಯರು ಮತ್ತು ನಿಜವಾದ ದಾರ್ಶನಿಕರು ಸಮತೆ, ಮಮತೆಗಳೆ ಜೀವನದ ಪರಮ ಸಾಧನ ಎಂದು ಹೇಳಿದಷ್ಟೇ ಅಲ್ಲ ಅದನ್ನು ಬದುಕಿಯೂ ತೋರಿದರು. ಈಗಲೂ ಕರ್ನಾಟಕದ ತುಂಬ ಹರಿದಾಡುತ್ತಿರುವ ಭಾವೈಕ್ಯದ ನೆಲೆ, ನಂಬಿಕೆಗಳನ್ನು ಕಾಣಬಹುದು.

ಬಾದಾಮಿ ಚಾಲುಕ್ಯ ದೊರೆ ವಿಜಯಾದಿತ್ಯನು ಶಕವರ್ಷ 621ರಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ತ್ರಿಮೂರ್ತಿ ದೇವಾಲಯ ಕಟ್ಟಿಸುತ್ತಾನೆ. ಹರಿಹರ ಸಮನ್ವಯದ ಮೂರ್ತಿಗಳಂತೂ ಕನ್ನಡ ನಾಡಿನ ಉದ್ದಕ್ಕೂ ದೊರೆಯುತ್ತವೆ. ರಾಷ್ಟ್ರಕೂಟರ 3ನೇ ಜಯಸಿಂಹನ ಅಕ್ಕ ಅಕ್ಕಾದೇವಿ ಎಂಬಾಕೆ ಬೌದ್ಧ, ಜೈನ, ಶೈವ, ವೈಷ್ಣವ ಎಲ್ಲ ಧರ್ಮಗಳ ಪ್ರಕ್ರಿಯೆಗಳನ್ನು ತಾನೇ ಸ್ವತಃ ಆಚರಿಸುತ್ತಿದ್ದಳೆಂದು ಶಾಸನ ಹೇಳುತ್ತದೆ. ಮೈಸೂರು ಅರಸರಂತೂ ಅದೇ ಆಗ ತಾನೇ ಕನ್ನಡ ನಾಡಿನಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಮುಸ್ಲಿಂ ಧರ್ಮವನ್ನು ಪುರಸ್ಕರಿಸಿ ಅವರಿಗಾಗಿ ಮಸೀದಿ ಕಟ್ಟಿಸಿಕೊಟ್ಟಿದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ. ಅದಕ್ಕಾಗಿಯೇ ಶಾಸನದಲ್ಲಿ ಕರ್ನಾಟಕವನ್ನು 'ಬಹುಧರ್ಮಧೇನು ನಿವಹಕ್ಕಾಡಂಬೊಲ' ಎಂದು ಹೇಳಲಾಗಿದೆ. ಅಂದರೆ ಹಲವು ಧರ್ಮಗಳೆಂಬ ಆಕಳುಗಳು ಆರಾಮವಾಗಿ ಮೇಯುವ ಹುಲುಸಾದ ಭೂಮಿ ಇದು ಎಂದರ್ಥ. ಹೀಗಾಗಿಯೇ ಸೂಫಿಗಳ ಮೂಲಕ ಬಂದ ಇಸ್ಲಾಂ, ಮಿಷನರಿಗಳ ಸೇವೆಯ ಮೂಲಕ ಪ್ರಸರಿಸಿದ ಕ್ರೈಸ್ತ ಧರ್ಮಗಳು ಇಲ್ಲಿನ ಶೈವ, ವೈಷ್ಣವ, ಬೌದ್ಧ, ಜೈನಗಳೊಂದಿಗೆ ಸಂಕರಗೊಂಡು ಸ್ಥಳೀಯ ಸಂಸ್ಕೃತಿಯಲ್ಲಿ ಲೀನವಾದವು. ಎಲ್ಲವುಗಳನ್ನು ಕಲಸು ಮೇಲೋಗರ ಮಾಡಿಕೊಂಡ ವಿಶಿಷ್ಠ ಜೀವನ ವಿಧಾನವೊಂದನ್ನು ಕರ್ನಾಟಕ ಒಳಗೊಂಡಂತೆ ಭಾರತೀಯರು ಅಪ್ಪಿಕೊಂಡರು. ಆದ್ದರಿಂದ ಇವರಿಗೆ ಹರಿ–ಹರ–ಹಜರತ್ ರಲ್ಲಿ ಯಾವ ಭೇದ ಕಾಣಿಸಲಿಲ್ಲ. ಶಿವ, ವಿಷ್ಣು, ಅಲ್ಲಾ, ಏಸು, ನಿರಾಕಾರ ಎಲ್ಲವನ್ನು ಏಕವಾಗಿಸುವ ಇವರ ಮಾನಸಿಕ ಪಕ್ವತೆ, ಜೀವನಾನುಭವ, ಪ್ರಾಯೋಗಿಕ ದಾರ್ಶನಿಕೆಗಳು ವಿಶ್ವಕ್ಕೆ ಮಾದರಿಯಾಗಿ ನಿಂತಿವೆ. ಇದನ್ನೆ ವಿವೇಕಾನಂದ ಚಿಕ್ಯಾಗೋನಲ್ಲಿ ಹೇಳಿ ವಿಶ್ವವ್ಯಾಪಿ ಮೆಚ್ಚುಗೆ ಪಡೆದುಕೊಂಡರು.

ಕನ್ನಡ ನಾಡವರು ಕೇವಲ ತಾತ್ವಿಕವಾಗಿ ಮಾತ್ರ ಸಾಮರಸ್ಯ ಹೇಳಲಿಲ್ಲ. ಬದುಕಿನ ಪ್ರತಿ ಹಂತದಲ್ಲಿಯೂ ಧರ್ಮ ಸಮನ್ವಯತೆಯನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಊರಿನ ಜಾತ್ರೆ, ಹಬ್ಬಗಳಲ್ಲಿಯೂ ಇದನ್ನು ಕಾಣುತ್ತೇವೆ. ಸುರಪೂರಿನ ತಿಂತಣಿ ಮೋನಪ್ಪಯ್ಯನ ಜಾತ್ರೆಯಲ್ಲಿ ಬ್ರಾಹಣರಾದಿ ದಲಿತ, ಮುಸ್ಲಿಂ ಎಲ್ಲರೂ "ಏಕ ಲಾಕ್ ಪಾಚೋ ಪೀರ್ ಪೈಗಂಬರ ಕಾಶಿಪತಿ ಗಂಗಾಧರ ಹರಹರ ಮಹದೇವ" ಎಂದೇ ಜಯಕಾರ ಹಾಕುತ್ತಾರೆ. ಕಲಬುರಗಿಯ ಸೂಫಿ ಸಂತ ಖಾಜಾ ಬಂದೇ ನವಾಜರ ಉರುಸ್ ಗೆ ಶರಣಬಸವೇಶ್ವರ ಸಂಸ್ಥಾನದಿಂದ ಹೂ, ಚಾದರ್ ನೇಮ ಸಲ್ಲಿಸಿದರೆ ಶರಣಬಸವನ ಜಾತ್ರೆಗೆ ದರ್ಗಾದಿಂದ ಗಂಧ, ಶಲ್ಯ ಬರುತ್ತದೆ. ಗದಗ ತೋಟದಾರ್ಯ ಮಠದ ಜಾತ್ರೆಗೆ ಮುಸ್ಲಿಂ ಬಂಧುಗಳ ಉಸ್ತುವಾರಿ ಇದ್ದರೆ ಕಲಬುರಗಿಯ ಗೋಗಿಯ ಚಂದಾಪೀರನ ಉರುಸಿನಲ್ಲಿ ಗೌಡರಿಗೆ ಜಾಜ ಇರುತ್ತದೆ. ಕೊಡೆಕಲ್ ಬಸವಣ್ಣನ ಗದ್ದುಗೆಯಲ್ಲಿ ದಲಿತರು ಪೂಜೆಗೆಂದು ನೀರು ತರುತ್ತಾರೆ. ಮುಸ್ಲಿಂರು ಹೂವಿನ ಸೇವೆ ಮಾಡುತ್ತಾರೆ. ಜಂಗಮರು ವಚನ ಪಠಿಸುತ್ತಾರೆ. ನಮ್ಮ ನಾಡಿನ ಪ್ರತಿ ಹಳ್ಳಿಗಳ ಜಾತ್ರೆಗಳಲ್ಲಿ ದೇವರು ಹಿಂದೂ, ಮುಸ್ಲಿಂ, ದಲಿತ, ಹಿಂದುಳಿದ ಜಾತಿ ಹೀಗೆ ಯಾವುದೇ ಮತಾಚಾರಕ್ಕೆ ಸೇರಿರಲಿ. ಗ್ರಾಮಸ್ಥರು ಮಾತ್ರ ಎಲ್ಲ ದೇವರ ಜಾತ್ರೆಗಳಲ್ಲಿ ಭಾಗವಹಿಸುತ್ತಾರೆ. ಉತ್ತರ ಕರ್ನಾಟಕದಲ್ಲಿಯಂತೂ ಮೊಹರಂ ಹಬ್ಬವನ್ನು ಹಿಂದೂ ಮುಸ್ಲಿಂ ಎರಡು ಸಮುದಾಯದವರು ಭರ್ಜರಿಯಾಗಿ ಆಚರಿಸುತ್ತಾರೆ. ಮೊಹರಂ ಆಚರಿಸುವೆಡೆಯಲ್ಲಿ ಗ್ರಾಮದ ಎಲ್ಲರ ಮನೆಯಿಂದ ಕಾಯಿ, ಕರ್ಪೂರ, ನೈವೇದ್ಯ, ಚಾದರ್ ತಪ್ಪದೆ ಬರುತ್ತದೆ. ದಕ್ಷಿಣ ಕರ್ನಾಟಕದ ಕರಗ ಆಚರಣೆಯಲ್ಲಿ ಕರಗದ ಮೂರ್ತಿಯನ್ನು ಶೃಂಗರಿಸುವಲ್ಲಿ ಮುಸ್ಲಿಂ ಪಾತ್ರ ಹಿರಿದು. ಗ್ರಾಮ ದೇವತೆಯ ಜಾತ್ರೆಗೆ ಮದುವೆಯಾಗಿ ಬೇರೆ ಊರಿಗೆ ಹೋಗಿದ್ದ ಲಿಂಗಾಯತ, ದಲಿತ, ಕುರುಬ, ಕಬ್ಬಲಿಗ, ಮುಸ್ಲಿಂ, ಅಲೆಮಾರಿ ಎಲ್ಲ ಸಮುದಾಯದ ಹೆಣ್ಣುಮಕ್ಕಳು ತಪ್ಪದೆ ಬರುತ್ತಾರೆ. ಬಳೆ ತೊಟ್ಟು, ಬೆಂಡು ಬತ್ತಾಸು ಖರೀದಿಸಿಯೇ ತಮ್ಮೂರಿಗೆ ಮರಳುತ್ತಾರೆ. ಕಲಬುರಗಿ ಜಿಲ್ಲೆ ಆಳಂದ ತಾಲೂಕಿನ ಲಾಡಮುಗಳಿ ಎಂಬ ಹಳ್ಳಿಯ ಮಹಿಳೆಯರು ವಿದೇಶದಲ್ಲಿದ್ದರೂ ಮೊಹರಂ ಹಬ್ಬಕ್ಕೆ ಊರಿಗೆ ಬಂದ ಉದಾಹರಣೆಗಳಿವೆ. ಕಡಕೋಳ ಮಡಿವಾಳಪ್ಪನವರ ಜಾತ್ರೆಗೆ ದುಬೈನಲ್ಲಿದ್ದ ಎಲ್ಲ ಮುಸ್ಲಿಂ ಬಾಂಧವರು ತಪ್ಪದೆ ದೇಣಿಗೆ ನೀಡುತ್ತಾರೆ. ಬೆಳಗಾಂವ ಜಿಲ್ಲೆ ಸಾವಳಗಿ ಶಿವಲಿಂಗನ ರುಮಾಲು ಹಸಿರು. ಆತನ ಸನ್ನಿಧಿಗೆ ಮಣಿಯದ ಜಾತಿ, ಧರ್ಮಗಳೇ ಇಲ್ಲ. ಆಳಂದ ತಾಲೂಕಿನ ಗೋಳ್ಯಾದ ಲಕ್ಕಮ್ಮನ ಜಾತ್ರೆಯಲ್ಲಿ ಮಾಡುವ ಸ್ವಾದಿಷ್ಟ ಮಾಂಸದಡಿಗೆ ಉಣ್ಣದವರೇ ಇಲ್ಲ. ಇಂದಿಗೂ ಗಣಪತಿಯ ಮೂರ್ತಿಗಳನ್ನು ದೊಡ್ಡ ಮಟ್ಟದಲ್ಲಿ ತಯಾರಿಸುವವರು ಮುಸ್ಲಿಂ ಬಂಧುಗಳೇ.

ಕನ್ನಡ ತತ್ವಪದಗಳಂತೂ ಸರ್ವ ಜನಾಂಗದ ದರ್ಶನ ಸಾರವಾಗಿವೆ. ಕನ್ನಡ ನಾಡಿನಲ್ಲಿ ಅಸ್ತಿತ್ವದಲ್ಲಿರುವ ಪ್ರತಿ, ಮತ, ಪಂಥದ ಅನುಭಾವಿಗಳು ತತ್ವಪದಗಳನ್ನು ಬರೆದಿದ್ದಾರೆ. ಅದರಲ್ಲಿಯೂ 20ಕ್ಕೂ ಹೆಚ್ಚು ಮುಸ್ಲಿಂ ಕವಿಗಳು ಬಹು ಮಹತ್ವದ ಪದ ರಚಿಸಿದ್ದಾರೆ. ಪಿಂಜಾರ ಬಡೇಸಾಬನು ರಾಮದಾಸನಾಗಿ ಕೀರ್ತನೆಗಳನ್ನು ರಚಿಸಿ ಸೈ ಎನಿಸಿಕೊಂಡಿದ್ದಾನೆ. 'ಅನುಭಾವ' ಎಂಬುದು ಅಂತರಂಗದ ಮುತ್ತು. ಇದಕ್ಕೆ ಜಾತಿ, ಧರ್ಮ, ಭಾಷೆ, ಪ್ರದೇಶ, ಗಡಿಗಳ

ಪುಟ 10 ಕ್ಕೆ



ಅಮಾಯಕ ಇದ್ರೀಶ್ ಕೊಲೆ ದೀರ್ಘ ಸಂಚಿನ ಭಾಗ






ಟಿ.ಎಲ್.ಕೃಷ್ಣೇಗೌಡ

ನೀರೆಲ್ಲಾ ಇಂಗಿಹೋದ ಅಸಹಾಯಕ ಆ ಕಣ್ಣುಗಳು!! ಇದ್ರಿಶ್ ಪಾಷಾನ ಹೆಂಡತಿ ತನ್ನ ಗಂಡ ಬರುವ ನಿರೀಕ್ಷೆಯನ್ನು ದಫನು ಮಾಡಿ, ಅಳುವ ಮೂರು ತಿಂಗಳ ಕಂದನನ್ನು ಸಮಾಧಾನ ಪಡಿಸುತ್ತ, ಆಡುವ ಮೂರು ವರ್ಷದ ಕಂದನಿಗೆ ಗದರುತ್ತ ನಮ್ಮನ್ನು ಬರಮಾಡಿಕೊಂಡು ಹೇಳಿದ ಆಕೆಯ ಮಾತುಗಳು ನಮ್ಮ ಮನಸ್ಸುಗಳನ್ನು ಕಲಕಿತು. ಹೀಗೆ ಹೋಗಿ ಹಾಗೆ ಬಂದು ಬಿಡ್ತೀನಿ ಎಂದು ಮಕ್ಕಳಿಗೂ, ಹೆಂಡತಿಗೂ ಹೇಳಿ ಹೋದ ಇದ್ರಿಶ್ ಪಾಷಾ ಇನ್ನೆಂದೂ ಹಿಂದಿರುಗುವಂತಿರಲಿಲ್ಲ. "ಮೃತದೇಹ ಮನೆಗೆ ಬರುವವರೆಗೂ ಗಂಡನ ಕೊಲೆಯಾಗಿರುವ ವಿಷಯವನ್ನು ಯಾರೂ ತಿಳಿಸಿರಲಿಲ್ಲ. ಗಾಯದ ಗುರುತುಗಳನ್ನು ನೋಡಿ ಕೊಲೆಯಾಗಿರುವ ವಿಷಯ ಗೊತ್ತಾಯಿತು. ಶವದ ಸ್ನಾನ ಮಾಡಿಸುವಾಗ ಚರ್ಮ ಕಿತ್ತು ಬರುತ್ತಿತ್ತು. ಗಂಡನಿಗೆ ಚಿತ್ರಹಿಂಸೆ ಕೊಟ್ಟು ಕೊಂದಿದ್ದಾರೆ. ವಿದ್ಯುತ್ ಶಾಕ್ ನೀಡಿ ಕೊಂದಿದ್ದಾರೆ ಚುಚ್ಚಿ, ಚುಚ್ಚಿ ಕೊಂದಿದ್ದಾರೆ. ಅನಾಥವಾದ ನನ್ನ ಮಕ್ಕಳಿಗೆ ಇನ್ಯಾರು ಗತಿ?" ಎಂದು ಗದ್ಗದಿತ ದ್ವನಿಯಲ್ಲಿ ಹೇಳುತ್ತ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.

ಮೊನ್ನೆ 2023 ಏಪ್ರಿಲ್ 4ನೇ ತಾರೀಖು ಮಟ ಮಟ ಮಧ್ಯಾಹ್ನ. ಮಂಡ್ಯದ ಗುತ್ತಲು ಬಡಾವಣೆಯ ಸಪ್ತಾರಿಯಾಬಾದ್‌ನಲ್ಲಿರುವ ಇದ್ರೀಶ್ ಪಾಷಾನ ಮನೆಗೆ ಸಿಪಿಐ(ಎಂ) ಪಕ್ಷದ ಮಂಡ್ಯ ಜಿಲ್ಲಾ ಸಮಿತಿಯ ನಿಯೋಗ ಬೇಟಿ ಕೊಟ್ಟಾಗ ಕಂಡದ್ದು ಈ ಹೃದಯ ವಿದ್ರಾವಕ ದೃಶ್ಯಗಳು.

ಇನ್ನಾರಿಗೂ ನನ್ನ ಸ್ಥಿತಿ ಬಾರದಿರಲಿ

ಇದ್ರಿಶ್ ಪಾಷಾನ ಹೆಂಡತಿ ಫಾತಿಮಾ ಬಾನುಗೆ ಹೆಚ್ಚೆಂದರೆ 30 ವರ್ಷ ವಯಸ್ಸು. ಗಂಡ ಇದ್ರಿಶ್‌ನ ಚಾಲಕ ವೃತ್ತಿಯಿಂದ ಬರುವ ಸಂಪಾದನೆ ಮಕ್ಕಳು ಮತ್ತು ಮನೆಗೆ ಸಾಲದೆಂದು ತಾನೂ ಗಾರ್ಮೆಂಟ್ ಕಾರ್ಖಾನೆಯ ಕೆಲಸಕ್ಕೆ ಹೋಗುತ್ತಿದ್ದಳು. ಈಗ ಮೂರು ತಿಂಗಳಾಗಿರುವ ಎರಡನೇ ಮಗುವಿನ ಹೆರಿಗೆಯ ಸಮಯದಿಂದ ಗಂಡನ ದುಡಿಮೆಯಿಂದಲೇ ಮನೆ ನಡೆಯುತ್ತಿತ್ತು. ದುಡಿಯುತಿದ್ದ ಜೀವವನ್ನೇ ದುರುಳರು ಹರಣ ಮಾಡಿದ್ದರು. ಒತ್ತಿ ಬರುತ್ತಿದ್ದ ದುಃಖವನ್ನು ತಡೆಯುತ್ತಾ ಫಾತಿಮಾ ಬಾನು "ಮಕ್ಕಳಿಗಾಗಿ ಹಗಲಿರುಳೆನ್ನದೆ ದುಡಿಯುತ್ತಿದ್ದ ಗಂಡನನ್ನು ಹೊಡೆದು ಕೊಂದಿದ್ದಾರೆ. ಮೂರು ತಿಂಗಳ ಮಗು ಅಪ್ಪನ ಮುಖವನ್ನೇ ನೋಡಲಿಲ್ಲ. ನನ್ನ ಗಂಡನ ಸಾವಿಗೆ ನ್ಯಾಯ ಕೊಡಿಸಿ. ಇನ್ನಾರಿಗೂ ನನ್ನ ಸ್ಥಿತಿ ಬಾರದಿರಲಿ" ಎಂದರು.



ಎರಡು ಲಕ್ಷ ರೂ. ಗೆ ಒತ್ತಾಯ

ಇದ್ರಿಶ್ ಪಾಷಾ ಏಪ್ರಿಲ್ ಒಂದನೇ ತಾರೀಖು ಕೆ.ಆರ್. ಪೇಟೆ ತಾಲ್ಲೂಕಿನ ತೆಂಡೇಕೆರೆಯಿಂದ ಲಾರಿಯೊಂದನ್ನು ಚಲಾಯಿಸಿಕೊಂಡು ತಮಿಳುನಾಡಿನ ಕೃಷ್ಣಗಿರಿಯ ಕಡೆ ಹೊರಟಿದ್ದ. ಮಳವಳ್ಳಿ, ಹಲಗೂರು ದಾಟಿ ಕನಕಪುರದ ಸಾತನೂರು ಸಮೀಪಿಸುತ್ತಿದ್ದಂತೆ ರಾತ್ರಿ ಹನ್ನೊಂದು ಗಂಟೆ ಹೊತ್ತಿನಲ್ಲಿ ಗುಂಪೊಂದು ಲಾರಿಯನ್ನು ಅಡ್ಡ ಹಾಕಿತು. ಅಡ್ಡ ಹಾಕಿದ್ದು ಪುನೀತ್ ಕೆರೆಹಳ್ಳಿ ಎಂಬ ಆರೆಸ್ಸೆಸ್ ಸಂಘಟನೆಯ ಅಂಗ ಸಂಘ 'ರಾಷ್ಟ್ರ ರಕ್ಷಣಾ ಪಡೆ' ಎಂಬ ಪುಂಡರ ಗುಂಪು. ಈ ಗುಂಪಿನ ಮುಖಂಡ ಪುನೀತ್ ಕೆರೆಹಳ್ಳಿ ಇದ್ರಿಶ್ ಸೇರಿದಂತೆ ಲಾರಿಯಲ್ಲಿದ್ದ ಇನ್ನಿಬ್ಬರನ್ನು, ಎರಡು ಲಕ್ಷ ರೂಪಾಯಿ ಕೊಡುವಂತೆ ಒತ್ತಾಯಿಸಿದ. ಹಣ ಕೊಡಲು ನಿರಾಕರಿಸಿದಾಗ ಒಂದೇ ಸಮನೆ ಬ್ಯಾಟಿನಿಂದ ಹೊಡೆಯಲು ಶುರು ಮಾಡಿದ. ಈತನ ಜೊತೆಗೆ ಆತನ ಸಂಗಡಿಗರೂ ಸೇರಿಕೊಂಡು ಹೊಡೆಯಲು ಮುಂದಾದರು. ಜೀವ ಭಯದಿಂದ ಲಾರಿಯಲ್ಲಿದ್ದ ಮೂರೂ ಜನ ಲಾರಿಯಿಂದ ಜಿಗಿದು ಓಡಲು ಶುರು ಮಾಡಿದರು. ಕತ್ತಲೆಯಲ್ಲಿ ಓಡಲಾರದ ಇದ್ರಿಶ್ ಹತ್ತಿರದ ಕಾಂಪೌಂಡ್ ಹೊಕ್ಕು ಅವಿತು ಕುಳಿತ. ಆತನನ್ನು ಬೆನ್ನಟ್ಟಿದ ಪುನೀತ್ ಕೆರೆಹಳ್ಳಿ ಮತ್ತು ತಂಡ ಕಾಂಪೌಂಡ್ ಒಳಗೆ ಪತ್ತೆ ಹಚ್ಚಿ ಮನಸೋ ಇಚ್ಚೆ ಥಳಿಸಿತು. ಇಲೆಕ್ಟ್ರಿಕಲ್ ಟೀಸರ್ ಗನ್ನಿನಿಂದ ವಿದ್ಯುತ್ ಶಾಕ್ ನೀಡಲು ಆರಂಭಿಸಿತು. ವಿದ್ಯುತ್ ಶಾಕ್‌ನಿಂದಾಗಿ ಮೈಯೆಲ್ಲಾ ಸುಟ್ಟ ಮೇಲೆ, ಕತ್ತು ಮತ್ತು ಕಿವಿಯಂತಹ ಅಂಗಾಂಗಗಳಿಗೆ ಶಾಕ್ ನೀಡಿದರು. ಶಾಕ್ ತಾಳಲಾರದ ಇದ್ರಿಶ್‌ನ ಪ್ರಾಣ ಪಕ್ಷಿ ಹಾರಿ ಹೋಯಿತು ಎನ್ನುವುದು ಒಟ್ಟು ಸಂಗತಿಗಳನ್ನು ಗಮನಿಸಿದಾಗ ಅನಿಸುವುದು.



ದನದ ವ್ಯಾಪಾರಿಯೂ ಅಲ್ಲ. ದಲ್ಲಾಳಿಯೂ ಅಲ್ಲ

ಇದ್ರಿಶ್ ಚಲಾಯಿಸುತ್ತಿದ್ದ ಲಾರಿಯಲ್ಲಿ ತೆಂಡೇಕೆರೆ ವಾರದ ಸಂತೆಯಲ್ಲಿ ಖರೀದಿಸಿದ್ದ ದನಗಳಿದ್ದವು. ವಾರದ ಸಂತೆಯಲ್ಲಿ ಮಾರಲು ಬಂದ ಸುತ್ತಮುತ್ತಲಿನ ಗ್ರಾಮದ ರೈತರಿಂದ ದನಗಳನ್ನು ದನದ ವ್ಯಾಪಾರಿಗಳು ಖರೀದಿಸಿದ್ದರು. ಅದಕ್ಕೆ ಪೂರಕವಾದ ರಶೀದಿಗಳನ್ನೂ ಪಡೆಯಲಾಗಿತ್ತು. ಸಂತೆಯನ್ನು ನಿರ್ವಹಿಸುವ ಗುತ್ತಿಗೆದಾರರು ಕೂಡಾ ತಾವು ಪಡೆದ ಶುಲ್ಕದ ರಶೀದಿ ನೀಡಿದ್ದರು. ಎಲ್ಲವೂ ಕ್ರಮಬದ್ಧವಾಗಿ, ಕಾನೂನುಬದ್ಧವಾಗಿ ನಡೆದಿದ್ದವು. ತೆಂಡೇಕೆರೆ ಸಂತೆಯಿಂದ ಕೃಷ್ಣಗಿರಿಯ ಸಂತೆಗೆ ದನಗಳು ಪ್ರಯಾಣ ಆರಂಭಿಸಿದ್ದವು. ಅಲ್ಲಿ ಆ ದನಗಳು ಯಾರವು ಎಂದು ಚಾಲಕ ಇದ್ರಿಶ್‌ಗೆ ಏನು ಗೊತ್ತಿತ್ತು?

ಇದ್ರಿಶ್ ದನದ ವ್ಯಾಪಾರಿಯೇನೂ ಅಲ್ಲ. ದಲ್ಲಾಳಿಯಂತೂ ಅಲ್ಲವೇ ಅಲ್ಲ. ಹಣ ಕೊಟ್ಟು ದನಗಳನ್ನು ಕೊಂಡವರು ದನದ ವ್ಯಾಪಾರಿಗಳು, ಮಾರಿದವರು ಕಷ್ಟಕ್ಕೋ, ಖುಷಿಗೋ ರೈತರು. ಚಾಲಕ ಇದ್ರಿಶನಿಗೆ ಇದಾವುದರ ಮಾಹಿತಿ ಇಲ್ಲ, ಗೊಡವೆಯೂ ಇಲ್ಲ. ಅವನಿಗೆ ಇದ್ದದ್ದು ಲಾರಿಯನ್ನು ಕೃಷ್ಣಗಿರಿಗೆ ತಲುಪಿಸುವ ಜವಾಬ್ದಾರಿ ಮಾತ್ರ. ಅಷ್ಟನ್ನೇ ತಲೆಯಲ್ಲಿ ಇಟ್ಟುಕೊಂಡು ಸಂತೆ ಮುಗಿದ ಮೇಲೆ ದನಗಳನ್ನು ತುಂಬಿಸಿಕೊಂಡು ರಾತ್ರಿಯ ಊಟ ಮುಗಿಸಿ ಕೃಷ್ಣಗಿರಿಯ ಕಡೆಗೆ ಹೊರಟ. ಹೊರಡುವ ಮುನ್ನ ಅಗತ್ಯ ದಾಖಲೆಗಳನ್ನು ಕೇಳಿಯೇ ಪಡೆದುಕೊಂಡಿದ್ದ. ತೆಂಡೇಕೆರೆಯಿಂದ ಲಾರಿ ಹೊರಟಾಗಲೇ ಅಲ್ಲಿನ ಸಂಘಿಗಳು ಮುಂದಿನ ಸಂಘಿಗಳಿಗೆ ಸುದ್ದಿ ರವಾನಿಸಿ ಸಂಚು ರೂಪಿಸಿದ್ದಾರೆ. ಈ ಯಾವ ಸುಳಿವೂ ರಂಜಾನಿನ ಧ್ಯಾನದಲ್ಲಿದ್ದ ಇದ್ರಿಶನಿಗೆ ಗೊತ್ತಾಗಲೇ ಇಲ್ಲ.

ಪರಿವಾರದ ಸಾಕು ನಾಯಿಗಳು ಸಾತನೂರಿನ ಪೊಲೀಸ್ ಠಾಣೆಯ ಮುಂದಿನ ರಸ್ತೆಯಲ್ಲೆ ಲಾರಿಯನ್ನು ಅಡ್ಡಗಟ್ಟಿದಾಗ ಇದ್ರಿಶ್ ಮತ್ತವನ ಸಂಗಡಿಗರು ಧೈರ್ಯವಾಗಿಯೇ ತಮ್ಮಲ್ಲಿರುವ ದಾಖಲೆಗಳನ್ನು ತೋರಿಸಿ ಹಣ ನೀಡಲು ನಿರಾಕರಿಸಿದ್ದಾರೆ. ಯಾವಾಗ ಇವರು ದಾಖಲೆ ನೋಡುವ ಆಸಾಮಿಗಳಲ್ಲ, ದಾಂದಲೆ ನಡೆಸುವ ಪರಿವಾರಿಗಳು ಎಂದು ತಿಳಿಯಿತೋ, ಆಗ ಲಾರಿಯಿಂದ ಜಿಗಿದು ಜೀವ ಉಳಿಸಿಕೊಳ್ಳಲು ಓಡಲು ಆರಂಭಿಸಿದ್ದಾರೆ. ಇದ್ರಿಶ್ ಓಡಿ ದಣಿದನೇ ಹೊರತು ಜೀವ ಉಳಿಸಿಕೊಳ್ಳಲು ಆಗಲಿಲ್ಲ.

ಬಳಸಿದ್ದು ಎಲೆಕ್ಟ್ರಿಕ್ ಟೀಸರ್ ಗನ್

ಇದ್ರಿಶನ ಜೀವ ತೆಗೆಯಲು ರಾಷ್ಟ್ರ ರಕ್ಷಣಾ ಪಡೆಯೆಂಬ ಸಂಘ ಪರಿವಾರದ ಕೂಸು ಮತ್ತದರ ಕಾಲಾಳು ಪುನೀತ್ ಕೆರೆಹಳ್ಳಿ ಹಾಗೂ ಅವನ ಸಂಗಡಿಗರು ಬಳಸಿದ ಅಸ್ತ್ರ ಎಂತವರನ್ನೂ ಬೆಚ್ಚಿ ಬೀಳಿಸುತ್ತದೆ. ಅವರು ಬಳಸಿದ್ದು ಎಲೆಕ್ಟ್ರಿಕ್ ಟೀಸರ್ ಗನ್ ಎಂಬ ಆಧುನಿಕ ಅಸ್ತ್ರವನ್ನು. ವಿದೇಶಗಳಲ್ಲಿ ಸ್ವಯಂ ರಕ್ಷಣೆಗಾಗಿ ಬಳಸುವ ಈ ಗನ್ ಸುಮಾರು ಮೂವತ್ತು ಅಡಿ ದೂರದಲ್ಲಿ ಇರುವವರನ್ನು ತಾಗಿ ಬಲಿಷ್ಠ ವಿದ್ಯುತ್ ಶಾಕ್ ನೀಡುತ್ತದೆ. ಬ್ಯಾಟರಿಯ ಮೂಲಕ ಕೆಲಸ ಮಾಡುವ ಇದನ್ನು ಇದ್ರಿಶ್ ಪಾಷಾನ ಪ್ರಮುಖ ಅಂಗಗಳಿಗೆ ಶಾಕ್ ನೀಡಲು ಬಳಸಲಾಗಿದೆ. ನಿರಂತರ ವಿದ್ಯುತ್ ಶಾಕ್ ತಡೆದುಕೊಳ್ಳದ ದೇಹ ಸಾವಿಗೆ ಶರಣಾಗಿದೆ. ಪುನೀತ್ ಕೆರೆಹಳ್ಳಿ ಮತ್ತವನ ದುರುಳ ತಂಡ ಕೇಕೆ ಹಾಕಿ ಪರಾರಿಯಾಗಿದೆ.

ಗೋರಕ್ಷಣೆಯ ಮುಖವಾಡ ಹೊತ್ತು ಮುಸಲ್ಮಾನ ಅಲ್ಪಸಂಖ್ಯಾತರಿಗೆ ತೊಂದರೆ ಕೊಡುವುದು, ಆ ಮೂಲಕ ಅವರನ್ನು ಕೆರಳಿಸಿ ಜಗಳಕ್ಕಿಳಿಸಿ, ಅವರ ವಿರುದ್ಧ ಬಹುಸಂಖ್ಯಾತ ಹಿಂದೂಗಳನ್ನು ಛೂ ಬಿಟ್ಟು ರಾಜಕೀಯ ಬೇಳೆ ಬೇಯಿಸಿಕೊಳ್ಳುವುದು ಈ ಪರಿವಾರದ ರೂಢಿಗತ ಚಾಳಿ. ಇಂತಹ ಅವಕಾಶಕ್ಕಾಗಿಯೇ ಕಾಯುತ್ತಿರುವ ಮತ್ತು ಅವಕಾಶ ಸಿಕ್ಕರೆ ಹಳೇ ಮೈಸೂರು ಪ್ರಾಂತ್ಯದಲ್ಲಿ ಬೆಂಕಿ ಹಚ್ಚಿ ರಾಜಕೀಯ ನೆಲೆ ಕಂಡುಕೊಳ್ಳುವ ನಿರೀಕ್ಷೆಯಲ್ಲಿರುವ ಆರೆಸ್ಸೆಸ್–ಬಿಜೆಪಿಗೆ ಸಿಕ್ಕಿದ್ದು ಇದ್ರಿಶ್ ಪಾಷಾ.

ಇದ್ರಿಶ್ ಅವರು ಚಲಾಯಿಸುತ್ತಿದ್ದ ವಾಹನ ತೆಂಡೇಕೆರೆಯಿಂದ ಹೊರಡುವ ಮತ್ತು ಸಾಗುವ ದಾರಿಯ ಇಂಚಿಚೂ ಮಾಹಿತಿ ವಿನಿಮಯ ಮಾಡಿಕೊಂಡಿರುವ ಸಂಘಿಗಳು ಸಾತನೂರಿನಲ್ಲಿ 'ಆಪರೇಷನ್' ಪೂರ್ಣಗೊಳಿಸಿದ್ದಾರೆ. ಇದ್ರಿಶ್ ಕೊಲೆಯಾದ ನಂತರವೂ ಕೊಲೆಗಡುಕರು ಪಲಾಯನ ಮಾಡಲು ಬಳಸಿಕೊಂಡಿರುವ ಹಾದಿ ಪರಿವಾರದ ನೆಟ್ವರ್ಕ್ ಹೇಗೆ ಕೆಲಸ ಮಾಡಿದೆ ಎಂಬುದನ್ನು ತೋರಿಸುತ್ತದೆ. ಸಾತನೂರು, ಕನಕಪುರ, ಬೆಂಗಳೂರು, ಹುಬ್ಬಳ್ಳಿ, ಮಹಾರಾಷ್ಟ್ರ, ಗುಜರಾತ್ ಕೊನೆಗೆ ರಾಜಸ್ಥಾನದ ಗಡಿ. ಉದ್ದಕ್ಕೂ ಬಿಜೆಪಿ ಸಂಘ ಪರಿವಾರದ ಬಲಿಷ್ಠ ನೆಲೆಯ ಮೂಲಕವೇ ಸಾಗಿರುವ ಹಂತಕ ಪಡೆಯನ್ನು ಬಂದಿಸಲೇಬೇಕಾದ ಒತ್ತಡ ಸೃಷ್ಟಿಯಾದ ನಂತರ ಬಂದಿಸುವ ಒಂದು ನಾಟಕ ನಡೆದಿದೆ ಎನ್ನುವುದು ಮೇಲ್ನೋಟದಲ್ಲೇ ಕಾಣುತ್ತದೆ.

ಕುತಂತ್ರಗಳಿಗೆ ಯಶಸ್ಸು ಸಿಗಲಿಲ್ಲ

ಹಳೇ ಮೈಸೂರು ಭಾಗವನ್ನು ಹೇಗಾದರೂ ವಶಕ್ಕೆ ಪಡೆಯಬೇಕು ಎಂಬ ದೀರ್ಘ ಸಂಚಿನ ಭಾಗವಾಗಿಯೇ ಇದ್ರಿಶನ ಕೊಲೆಯಾಗಿದೆ ಎನ್ನುವುದು ಸ್ಪಷ್ಟ. ಕಳೆದ ಜೂನ್ ತಿಂಗಳಲ್ಲಿ ವಿಶ್ವ ಹಿಂದೂ ಪರಿಷತ್ ನಡೆಸಿದ ಶ್ರೀರಂಗಪಟ್ಟಣ ಚಲೋ ಸಂದರ್ಭದಲ್ಲಿ ಜುಮಾ ಮಸೀದಿಯ ಮೇಲೆ ದಾಳಿ ನಡೆಸಲು ಪ್ರಯತ್ನಿಸಲಾಯಿತು. ಆದರೆ ಜನ ಚಳವಳಿಗಳ ಒತ್ತಡದಿಂದಾಗಿ ಜಿಲ್ಲಾಡಳಿತ ಇದಕ್ಕೆ ಅವಕಾಶ ನೀಡಲಿಲ್ಲ. ಆದರೂ ಸಂಘಿ ಕಾರ್ಯಕರ್ತರು ಪುಟ 11 ಕ್ಕೆ

ಅವರು ಬಳಸಿದ್ದು ಎಲೆಕ್ಟ್ರಿಕ್ ಟೀಸರ್ ಗನ್ ಎಂಬ ಆಧುನಿಕ ಅಸ್ತ್ರವನ್ನು. ವಿದೇಶಗಳಲ್ಲಿ ಸ್ವಯಂ ರಕ್ಷಣೆಗಾಗಿ ಬಳಸುವ ಈ ಗನ್ ಸುಮಾರು ಮೂವತ್ತು ಅಡಿ ದೂರದಲ್ಲಿ ಇರುವವರನ್ನು ತಾಗಿ ಬಲಿಷ್ಠ ವಿದ್ಯುತ್ ಶಾಕ್ ನೀಡುತ್ತದೆ. ಸಣ್ಣ ಬ್ಯಾಟರಿಯ ಮೂಲಕ ಕೆಲಸ ಮಾಡುವ ಇದನ್ನು ಇದ್ರಿಶ್ ಪಾಷಾನ ಪ್ರಮುಖ ಅಂಗಗಳಿಗೆ ಶಾಕ್ ನೀಡಲು ಬಳಸಲಾಗಿದೆ. ನಿರಂತರ ವಿದ್ಯುತ್ ಶಾಕ್ ತಡೆದುಕೊಳ್ಳದ ದೇಹ ಸಾವಿಗೆ ಶರಣಾಗಿದೆ. ಪುನೀತ್ ಕೆರೆಹಳ್ಳಿ ಮತ್ತವನ ದುರುಳ ತಂಡ ಕೇಕೆ ಹಾಕಿ ಪರಾರಿಯಾಗಿದೆ.



ಅರಣ್ಯ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ–ಬುಡಕಟ್ಟು ಜನಗಳ ಮೇಲೆ ಮತ್ತೊಂದು ಪ್ರಹಾರ: ಬೃಂದಾ ಕಾರಟ್

ಸಂಸತ್ತಿನಲ್ಲಿ ಆಳುವ ಪಕ್ಷ ಯಾವುದೇ ರೀತಿಯಲ್ಲಿ ಪ್ರತಿಪಕ್ಷಗಳ ಮಧ್ಯಪ್ರವೇಶಗಳನ್ನು ತಡೆಯುತ್ತಲೇ, ಇನ್ನೊಂದೆಡೆಯಲ್ಲಿ ತನಗೆ ಬೇಕಾದವುಗಳನ್ನು ಚರ್ಚೆಯಿಲ್ಲದೆಯೇ ದಕ್ಕಿಸಿಕೊಳ್ಳಲು ಪ್ರಯತ್ನಿಸಿದ್ದು ಈ ಬಾರಿಯ ಬಜೆಟ್ ಅಧಿವೇಶನದಲ್ಲಿ ಎದ್ದು ಕಂಡು ಬಂದಿತ್ತು. ಈ ರೀತಿ ಚರ್ಚೆಯಿಲ್ಲದೆಯೇ ಪಾಸು ಮಾಡಿಸಿಕೊಂಡ ಒಂದು ಮಸೂದೆಯೆಂದರೆ ಅರಣ್ಯ ಸಂರಕ್ಷಣೆ ಕಾಯ್ದೆ, 1980ಕ್ಕೆ ತಿದ್ದುಪಡಿ ತಂದಿರುವ ಮಸೂದೆ–ಇದು ಆದಿವಾಸಿಗಳು ಮತ್ತು ಪಾರಂಪರಿಕ ಅರಣ್ಯ ನಿವಾಸಿಗಳ ಹಕ್ಕುಗಳ ಮೇಲೆ ಮಾಡಿರುವ ಇನ್ನೊಂದು ಪ್ರಹಾರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಹೇಳಿದ್ದಾರೆ.

ಇದಕ್ಕೆ ಮೊದಲು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಅರಣ್ಯ ಸಂರಕ್ಷಣಾ ಕಾಯ್ದೆಯ ನಿಯಮಾವಳಿ, 2003ಕ್ಕೆ ತಿದ್ದುಪಡಿಗಳನ್ನು ದಕ್ಕಿಸಿಕೊಂಡಿತ್ತು. ಈ ತಿದ್ದುಪಡಿಗಳು ಬುಡಕಟ್ಟು ಪ್ರದೇಶಗಳ ಗ್ರಾಮಸಭೆಗಳಿಗೆ ತಮ್ಮ ಪ್ರದೇಶದಲ್ಲಿನ ಯಾವುದೇ ಪರಿಯೋಜನೆಗೆ ಒಪ್ಪಿಗೆಯನ್ನು ತಡೆಹಿಡಿಯಲು ಇದ್ದ ಸಂವಿಧಾನಿಕ ಮತ್ತು ಕಾನೂನು ಹಕ್ಕುಗಳನ್ನು ಇಲ್ಲದಂತೆ ಮಾಡುವ ಹಲವು ಅಂಶಗಳನ್ನು ಸೇರಿಸಿತ್ತು. ಈ ಮೂಲಕ ಅರಣ್ಯ ಸಂರಕ್ಷಣೆಯ ಹೆಸರಲ್ಲಿ ಅರಣ್ಯಗಳ ಖಾಸಗೀಕರಣಕ್ಕೆ ಪ್ರೋತ್ಸಾಹ ನೀಡಲಾಗಿದೆ, ಅರಣ್ಯ ಭೂಮಿಯನ್ನು ಬೇರೆ ಉದ್ದೇಶಗಳತ್ತ ತಿರುಗಿಸುವ ವಿಧಾನಗಳನ್ನು ಉದಾರೀಕರಿಸಲಾಗಿದೆ ಮತ್ತು ಅರಣ್ಯಗಳ ನಿರ್ವಹಣೆಯಲ್ಲಿ ರಾಜ್ಯ ಸರಕಾರಗಳ ಹಕ್ಕುಗಳನ್ನು ಮೊಟಕುಗೊಳಿಸಿ ಹೆಚ್ಚಿನ ಅಧಿಕಾರಗಳನ್ನು ಕೇಂದ್ರೀಕರಿಸಲಾಗಿದೆ ಎಂದು ಬೃಂದಾ ಕಾರಟ್ ಈ ತಿದ್ದುಪಡಿ ಮಸೂದೆಯನ್ನು ವಿಮರ್ಶೆ ಮಾಡುತ್ತ ಹೇಳುತ್ತಾರೆ.

ವ್ಯಾಪಾರಸ್ಥರ ಅನುಕೂಲಕ್ಕಾಗಿ

ಈ ತಿದ್ದುಪಡಿಗಳ ವಿರುದ್ಧ ಸಿಪಿಐ(ಎಂ) ರಾಜ್ಯ ಸಭಾ ಸದಸ್ಯ ಎಳಮಾರಂ ಕರೀಮ್ ಇಂತಹ ನಿಯಮಾವಳಿಗಳನ್ನು ರದ್ದುಗೊಳಿಸಬೇಕೆಂಬ ಒಂದು ಶಾಸನಾತ್ಮಕ ನಿಲುವಳಿಯನ್ನು ಮಂಡಿಸಿದರು. ಅದನ್ನು ಚರ್ಚೆಗೆ ಅಂಗೀಕಾರಿಸಲಾದರೂ ಒಂದಲ್ಲ ಒಂದು ನೆಪ ಹೂಡಿ ಅದರ ಮೇಲೆ ಚರ್ಚೆ ನಡೆಯದಂತೆ ನೋಡಿಕೊಳ್ಳಲಾಯಿತು. ಮೋದಿ ಸರಕಾರ ಅರಣ್ಯ ಸಂರಕ್ಷಣೆಯ ಹೆಸರಲ್ಲಿ ತಂದಿರುವ ಎಲ್ಲ ತಿದ್ದುಪಡಿಗಳೂ ಅದು ಜಪಿಸುತ್ತಿರುವ "ಸುಲಲಿತ ವ್ಯವಹಾರ"(ಈಸ್ ಆಫ್ ಬಿಸಿನೆಸ್)ಮಂತ್ರಕ್ಕೆ ಅನುಕೂಲ ಕಲ್ಪಿಸಲಿಕ್ಕಾಗಿಯೇ ತಂದವುಗಳು ಎಂಬುದು ಸ್ಪಷ್ಟವಾಗಿ ಕಾಣುತ್ತಿದೆ.

ವಾಸ್ತವವಾಗಿ ಈ ತಿದ್ದುಪಡಿ ಈಗಿರುವ ಅರಣ್ಯ ಹಕ್ಕುಗಳ ಕಾಯ್ದೆಯ ನೇರ ಉಲ್ಲಂಘನೆಯಾಗಿದ್ದು ಮಂಡನೆಯ ಹಂತದಲ್ಲೇ ಅದನ್ನು ರದ್ದುಪಡಿಸಬೇಕಾಗಿತ್ತು. ಗದ್ದಲದ ನಡುವೆ ಅದನ್ನು ಪಾಸು ಮಾಡಿಸಿಕೊಳ್ಳಲಾಯಿತು. ಆದರೆ ವಿಚಿತ್ರವೆಂದರೆ ಅದನ್ನು ಎರಡೂ ಸದನಗಳ ಸದಸ್ಯರಿರುವ ಒಂದು ಜಂಟಿ ಸಮಿತಿಗೆ ಪರಾಮರ್ಶೆಗೆ ಒಪ್ಪಿಸಲಾಗಿದೆ. ಪರಿಸರ ,ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ಪರಿಶೀಲಿಸಲು ಒಂದು ಸಂಸದೀಯ ಸ್ಥಾಯೀ ಸಮಿತಿ ಇರುವಾಗ ಸರಕಾರ ಹೀಗೇಕೆ ಮಾಡಬೇಕಾಗಿತ್ತು ಎಂದು ಈ ಬಗ್ಗೆ ಈ ಸ್ಥಾಯೀ ಸಮಿತಿಯ ಅಧ್ಯಕ್ಷರಾದ ಕಾಂಗ್ರೆಸಿನ ಜೈರಾಂ ರಮೇಶ್ ಆಕ್ಷೇಪ ವ್ಯಕ್ತಪಡಿಸಿದರು. ಮೋದಿ ಸರಕಾರದ ಈ ಕ್ರಮ ಅದು ಸಂಸದೀಯ ವಿಧಿ–ವಿಧಾನಗಳನ್ನು ಎಗ್ಗಿಲ್ಲದೆ ಧಿಕ್ಕರಿಸುತ್ತಿರುವುದಕ್ಕೆ ಇನ್ನೊಂದು ಉದಾಹರಣೆ ಎಂದು ಬೃಂದಾ ಕಾರಟ್ ಹೇಳುತ್ತಾರೆ.

ಈ ಮಸೂದೆಯ ಪೀಠಿಕೆಯಲ್ಲಿ "ಆರ್ಥಿಕ ಅಗತ್ಯಗಳು" ಈಡೇರಿಕೆಗಾಗಿ ಎಂಬ ಪದ ಸಮೂಹವಿದೆ. ಇವು ಯಾರ ಆರ್ಥಿಕ ಅಗತ್ಯಗಳು ಎಂದು ಬೃಂದಾ ಕಾರಟ್ ಪ್ರಶ್ನಿಸುತ್ತಾರೆ. ಅಂದರೆ ಆರ್ಥಿಕ ಅಗತ್ಯಗಳನ್ನು ನೆರವೇರಿಸುವ ಹೆಸರಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆಯ ನಿಯಂತ್ರಣ ಚೌಕಟ್ಟಿನಿಂದ ವಿನಾಯ್ತಿ ಪಡೆಯಬಹುದಾದ ಪರಿಯೋಜನೆಗಳ ಪಟ್ಟಿಯನ್ನು ಇನ್ನಷ್ಟು ವಿಸ್ತರಿಸುವುದೇ ಈ ಸರಕಾರದ ಉದ್ದೇಶ ಎಂಬುದು ಕಾಣ ಬರುತ್ತದೆ. ಈಗಾಗಲೇ ಸರಕಾರವೇ ಕೊಟ್ಟಿರುವ ಅಂಕಿ–ಅಂಶಗಳ ಪ್ರಕಾರ 2008ರಿಂದ 2019ರ ನಡುವೆ 2.53ಲಕ್ಷ ಹೆಕ್ಟೇರುಗಳಷ್ಟು ಅರಣ್ಯ ಭೂಮಿಯನ್ನು ಬೇರೆ ಉದ್ದೇಶಗಳತ್ತ ತಿರುಗಿಸಲಾಗಿದೆ. ಈ ಮಸೂದೆ ಅದಕ್ಕೆ ಕಾನೂನಬದ್ಧತೆ ಒದಗಿಸುವ ಪ್ರಯತ್ನ.



ಮೋದಿ ಸರಕಾರದ ಬೂಟಾಟಿಕೆ

ಈ ರೀತಿ ವಿನಾಯ್ತಿಗಳನ್ನು ವಿಸ್ತರಿಸುವ, ಅರಣ್ಯ ಭೂಮಿಯನ್ನು ಬೇರೆ ಉದ್ದೇಶಗಳತ್ತ ತಿರುಗಿಸುವ ಮತ್ತು ಬುಡಕಟ್ಟು ಜನಗಳ ಹಕ್ಕುಗಳ ಮೇಲೆ ಪ್ರಹಾರ ನಡೆಸುವ ಒಂದು ಮಸೂದೆಯನ್ನು ಹವಾಮಾನ ಬದಲಾವಣೆಯ ಗುರಿಸಾಧನೆಗೆ ನಾವು ಅಂತರ್ರಾಷ್ಟ್ರೀಯವಾಗಿ ಒಪ್ಪಿಕೊಂಡ ರಾಷ್ಟ್ರೀಯ ಕೊಡುಗೆಯ ಅನುಷ್ಠಾನಕ್ಕಾಗಿ ತರಲಾಗುತ್ತಿದೆ ಎಂದು ಹೇಳುತ್ತಿರುವುದು ಸರಕಾರದ ಬೂಟಾಟಿಕೆಯಲ್ಲದೆ ಬೇರೇನೂ ಅಲ್ಲ ಎಂದು ಬಲವಾಗಿ ಖಂಡಿಸಿರುವ ಬೃಂದಾಕಾರಟ್, ಈ ಮಸೂದೆಯ ಪೀಠಿಕೆಯಲ್ಲಿ ಹೇಳಿಕೊಂಡಿರುವುದಕ್ಕೂ, ಮತ್ತು ನಂತರ ಸೂಚಿಸಿರುವ ತಿದ್ದುಪಡಿಗಳಿಗೂ ನೇರ ವೈರುಧ್ಯವಿದೆ ಎಂದು ಹೇಳುತ್ತಾರೆ.

ಒಟ್ಟಾರೆಯಾಗಿ ಈ ಮಸೂದೆ ಒಂದು ದೊಡ್ಡ ಕುತಂತ್ರದ ಭಾಗವಾಗಿದೆ ಎನ್ನುತ್ತಾರೆ ಬೃಂದಾ ಕಾರಟ್. ಅದೆಂದರೆ, 1. ಬಹುಪಾಲು ಅರಣ್ಯ ಪ್ರದೇಶಗಳನ್ನು "ಅರಣ್ಯ" ಎಂಬುದನ್ನು ಮರುವ್ಯಾಖ್ಯಾನಿಸುವ ಮೂಲಕ ಅರಣ್ಯ ಸಂರಕ್ಷಣಾ ಕಾಯ್ದೆ ಮತ್ತು ಅರಣ್ಯ ಹಕ್ಕುಗಳ ಕಾಯ್ದೆಯ ವ್ಯಾಪ್ತಿಯಿಂದ ಹೊರತೆಗೆಯುವುದು 2. ಅರಣ್ಯಗಳ ನಿರ್ವಹಣೆಯನ್ನು ಹಿಂದಕೆ ಒಯ್ದು, ಅರಣ್ಯ ಅಧಿಕಾರಶಾಹಿ, ಅರಣ್ಯ ಮಾಫಿಯ ಮತ್ತು ಕಾರ್ಪೊರೇಟ್‌ಗಳಿಗೆ ಹೆಚ್ಚಿನ ಹತೋಟಿ ಒದಗಿಸುವ ಮೂಲಕ ಅಧಿಕಾರಗಳ ಕೇಂದ್ರೀಕರಣಕ್ಕೆ ಅನುವು ಮಾಡಿಕೊಡುವುದು. 3. ಅರಣ್ಯ ಹಕ್ಕುಗಳ ಕಾಯ್ದೆ, ಪರಿಶಿಷ್ಟ ಪ್ರದೇಶಗಳಿಗೆ ಪಂಚಾಯತುಗಳ ವಿಸ್ತರಣೆ, ಗ್ರಾಮಸಭೆಗಳ ಅಧಿಕಾರ ವ್ಯಾಪ್ತಿ ಮುಂತಾದವುಗಳನ್ನು ದುರ್ಬಲಗೊಳಿಸಿ ಅರಣ್ಯ ನಿರ್ವಹಣೆಯ ಪ್ರಜಾಸತ್ತಾತ್ಮಕ ನಿರ್ವಹಣೆಯತ್ತ ಇಟ್ಟಿರುವ ಹೆಜ್ಜೆಗಳನ್ನು ಹಿಂದಕ್ಕೆ ತಳ್ಳುವುದು.

ಈ ಮೂಲಕ, ಮೋದಿ ಸರಕಾರ ಆದಿವಾಸಿಗಳ ಹಕ್ಕುಗಳ ಮೇಲೆ ಯುದ್ಧವನ್ನೇ ಸಾರಿದೆ. ಈ ಅರಣ್ಯ ಸಂರಕ್ಷಣಾ ಕಾಯ್ದೆಯ ತಿದ್ದುಪಡಿ ಮಸೂದೆ ಅದರ ಬತ್ತಳಿಕೆಯಲ್ಲಿನ ಇನ್ನೊಂದು ಅಸ್ತ್ರ ಎಂದು ಬೃಂದಾ ಕಾರಟ್ ಹೇಳುತ್ತಾರೆ.

ಕರ್ನಾಟಕದ ಸಾಮರಸ್ಯ ಪರಂಪರೆ..... ಪುಟ 8 ರಿಂದ

ಹಂಗಿಲ್ಲ ಎಂಬುದನ್ನು ಸಾಕ್ಷಾತ್ಕರಿಸಿದವರು ಈ ತತ್ವಪದಕಾರರು. ಚೆನ್ನೂರು ಜಲಾಲ ಸಾಹೇಬನು 'ಸಬ್ ಕೆಹೆತೆ ಹೈ ಈಶ್ವರ ಅಲ್ಲಾ । ಇದರ ಭೇದ ಯಾರಿಗೆ ತಿಳಿದಿಲ್ಲ! ಹಿಂದೂ ಮುಸ್ಲಿಂ ಶಾಸ್ತ್ರ ಪಡತೆ ಹೈ! ಗುರುಮನಿ ಕೀಲ ಸಿಗಲಿಲ್ಲ! ಹೀಗೆ ಉರ್ದು ಮಿಶ್ರಿತ ಶೈಲಿಯಲ್ಲಿ ಪದಗಳನ್ನು ಬರೆದು ಭಾಷಾ ಬಾಂಧವ್ಯ ಮೆರೆದಿದ್ದಾರೆ. ಕನ್ನಡ, ಉರ್ದು, ಮರಾಠಿ, ಹಿಂದಿ, ತೆಲುಗು ಹಲವು ಗಡಿ ಭಾಷೆಗಳ ಮಿಶ್ರಣದಲ್ಲಿ ರಚನೆಯಾದ ನೂರಾರು ಪದಗಳು ಕನ್ನಡವರ ಮುಕ್ತ ಚಿಂತನಾ ಪ್ರಸ್ಥಾನಗಳನ್ನು ಎತ್ತಿ ತೋರಿಸುತ್ತಿವೆ.

ಕನ್ನಡ ನಾಡಿನ ವಾಸ್ತುಶಿಲ್ಪ, ಸಂಗೀತ, ಚಿತ್ರಕಲೆ ಎಲ್ಲ ಸಾಂಸ್ಕೃತಿಕ ವಿನ್ಯಾಸಗಳಲ್ಲಿ ಹಿಂದೂ ಮುಸ್ಲಿಂ ಕೊಡುಕೊಳುವಿಕೆ ಸಹಜವೆಂಬಂತೆ ಮೂಡಿ ಬಂದಿದೆ. ಜನಪದರು ತಮ್ಮ ಬದುಕಿನ ಸಹಜ ನಡೆಯಾಗಿ, ಪ್ರಾಯೋಗಿಕ ಜೀವನ ಚಹರೆಯಾಗಿ ಸಮನ್ವಯತೆಯನ್ನು ಸಾಧಿಸಿಕೊಂಡು ಬರುತ್ತಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ದ್ವೇಷವನ್ನೆ ತಮ್ಮ ಸಿದ್ಧಾಂತವಾಗಿಸಿಕೊಂಡಿರುವ ಸಂಘ ಪರಿವಾರಿಗಳು ನಮ್ಮ ಪಾರಂಪರಿಕ ಸಾಮರಸ್ಯವನ್ನು ಹಾಳು ಮಾಡಿ ಬಿಟ್ಟಿದ್ದಾರೆ. ಬಿಜೆಪಿ ಎಂಬ ಕೋಮುವಾದಿ ಪಕ್ಷ ದೇಶದ ಚುಕ್ಕಾಣಿ ಹಿಡಿದಾಗಿನಿಂದಲೂ ಬಾಳಿನ ಕಣಕಣದಲ್ಲಿಯೂ ದ್ವೇಷ, ವೈರತ್ವ, ಹಿಂಸೆ, ಜಾತಿಯತೆ, ಮತಾಂಧತೆಗಳನ್ನು ಯುವಕರ ಧಮನಿ ಧಮನಿಗಳಲ್ಲಿ ಕಸಿ ಮಾಡುತ್ತಿದ್ದಾರೆ. ಹುಸಿ ರಾಷ್ಟ್ರಿಯತೆಯ ನೆಪದಲ್ಲಿ ಮುಸ್ಲಿಂ ವಿರೋಧಿ ವಿಷಾನಿಲವನ್ನು ಎಲ್ಲೆಲ್ಲೂ ಹರಡುತ್ತಿದ್ದಾರೆ. ಹಿಂದೂತ್ವದಲ್ಲಿ ಹೆಸರಲ್ಲಿ ದೇಶದ ಶತಮಾನಗಳ ಜೀವನ ವಿಕಾಸದ ಫಲಶ್ರುತಿಯಾದ ಬಹುತ್ವವನ್ನು ಮೂರಾಬಟ್ಟೆ ಮಾಡುತ್ತಿದ್ದಾರೆ. ಈ ಹಿಂದೂತ್ವವಾದಿಗಳು ನಿಜವಾಗಿ ಧರ್ಮ ನಿಷ್ಠರೆಂದು ಯಾರಾದರೂ ಭಾವಿಸಿದರೆ ಅದಕ್ಕಿಂತೂ ದುರಂತ ಇನ್ನೊಂದಿಲ್ಲ. ಅವರಿಗೆ ಧರ್ಮವು ತಮ್ಮ ಬಂಡವಾಳಶಾಹಿ ಪರ ನೀತಿಯನ್ನು ಮರೆಮಾಚಲು ಇರುವ ಅಸ್ತ್ರ, ದೇಶದ ಸಂಪತ್ತಿನ ಮೇಲೆ ಕೆಲವೊಬ್ಬರೆ ಹಕ್ಕು ಸಾಧಿಸಬೇಕೆಂಬ ದುರ್ಭಾವದ ವಿಷ ಜಂತುಗಳಿಗೆ ಅಮಾಯಕರು ಬಲಿಯಾಗಬೇಕು. ಅಲ್ಲಮ ಪ್ರಭು ಒಂದೆಡೆ ಹೇಳುವಂತೆ "ಅಗ್ನಿಗೆ ತಂಪುಂಟೆ, ವಿಷಕ್ಕೆ ರುಚಿಯುಂಟೆ, ದಾಳಿಕಾರಂಗೆ ಧರ್ಮವುಂಟೆ? ಹೌದು ಈ ಕೋಮುವಾದಿ ಸಂಘ ಪರಿವಾರದವರಿಗೆ ಅಸಲಿಗೆ ಮನುಷ್ಯತ್ವವೇ ಇಲ್ಲ. ಗೋರಕ್ಷಣೆ, ಹಿಜಾಬ್, ಆಜಾನ್, ತಲಾಕ್, ಟೀಪ್ಪೂ ಸುಲ್ತಾನ, ಮುಸ್ಲಿಂ ವ್ಯಾಪಾರಿಗಳ ನಿರ್ಬಂಧ, ಮದರಸಾ ಹೀಗೆ ದಿನಬೆಳಗಾದರೆ ಇಲ್ಲದ ಉಪದ್ವಾಪಗಳನ್ನು ಸೃಷ್ಟಿಸಿ, ಅವುಗಳನ್ನು ಟ್ರಿಗರ್ ಮಾಡಲೆಂದೆ ಸುಳ್ಳು ವಿಡೀಯೋಗಳ ಸೃಷ್ಟಿ, ಬೆಲೆ ಏರಿಕೆ, ಬ್ರಹ್ಮಾಂಡ ಭ್ರಷ್ಟತೆ, ಭಯಂಕರ ನಿರುದ್ಯೋಗ, ಹೆಚ್ಚುತ್ತಿರುವ ವೇಶ್ಯಾವಾಟಿಕೆ, ದೇಶಭಕ್ತಿ ಹೆಸರಿನ ಹಿಂಸೆಗಳು, ಸಂಸ್ಕೃತಿ ರಕ್ಷಣೆ ಹೆಸರಿನಲ್ಲಿ ಮಹಿಳೆಯರ ಮೇಲಿನ ಬರ್ಬರಿಕ ದಾಳಿಗಳು, ಎಲ್ಲ ಬಗೆಯ ಸಬ್ಸಿಡಿಗಳ ಹಿಂತೆಗೆತ, ರೈತ, ಕಾರ್ಮಿಕರ ವಿರೋಧಿ ಕಾನೂನುಗಳು, ಕೂಲಿಕಾರ್ಮಿಕರ ಎಂಟು ತಾಸಿನ ಬದಲು 12 ತಾಸು ದುಡಿತ ಲೆಕ್ಕವಿಲ್ಲದಷ್ಟು ದುಷ್ಟತನದ ನಡಾವಳಿಗಳು. ಫ್ಯಾಸಿಜಂನ ಬರ್ಬರಿಕ ದಾಳಿಗಳನ್ನು ನಾವು ಪ್ರಭುತ್ವ ಪ್ರೇರಿತ ಹತ್ಯಾಕಾಂಡಗಳಲ್ಲಿ ಕಾಣುತ್ತಿದ್ದೇವೆ.

ಸಾಮಾಜಿಕ ಜಾಲತಾಣಗಳಂತೂ ಕೋಮುವ್ಯಾಧಿಗಳ ಪೈಖಾನಾ ಎಂಬಂತಾಗಿದೆ. ತೋರಿಕೆಗೆ ಮುಸ್ಲಿಂ ವಿರೋಧ. ಆಳದಲ್ಲಿ ಇರುವುದೇ ದಲಿತ ವಿರೋಧಿ ಗುರಿ ಎಂಬುದನ್ನು ಮರೆಯದಿರೋಣ. ಈಗಾಗಲೇ ಹಲವಾರು ಬಿಜೆಪಿ ಸಂಸದ, ಶಾಸಕರು ತಾವು ಬಾಬಾಸಾಹೇಬರು ರಚಿಸಿದ ಸಂವಿಧಾನವನ್ನು ಬದಲಿಸಲೆಂದೆ ಬಂದಿದ್ದೇವೆ. ಮನುಸ್ಮೃತಿಯೇ ನಮ್ಮ ಸಂವಿಧಾನ ಮಾಡುತ್ತೇವೆ ಎಂದು ಖುಲ್ಲಂಖುಲ್ಲಾ ಹೇಳಿದ್ದಾರೆ. ಸಂಘ ಪರಿವಾರದ ನಡೆ ಟೀಕಿಸಿದವರೆಲ್ಲ ರಾಷ್ಟ್ರದ್ರೋಹಿಗಳು. ಸರಕಾರದ ಕೈಗೊಂಬೆಯಾಗಿರುವ ಇಡಿ, ಆಯ್ ಟಿ ಅಷ್ಟೇ ಏಕೆ ನ್ಯಾಯಾಂಗವನ್ನು ಕೋಮುವಾದಿಗಳು ಆಕ್ರಮಿಸಿಕೊಳ್ಳದೆ ಬಿಟ್ಟಿಲ್ಲ ಎಂಬುದಕ್ಕೆ ಇತ್ತೀಚೆಗೆ ಹೊರಬರುತ್ತಿರುವ ಜನವಿರೋಧಿ ತೀರ್ಪುಗಳೆ ಸಾಕ್ಷಿ.

ಚುನಾವಣೆ ಎಂಬದು ದುಷ್ಟರ ಅಟ್ಟಹಾಸವಾಗಿ ಈಗಾಗಲೇ ಮೇರೆ ಮೀರಿದೆ. ಮನುವಾದಿಗಳು ಯಾವತ್ತೂ ಜನೋಪಯೋಗಿ ಕೆಲಸಗಳ ಮೂಲಕ ಅಧಿಕಾರ ಹಿಡಿಯಲು ಸಾಧ್ಯವಿಲ್ಲ. ಅವರಿಗೆ ಜನ ಎಂದರೆ ಜಾತಿಗಳು ಮಾತ್ರ. ದುಡಿಯುವ ಜನಗಳು ಪಾಪಿಷ್ಠರು. ಅವರು ಮೇಲ್ವರ್ಗ, ಮೇಲ್ವರ್ಗದವರಿಗೆ ಸೇವೆ ಮಾಡಲೆಂದೆ ಹುಟ್ಟಿದ್ದಾರೆ. ಅದು ಅವರ ಕರ್ಮ. ಇವರ ಸೇವೆ ಮಾಡುತ್ತ ಅನ್ನವಿಲ್ಲದೆ ಒದ್ದಾಡಿ ಸತ್ತರೆ ಶೂದ್ರರಿಗೆ ಮುಕ್ತಿ ಸಿಗುತ್ತದೆ ಎಂದು ನಂಬಿಸುವ ಈ ಮತಾಂಧರಿಗೆ ಧರ್ಮಗಳೆಂಬ ಭಾವನಾತ್ಮಕ ಅಂಶಗಳೇ ಆಧಾರ. ಧರ್ಮ, ಸಂಸ್ಕೃತಿ, ರಾಷ್ಟ್ರಪ್ರೇಮ ಇಂಥ ಅಮೂರ್ತ ಭಾವನೆಗಳ ಮೂಲಕವೇ ಜನರನ್ನು ಮರುಳು ಮಾಡಬಲ್ಲರು. ಧರ್ಮವೆಂಬ ಅಮಲು ತಲೆಯೊಳಗೆ, ಸೆರೆ, ಸೇಂದಿ ಎಂಬ ಮಧ್ಯದ ನಶೆಯನ್ನು ಮೈಯೊಳಗೆ ಏರಿಸಿ ಅಮಾಯಕರ ಮಾರಣಹೋಮ ಮಾಡಿಯೇ ಅಧಿಕಾರ ಪಡೆಯಬಲ್ಲರು.

ಬಂಧುಗಳೇ ನಾವು ಕೋಮುವಾದಿ ದುಷ್ಟರ ಈ ಹುನ್ನಾರಿಗೆ ಬಲಿಯಾಗಬೇಕೇ? ದಯವಿಲ್ಲದ ಧರ್ಮ ಅದಾವುದಯ್ಯಾ ಎಂಬ ಶರಣರ ವಾಣಿ, ಸಕಲ ಜೀವಿಗಳಿಗೆ ಲೇಸ ಬಯಸುವ, ಬಹುಜನ ಸುಖಾಯ, ಬಹುಜನ ಹಿತಾಯ, ಅಹಿಂಸಾ ಪರಮೋಧರ್ಮ, ತಿಜಾರತ್ ಹೀ ಇಬಾದತ್ ಹೈ, ಪ್ರೀತಿಯೇ ದೇವರು ಎಂಬ ತತ್ವಗಳಲ್ಲಿ ನಂಬಿಕೆಯುಳ್ಳವರಾದ ನಾವು ಕೋಮುವಾದಿಗಳನ್ನು ಉಚ್ಛಾಟಿಸಲೇಬೇಕಿದೆ.

ಸಮಸ್ತ ಪ್ರಜಾಪ್ರಭುತ್ವವಾದಿ-ಪ್ರಗತಿಶೀಲ ಚಳುವಳಿಗೆ ನಷ್ಟ- ಎಐಎಡಬ್ಲ್ಯುಯು

ಕಾಂ. ಸುನಿತ್ ಚೋಪ್ರಾ ನಿಧನ ದೇಶದ ಕಮ್ಯುನಿಸ್ಟ್ ಆಂದೋಲನಕ್ಕೆ ಮಾತ್ರವಲ್ಲ, ಸಮಸ್ತ ಪ್ರಜಾಪ್ರಭುತ್ವವಾದಿ ಮತ್ತು ಪ್ರಗತಿಶೀಲ ಚಳುವಳಿಗೂ ಆಗಿರುವ ನಷ್ಟ ಎಂದು ಅಖಿಲ ಭಾರತ ಕೃಷಿಕೂಲಿಕಾರರ ಸಂಘ (ಎಐಎಡಬ್ಲ್ಯುಯು)ದ ಕೇಂದ್ರೀಯ ಕಾರ್ಯಕಾರಿ ಸಮಿತಿ ಶ್ರದ್ಧಾಂಜಲಿ ಅರ್ಪಿಸುತ್ತ ಹೇಳಿದೆ.

ಸುನಿತ್ ಚೋಪ್ರಾ 1991ರಿಂದ ಇತ್ತೀಚೆಗೆ 2023ರಲ್ಲಿ ನಡೆದ 10ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಬಿಡುಗಡೆ ಪಡೆಯುವ ವರೆಗೆ ಎಐಎಡಬ್ಲ್ಯುಯು ಜಂಟಿ ಕಾರ್ಯದರ್ಶಿಯಾಗಿ ನೇತೃತ್ವ ನೀಡಿದ್ದರು. ಅವರದ್ದು ದೇಶದ ಕೃಷಿ ಕೂಲಿಕಾರರ ಮತ್ತು ಗ್ರಾಮೀಣ ಬಡವರ ಹೋರಾಟಗಳಲ್ಲಿ ಚಿರಪರಿಚಿತ ಮುಖ ಎಂದು ಎಐಎಡಬ್ಲ್ಯುಯು ಕೇಂದ್ರ ಕಾರ್ಯಕಾರಿ ಸಮಿತಿ ಹೇಳಿದೆ.

ಕಮ್ಯುನಿಸ್ಟ್ ಚಳುವಳಿಗೆ ಅವರ ಪ್ರವೇಶ ಲಂಡನಿನ ಸ್ಕೂಲ್ ಆಫ್ ಓರಿಯೆಂಟಲ್ ಅಂಡ್ ಆಫ್ರಿಕನ್ ಸ್ಟಡೀಸ್ ನಲ್ಲಿ ವಿದ್ಯಾರ್ಥಿಯಾಗಿದ್ದಾಗ ನಡೆದಿತ್ತು. ಅಲ್ಲಿ ಅಧ್ಯಯನ ಮುಗಿಸಿದ ಕೂಡಲೇ ಅವರು ಪ್ಯಾಲೆಸ್ತೈನ್ ವಿಮೋಚನಾ ಚಳುವಳಿ ಸೇರಿದರು. ನಂತರ ಭಾರತಕ್ಕೆ ಹಿಂದಿರುಗಿದ ಅವರು ಜೆಎನ್‌ಯುನ ಪ್ರಾದೇಶಿಕ ಅಭಿವೃದ್ಧಿ ಅಧ್ಯಯನ ಕೇಂದ್ರವನ್ನು ಸೇರಿದರು. ಅಲ್ಲಿ ತಮ್ಮನ್ನು ವಿದ್ಯಾರ್ಥಿ ಚಳುವಳಿಯಲ್ಲಿ ತೊಡಗಿಸಿಕೊಂಡರು. ಅವರು ಎಸ್‌ಎಫ್‌ಐನ ಸಂವಿಧಾನ ಕರಡು ರಚಿಸಿದವರಲ್ಲಿ ಒಬ್ಬರಾಗಿದ್ದರು. ಅವರು 1980ರಲ್ಲಿ ಯುವಜನ ಚಳುವಳಿಯಲ್ಲಿ ಡಿವೈಎಫ್‌ಐನ ಸಂಸ್ಥಾಪಕ ಖಜಾಂಚಿಯಾಗಿ ಚುನಾಯಿತರಾದರು, ಅವರು ಭಾರತ-ಕೊರಿಯ ಮೈತ್ರಿಸಂಘದ ಪ್ರಧಾನ ಕಾರ್ಯದರ್ಶಿಯೂ ಆಗಿದ್ದರು ಎಂದು ಎಐಎಡಬ್ಲ್ಯುಯು ಅವರ ಸೇವೆಯನ್ನು ನೆನಪಿಸಿಕೊಂಡಿದೆ.

ಪಠ್ಯಪುಸ್ತಕಗಳಲ್ಲಿ ಇತಿಹಾಸವನ್ನೇ ವಿರೂಪಗೊಳಿಸುವ ಪ್ರಯತ್ನಗಳನ್ನು ತಕ್ಷಣ ಹಿಂದಕ್ಕೆ ಪಡೆಯಬೇಕು

ಎನ್‌ಸಿಇಆರ್‌ಟಿ ಪಠ್ಯ ಪುಸ್ತಕಗಳ ಮೂಲಕ ಇತಿಹಾಸದ ಪಠ್ಯಕ್ರಮವನ್ನು ಬದಲಾಯಿಸುವ ಕೇಂದ್ರ ಸರ್ಕಾರದ ಪ್ರಯತ್ನಗಳನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ.

ಪಠ್ಯಕ್ರಮವನ್ನು ತರ್ಕಬದ್ಧಗೊಳಿಸಲು ಮತ್ತು ವಿದ್ಯಾರ್ಥಿಗಳ ಮೇಲಿನ ಹೊರೆ ಕಡಿಮೆ ಮಾಡಲು ಇದನ್ನು ಮಾಡಲಾಗಿದೆ ಎಂಬ ಎನ್‌ಸಿಇಆರ್‌ಟಿ ಮುಖ್ಯಸ್ಥರ ತೋರಿಕೆಯ ವಾದವು ಸಂಪೂರ್ಣವಾಗಿ ತಪ್ಪುದಾರಿಗೆಳೆಯುವಂತದ್ದು. ಇದು ಕೋಮುವಾದದ ಹಾದಿಯಲ್ಲಿ ಇತಿಹಾಸವನ್ನು ಪುನಃ ಬರೆಯುವ ಯೋಜನೆಯ ಭಾಗವಾಗಿದೆ. ಕೋಮುವಾದೀ ಪೂರ್ವಾಗ್ರಹದ ಆಧಾರದ ಮೇಲೆ ನಮ್ಮ ಹಿಂದಿನ ವಿವಿಧ ಕಾಲಾವಧಿಗಳನ್ನು ಅಳಿಸಿ ಹಾಕಿ ಬಿಡಲು ಸಾಧ್ಯವಿಲ್ಲ ಎಂಬುದನ್ನು ಸರ್ಕಾರವು ಕಡೆಗಣಿಸುತ್ತಿದೆ ಎಂಬುದರಲ್ಲಿ ಸಂದೇಹವಿಲ್ಲ. ಇದು ಮೊಘಲ್ ಸಾಮ್ರಾಜ್ಯದ ಸಮಸ್ತ ಅಧ್ಯಾಯಗಳನ್ನು ಕೈಬಿಡುವ ಮೂಲಕ ಇತಿಹಾಸವನ್ನೇ ವಿರೂಪಗೊಳಿಸುವ ಬಹುಸಂಖ್ಯಾಕವಾದೀ ಮನೋ ಭಾವವನ್ನು ಎತ್ತಿ ತೋರಿಸುತ್ತಿದೆ ಎಂದು ಪೊಲಿಟ್‌ಬ್ಯೂರೋ ಅಭಿಪ್ರಾಯ ಪಟ್ಟಿದೆ.

ಪಠ್ಯ ಪುಸ್ತಕಗಳನ್ನು ಪರಿಷ್ಕರಿಸುವ ಪ್ರಸ್ತುತ ಪ್ರಯತ್ನಗಳು ವಾಸ್ತವವಾಗಿ ಆರ್‌ಎಸ್‌ಎಸ್‌ನ ವಿಭಜಕ ಮತ್ತು ಹಿಂಸಾತ್ಮಕ ಪಾತ್ರವನ್ನು ಮರೆಮಾಚುವ ಉದ್ದೇಶವನ್ನು ಹೊಂದಿವೆ ಎಂಬುದು ಆ ಸಂಘಟನೆಯ ನಿಷೇಧಕ್ಕೆ ಕಾರಣವಾದ ಮಹಾತ್ಮ ಗಾಂಧಿಯವರ ಹತ್ಯೆಗೆ ಸಂಬಂಧಿಸಿದಂತೆ ನಿರ್ಣಾಯಕ ವಾಕ್ಯಗಳನ್ನು ತೆಗೆದು ಹಾಕಿರುವ ರೀತಿಯಲ್ಲಿ ಸ್ಪಷ್ಟವಾಗಿದೆ.

ಸರ್ಕಾರ ಈ ಅಸಹ್ಯಕರ ಕ್ರಮಗಳನ್ನುಹಿಂದಕ್ಕೆ ಪಡೆಯಲು ಮತ್ತು ಹಳೆಯ ಪಠ್ಯ ಪುಸ್ತಕಗಳನ್ನು ಮರುಸ್ಥಾಪಿಸಲು ತಕ್ಷಣ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸಿರುವ ಪೊಲಿಟ್‌ಬ್ಯೂರೋ ನಮ್ಮ ಹಿಂದಿನ ಕಾಲದ ವಸ್ತುನಿಷ್ಠ ಅಧ್ಯಯನವನ್ನು ಸಮರ್ಥಿಸಲು ಆಸಕ್ತಿ ಹೊಂದಿರುವ ಎಲ್ಲಾ ಭಾರತೀಯ ದೇಶಪ್ರೇಮಿಗಳು ತಮ್ಮ ಪ್ರತಿಭಟನೆಯ ಧ್ವನಿಯನ್ನು ಎತ್ತಬೇಕು ಎಂದೂ ಆಗ್ರಹಿಸಿದೆ.

ಮಾಹಿತಿ ತಂತ್ರಜ್ಞಾನ ನಿಯಮಗಳ ತಿದ್ದುಪಡಿಯೆಂಬುದು ಸೆನ್ಸಾರ್‌ಶಿಪ್ ನಡೆ-ತಕ್ಷಣ ಹಿಂತೆಗೆದುಕೊಳ್ಳಬೇಕು

ಕೇಂದ್ರ ಸರಕಾರ ಮಾಹಿತಿ ತಂತ್ರಜ್ಞಾನ ನಿಯಮಗಳು, 2021ನ್ನು ತಿದ್ದುಪಡಿ ಮಾಡಿ, ಕೇಂದ್ರ ಸರಕಾರದ ಬಗ್ಗೆ "ಹುಸಿ, ಅಥವ ಸುಳ್ಳು, ಅಥವ ದಾರಿ ತಪ್ಪಿಸುವ" ಮಾಹಿತಿಯ ಸತ್ಯಾಸತ್ಯತೆಯನ್ನು ಪರೀಕ್ಷಿಸುವ ಮತ್ತು ಅವುಗಳನ್ನು ತೆಗೆದುಹಾಕಲು ಫೇಸ್‌ಬುಕ್, ಟ್ವಿಟರ್, ಗೂಗಲ್‌ನಂತಹ ಸಾಮಾಜಿಕ ಮಾಧ್ಯಮ ವೇದಿಕೆಗಳಿಗೆ ಹೇಳುವ ಅಧಿಕಾರವನ್ನು ಪ್ರೆಸ್ ಇನ್‌ಫೋರ್ಮೇಶನ್ ಬ್ಯುರೊ(ಪಿಐಬಿ) ಗೆ ಅಧಿಕಾರ ನೀಡಿದೆ. ಈ ಕಂಪನಿಗಳು ನಿರಾಕರಿಸಿದರೆ, ವೇದಿಕೆಗಳ ಬಳಕೆದಾರರು ಪೋಸ್ಟ್ ಮಾಡಿದ ಯಾವುದೇ ಕಾನೂನುಬಾಹಿರ ಅಥವಾ ಸುಳ್ಳು ವಿಷಯದ ವಿರುದ್ಧ ರಕ್ಷಣೆಯನ್ನು ಖಾತರಿಪಡಿಸುವ ತಮ್ಮ "ಸುರಕ್ಷಿತ ಆಶ್ರಯ ವಿನಾಯಿತಿ" ಅನ್ನು ಈ ತಿದ್ದುಪಡಿಯ ಪ್ರಕಾರ ಕಳೆದುಕೊಳ್ಳುತ್ತಾರೆ.

ಈ ತಿದ್ದುಪಡಿಗೆ ವಿರೋಧವನ್ನು ವ್ಯಕ್ತಪಡಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಇದನ್ನು ಒಪ್ಪಲು ಸಾಧ್ಯವಿಲ್ಲ, ಪಿಐಬಿಗೆ ಇಂತಹ ವ್ಯಾಪಕ ಅಧಿಕಾರಗಳನ್ನು ನೀಡಿರುವುದು ಸಂಪೂರ್ಣವಾಗಿ ಸೆನ್ಸಾರ್‌ಶಿಪ್‌ಗೆ ಸಮನಾಗಿರುವಂತಹ ಕ್ರಮ, ಇದು ಈ ವೇದಿಕೆಗಳ ಎಲ್ಲ ಬಳಕೆದಾರರನ್ನು ತಟ್ಟುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದು ಸಂಪೂರ್ಣವಾಗಿ ಪ್ರಜಾಪ್ರಭುತ್ವ-ವಿರೋಧಿಯಾದ ಮತ್ತು ಸ್ವೀಕಾರಾರ್ಹವಲ್ಲದ ನಡೆ ಎಂದು ಹೇಳುತ್ತ ಈ ಐಟಿ ನಿಯಮಗಳ ತಿದ್ದುಪಡಿಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಅಮಾಯಕ ಇದ್ರೀಶ್ ಕೊಲೆ....

ಪುಟ 9 ರಿಂದ

ಮುಸಲ್ಮಾನರ ಮನೆಗಳ ಮೇಲಿನ ಹಸಿರು ಧಾರ್ಮಿಕ ಧ್ವಜವನ್ನು ತೆಗೆದು ಕೇಸರಿ ಬಾವುಟ ಕಟ್ಟಿ ಮುಸಲ್ಮಾನರನ್ನು ಕೆರಳಿಸಲು ಪ್ರಯತ್ನಿಸಿದರು. ಎರಡನೆಯದಾಗಿ, ಉರೀಗೌಡ - ನಂಜೇಗೌಡ ಎಂಬ ನಕಲಿ ವ್ಯಕ್ತಿಗಳಿಗೆ ಆರೆಸ್ಸೆಸ್ ಅಗ್ರಹಾರದಲ್ಲಿ ಜನ್ಮ ನೀಡಿ, ಟಿಪ್ಪುವನ್ನು ಕೊಂದ ವೀರರು ಎಂದು ಪಟ್ಟ ಕಟ್ಟಿ ಮುಸಲ್ಮಾನನ್ನು ಕೆರಳಿಸಲು ನೋಡಿದರು. ಮೂರನೆಯದಾಗಿ, 1918ರ ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತದ ಮಿಲ್ಲರ್ ಆಯೋಗದ ಕಾಲದಿಂದಲೂ ಮುಸಲ್ಮಾನರು ಪಡೆಯುತ್ತಿದ್ದ ಮೀಸಲಾತಿಯನ್ನು ಕಿತ್ತುಕೊಂಡು ಅದರಲ್ಲಿ ಅರ್ಧ ಭಾಗವನ್ನು ಒಕ್ಕಲಿಗರಿಗೆ ಹಂಚಿ ಮುಸಲ್ಮಾನರನ್ನು ಕೆರಳಿಸಲು ಮತ್ತು ಒಕ್ಕಲಿಗರನ್ನು ಒಲಿಸಿಕೊಳ್ಳಲು ನೋಡಿದರು. ಚುನಾವಣೆಯ ಪೂರ್ವದ ಕೊನೆಯ ಪ್ರಯತ್ನವಾಗಿ ಇದ್ರಿಶನನ್ನು ಕೊಂದರು.

ಈ ಇಂತಹ ಎಲ್ಲಾ ನೀಚ ಪ್ರಯತ್ನಗಳನ್ನು ಹಳೇ ಮೈಸೂರು ಭಾಗದ ಮುಸಲ್ಮಾನರು ಮತ್ತು ಹಿಂದೂಗಳು ಅತ್ಯಂತ ಪ್ರೌಢಿಮೆಯಿಂದ ನಿಭಾಯಿಸಿದರು. ಮುಸಲ್ಮಾನರು ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳಿಂದ ಆಚೆ ಸರಿಯದೆ, ತೀವ್ರ ಭಾವಾವೇಶಕ್ಕೆ ಒಳಗಾಗದೆ ಘನತೆಯನ್ನು ಮೆರೆದರು. ಒಕ್ಕಲಿಗರೂ ಸೇರಿದಂತೆ ಹಿಂದೂಗಳು ಕೂಡಾ ಸಂಘ ಪರಿವಾರದ ಸಣ್ಣತನಗಳಿಗೆ ಉತ್ಸುಕರಾಗಿ ಸ್ಪಂದಿಸದೇ ಹೋದರು. ಇದ್ರಿಶನ ಅಮೂಲ್ಯ ಜೀವ ನಾಶವಾಗಿ, ಹೆಂಡತಿ ಮಕ್ಕಳು ಅನಾಥವಾದರೂ ಸಂಘ ಪರಿವಾರದ ಕುತಂತ್ರಗಳಿಗೆ ಯಶಸ್ಸು ಸಿಗದೇ ಹೋಯಿತು. ಹತಾಶ ಸಂಘ ಪರಿವಾರ ಇನ್ನಾವ ಬಲಿಗೆ ಕಾದಿದೆಯೋ??

ಪ್ರತಿ ಟನ್ ಕಬ್ಬಿಗೆ 5000ರೂ., ಮುಚ್ಚಿದ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ತೆರೆಯಲು ಬಡ್ಡಿ ರಹಿತ ಸಾಲ

-ಅಖಿಲ ಭಾರತ ಕಬ್ಬು ರೈತರ ಒಕ್ಕೂಟದ ಆಗ್ರಹ



ಕರ್ನಾಟಕ ಸೇರಿದಂತೆ 9 ರಾಜ್ಯಗಳಿಂದ ಬಂದ ಕಬ್ಬು ಬೆಳೆಗಾರರು ಎಪ್ರಿಲ್ 6ರಂದು ತಮ್ಮ ಬೇಡಿಕೆಗಳ ಮೇಲೆ ದಿಲ್ಲಿಯ ಜಂತರ್ ಮಂತರ್‌ನಲ್ಲಿ ಧರಣಿ ನಡೆಸಿದರು. ಎಐಕೆಎಸ್‌ಗೆ ಸೇರಿರುವ ಅಖಿಲ ಭಾರತ ಕಬ್ಬು ರೈತರ ಒಕ್ಕೂಟ(ಎಐಎಸ್‌ಎಫ್‌ಎಫ್) ಇದಕ್ಕೆ ನೇತೃತ್ವ ನೀಡಿತ್ತು. ಕೇಂದ್ರ ಸರಕಾರದ ಕಬ್ಬು ಬೆಳಗಾರರ-ವಿರೋಧಿ ಧೋರಣೆಗಳನ್ನು ಪ್ರತಿಭಟಿಸಿ ಈ ಧರಣಿ ನಡೆಸಲಾಯಿತು ಎಂದು ಎಐಎಸ್‌ಎಫ್‌ಎಫ್ ಹೇಳಿಕೆಯಲ್ಲಿ ತಿಳಿಸಿದೆ.

ಪ್ರಸಕ್ತ ಹಂಗಾಮಿಗೆ 9.5% ರಿಕವರಿಯಲ್ಲಿ ಕ್ವಿಂಟಾಲಿಗೆ 500ರೂ ಅಥವ ಟನ್ನಿಗೆ 5000 ರೂ. ನಿಗದಿ ಮಾಡಬೇಕು ಮತ್ತು 1966ರ ಸಕ್ಕರೆ ಹತೋಟಿ ಆದೇಶದಂತೆ, ಸರಬರಾಜು ಮಾಡಿದ ಕಬ್ಬಿಗೆ 14 ದಿನಗಳಲ್ಲಿ ಹಣ ಪಾವತಿಸಬೇಕು ಮತ್ತು ಎಲ್ಲಾ ಬಾಕಿಗಳನ್ನು ತಕ್ಷಣವೇ ಚುಕ್ತಾಮಾಡಬೇಕು ಎಂಬುದು ಈ ಧರಣಿಯ ಮುಖ್ಯ ಬೇಡಿಕೆಗಳು.

ಎಐಎಸ್‌ಎಫ್‌ಎಫ್ ಅಧ್ಯಕ್ಷ ಡಿ.ರವೀಂದ್ರನ್ ಮತ್ತು ಪ್ರಧಾನ ಕಾರ್ಯದರ್ಶಿ ಎನ್ ಕೆ ಶುಕ್ಲ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯನ್ನು ಉದ್ದೇಶಿಸಿ ಎಐಕೆಎಸ್ ಪ್ರಧಾನ ಕಾರ್ಯದರ್ಶಿ ವಿಜು ಕೃಷ್ಣನ್, ಉಪಾಧ್ಯಕ್ಷರಾದ ಹನ್ನನ್ ಮೊಲ್ಲ ಮತ್ತು ಹಣಕಾಸು ಕಾರ್ಯದರ್ಶಿ ಕೃಷ್ಣ ಪ್ರಸಾದ್ ಮಾತನಾಡಿದರು.

ದೇಶದ ಕಬ್ಬು ಬೆಳೆಗಾರರ ಪ್ರಮುಖ ಬೇಡಿಕೆಗಳನ್ನು ಕುರಿತಂತೆ ಕೇಂದ್ರ ಕೃಷಿ ಮಂತ್ರಿಗಳಿಗೆ ಸ್ಮರಣ ಪತ್ರವನ್ನು ಸಲ್ಲಿಸಲಾಯಿತು.

ಇದಕ್ಕೆ ಮೊದಲು ಅಖಿಲ ಭಾರತ ಕಬ್ಬು ರೈತರ ಒಕ್ಕೂಟ(ಎಐಎಸ್‌ಎಫ್‌ಎಫ್) ರಾಷ್ಟ್ರೀಯ ಸಹಕಾರಿ ಸಕ್ಕರೆ ಕಾರ್ಖಾನೆಗಳ ಒಕ್ಕೂಟದ ಎಂ.ಡಿ.ಯವರಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಮುಚ್ಚಿದ ಸಹಕಾರಿ ಮತ್ತು ಸಾರ್ವಜನಿಕ ವಲಯದ ಸಕ್ಕರೆ ಕಾರ್ಖಾನೆಗಳನ್ನು ತೆರೆಯಲು ಮತ್ತು ನಿರ್ವಹಿಸಲು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದಿಂದ ಬಡ್ಡಿರಹಿತ ಸಾಲವನ್ನು ಒದಗಿಸಬೇಕೆಂದು, ಅವರ ಮೂಲಕ ಭಾರತ ಸರಕಾರವನ್ನು ಕೋರಲಾಗಿತ್ತು.

40 ವರ್ಷಗಳ ಹಿಂದೆ ಸ್ಥಾಪಿಸಲಾದ ಸಹಕಾರಿ ಮತ್ತು ಸಾರ್ವಜನಿಕ ವಲಯದ ಕಾರ್ಖಾನೆಗಳನ್ನು ನವೀಕರಿಸಬೇಕು ಮತ್ತು ಆಧುನೀಕರಿಸಬೇಕು. ಇದಕ್ಕಾಗಿ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದಿಂದ ನಿಧಿಯನ್ನು ನೀಡಬೇಕೆಂದೂ ಈ ಮನವಿಯಲ್ಲಿ ಕೋರಲಾಗಿದೆ. ಕೇಂದ್ರ ಸರ್ಕಾರವು 2025 ರ ವೇಳೆಗೆ ಎಥೆನಾಲ್ ಉತ್ಪಾದನೆಯನ್ನು ಹೆಚ್ಚಿಸುವ ಯೋಜನೆಯನ್ನು ಪ್ರಕಟಿಸಿದೆ.

ಇದಕ್ಕಾಗಿ ದೇಶಾದ್ಯಂತ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಎಥೆನಾಲ್ ಸ್ಥಾವರಗಳನ್ನು ಸ್ಥಾಪಿಸಬೇಕೆಂದು ವಿನಂತಿಸಿರುವ ಮನವಿ ಪತ್ರ ಮಹಾರಾಷ್ಟ್ರವು ಗರಿಷ್ಠ ಸಂಖ್ಯೆಯ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಹೊಂದಿದ್ದು, ಅದಕ್ಕೆ ಆದ್ಯತೆ ನೀಡಬೇಕು ಎಂದು ಕೇಳಿದೆ.

1966ರ ಸಕ್ಕರೆ ಹತೋಟಿ ಆದೇಶದಂತೆ, ಸರಬರಾಜು ಮಾಡಿದ ಕಬ್ಬಿಗೆ 14 ದಿನಗಳಲ್ಲಿ ಹಣ ಪಾವತಿಸಬೇಕು ಮತ್ತು ಎಲ್ಲಾ ಬಾಕಿಗಳನ್ನು ತಕ್ಷಣವೇ ಚುಕ್ತಾಮಾಡಬೇಕೆಂದೂ ಮನವಿ ಪತ್ರದಲ್ಲಿ ಎಐಎಸ್‌ಎಫ್‌ಎಫ್ ಸರಕಾರವನ್ನು ಆಗ್ರಹಿಸಿದೆ.

ಪ್ರಸಕ್ತ ಹಂಗಾಮಿಗೆ 9.5% ರಿಕವರಿಯಲ್ಲಿ ಕ್ವಿಂಟಾಲಿಗೆ 500ರೂ. ಅಥವ ಟನ್ನಿಗೆ 5000ರೂ. ನಿಗದಿ ಮಾಡಬೇಕು ಎಂದೂ ಎಐಎಸ್‌ಎಫ್‌ಎಫ್‌ನ ಪ್ರಧಾನ ಕಾರ್ಯದರ್ಶಿ ಎನ್.ಕೆ.ಶುಕ್ಲ ಮತ್ತು ಅಧ್ಯಕ್ಷರಾದ ಡಿ.ರವೀಂದ್ರನ್ ಈ ಮನವಿ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಲೂಟಿಕೋರ ಕಾರ್ಪೋರೇಟ್ ಪರ ನೀತಿಗಳೇ ಮುಸ್ಲಿಂ ಹಾಗೂ ನಾಗರೀಕರ ಮೇಲಿನ ದಾಳಿಗಳ ಮೂಲ–ಸಿಪಿಐ(ಎಂ)

ದೇಶ ಹಾಗೂ ರಾಜ್ಯದಲ್ಲಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ದಾಳಿಗಳಿಗೆ ಹಾಗೂ ಮುಸ್ಲಿಂ ದ್ವೇಷಕ್ಕೆ ಲೂಟಿಕೋರ ಕಾರ್ಪೋರೇಟ್ ಸಂಸ್ಥೆಗಳ ಪರ ನೀತಿಗಳೇ ಕಾರಣಗಳಾಗಿವೆ ಎಂದು ಸಿಪಿಐ(ಎಂ) ವಿಶ್ಲೇಷಿಸಿದೆ.

ಇದರ ಭಾಗವಾಗಿಯೇ ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ರಾಜ್ಯದ ಡಬಲ್ ಎಂಜಿನ್ ಸರ್ಕಾರಗಳು ಲೂಟಿಕೋರ ಆರ್ಥಿಕ ನೀತಿಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿವೆ. ಇಂತಹ ಲೂಟಿಕೋರತನದ ಕಡೆ ಜನರು ಗಮನಹರಿಸದಂತೆ, ಅವರ ಗಮನವನ್ನು ಬೇರೆಡೆ ಸೆಳೆಯುವ ಪ್ರಯತ್ನದ ಭಾಗವಾಗಿ ದೇಶದ ಹಾಗೂ ರಾಜ್ಯದ ಮತಾಂಧ ಮತ್ತು ಜಾತಿವಾದಿ ಶಕ್ತಿಗಳ ಬೆಳವಣಿಗೆಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿವೆ. ಬಿಜೆಪಿ, ಆರ್.ಎಸ್.ಎಸ್. ಮುಂತಾದ ಹಿಂದುತ್ವವಾದಿ ಸಂಘಟನೆಗಳು ಹಾಗೂ ಮುಸ್ಲಿಂ ಮತಾಂಧ ಸಂಘಟನೆಗಳು ಲೂಟಿಕೋರ ಕಾರ್ಪೋರೇಟ್ ಸಂಸ್ಥೆಗಳ ಜೊತೆ ಕೈ ಜೋಡಿಸಿವೆ. ಈ ಮತೀಯ ಶಕ್ತಿಗಳು ಧರ್ಮಗಳ ಹಾಗೂ ಜಾತಿಗಳ ನಡುವೆ ದ್ವೇಷ ಬಿತ್ತುತ್ತ, ಜನತೆಯನ್ನು ವಿಭಜಿಸುವ ಮೂಲಕ, ಲೂಟಿಕೋರತನದ ವಿರುದ್ಧ ಜನತೆ ಒಗ್ಗೂಡದಂತೆ ತಡೆಯುವ, ಚಳುವಳಿಕಾರರನ್ನು ಪ್ರಗತಿಪರರನ್ನು ಬೆದರಿಸುವ ಮತ್ತು ದೇಶದ್ರೋಹಿಗಳೆಂದು ಹೀಗಳೆಯುವ ಕೆಲಸ ಮಾಡುತ್ತಿವೆ. ಹೀಗೆ ಲೂಟಿಕೋರರ ಪರವಾಗಿ ವಿಭಜಿಸಿ ಆಳಲು ಮತ್ತು ಕಾರ್ಪೋರೇಟ್ ಸಂಸ್ಥೆಗಳ ಲೂಟಿಕೋರತನವನ್ನು ಮರೆ ಮಾಚಲು ಇವು ನೆರವಾಗುತ್ತಿವೆ.

ಆರೆಸ್ಸೆಸ್ ಮತ್ತಿತರೆ ಮತಾಂಧ ಗೂಂಡಾ ಪಡೆ ಗೋರಕ್ಷಣೆ, ನೈತಿಕ ಪೋಲೀಸ್ ಗಿರಿ, ಧರ್ಮ ರಕ್ಷಣೆಯ ಹೆಸರಿನಲ್ಲಿ, ಕಾನೂನನ್ನು ಕೈಗೆತ್ತಿಕೊಳ್ಳುವ ಮೂಲಕ, ಪ್ರಗತಿಪರರು, ದಲಿತರು ಹಾಗೂ ಮುಸಲ್ಮಾನರನ್ನು ಕೊಲ್ಲುವ ಕ್ರಿಮಿನಲ್ ದುಷ್ಕೃತ್ಯದಲ್ಲಿ ತೊಡಗಿವೆ. ರಾಜ್ಯದ ಬಿಜೆಪಿ ಸರ್ಕಾರ ಇಂತಹ ಗೂಂಡಾಗಳನ್ನು ನಿಗ್ರಹಿಸಿ ದುಷ್ಕೃತ್ಯವನ್ನು ತಡೆಯುವ ಪ್ರಯತ್ನ ಮಾಡುತ್ತಿಲ್ಲ. ಬದಲಾಗಿ, ಈ ವಿಷಯದಲ್ಲಿ ತಾರತಮ್ಯ ಮಾಡುವ ಮೂಲಕ, ಅಂತಹ ದುಷ್ಕೃತ್ಯಗಳಿಗೆ ಕುಮ್ಮಕ್ಕು ದೊರೆಯುವಂತೆ ಮಾಡುವ ಮೂಲಕ ಗೂಂಡಾ ಚಟುವಟಿಕೆಗಳಿಗೆ ಮುಕ್ತ ಸ್ವಾತಂತ್ರ್ಯ ನೀಡಿದೆ. ಇದರಿಂದ ಅಮಾಯಕ ಜನತೆ ಪ್ರಾಣ ಕಳೆದುಕೊಂಡು ಅವರ ಕುಟುಂಬಗಳು ಬೀದಿ ಪಾಲಾಗುತ್ತಿವೆ. ನರಗುಂದ, ದಕ್ಷಿಣ ಕನ್ನಡ ಮುಂತಾದೆಡೆ ಕೊಲ್ಲಲ್ಪಟ್ಟ ಮುಸ್ಲಿಂ ಯುವಜನರ ಕುಟುಂಬಗಳಿಗೆ ಸೂಕ್ತ ಪರಿಹಾರವನ್ನು ಒದಗಿಸಲಿಲ್ಲ. ಮಾತ್ರವಲ್ಲ, ಕೊಲೆಗಡುಕರ ಮೇಲೆ ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳಲಿಲ್ಲ. ಇಂತಹ ಎಲ್ಲ ಆರೋಪಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಅದರಲ್ಲೂ ಗೋ ಹತ್ಯೆ ನಿಷೇಧ ಕಾನೂನನ್ನು ಜಾರಿಗೆ ತಂದ ನಂತರ ದನದ ವ್ಯಾಪಾರಿಗಳ ಮೇಲಿನ ದಾಳಿಗಳು ವಿಪರೀತ ಹೆಚ್ಚಾಗಿವೆ. ಗೋರಕ್ಷಕ ಮುಖವಾಡ ಧರಿಸಿದ ಮತಾಂಧ ಗೂಂಡಾಗಳು ದಾಳಿ ಮಾಡಿ ಹಲ್ಲೆ ನಡೆಸುವಾಗ, ರಾಜ್ಯ ಸರ್ಕಾರದ ಪೊಲೀಸರು ಒಂದೋ ಮೂಕ ಪ್ರೇಕ್ಷಕರಾಗುವುದು ಇಲ್ಲವೇ ದಾಳಿಕೋರರ ಜೊತೆ ಕೈಜೋಡಿಸುವುದು ನಡೆದಿದೆ. ಇದರಿಂದಾಗಿ ದಾಳಿ, ಹಲ್ಲೆ ನಡೆಸುವವರಿಗೆ ಹೆಚ್ಚಿನ ಬಲ ಬಂದಂತಾಗಿದೆ. ಇಂತಹ ವ್ಯಕ್ತಿಗಳು ಮತ್ತು ಶಕ್ತಿಗಳ ಮೇಲೆ ಯಾವುದೇ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕೆಂದು ಅದು ಒತ್ತಾಯಿಸಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ್ ರವರು ನೀಡಿದ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ಗೋ ರಕ್ಷಣೆಯ ಮುಖವಾಡ ಧರಿಸಿದ ಕೊಲೆಗಡುಕರನ್ನು ಬಂಧಿಸುವಂತೆ ಆಗ್ರಹಿಸಿ ರಾಜ್ಯದ ಹಲವೆಡೆ ಪ್ರತಿಭಟನೆ

ಕನಕಪುರ ತಾಲೂಕಿನ ಸಾತನೂರು ಬಳಿ ಗೋರಕ್ಷಕ ಮುಸುಕಿನ ಕೊಲೆಗಡುಕ ಗೂಂಡಾ ಪಡೆ ಇದ್ರಿಶ್ ಪಾಷಾ ಎಂಬ ಬಡ ಕಾರ್ಮಿಕನನ್ನು ಬಲವಂತವಾಗಿ ಕಾಂಪೌಂಡ್ ಒಳಗೆ ಎಳೆದೊಯ್ದು, ವಿದ್ಯುತ್ ಶಾಕ್ ಮೂಲಕ ಚಿತ್ರಹಿಂಸೆ ನೀಡಿ ಕಗ್ಗೊಲೆಗೈದಿದೆ. ಈ ಹಿಂದೂ ಮತಾಂಧರ ಕೊಲೆಗಡುಕತನವನ್ನು ಬಲವಾಗಿ ಖಂಡಿಸಿರುವ ಸಿಪಿಐ(ಎಂ), ಕೂಡಲೇ ಈ ಕೊಲೆಗಡುಕರನ್ನು ಬಂಧಿಸಿ ಕಾನೂನಿನ ಕ್ರಮಕ್ಕೆ ಒಳಪಡಿಸಬೇಕೆಂದು ರಾಜ್ಯ ಸರ್ಕಾರ ಮತ್ತು ಉನ್ನತ ಪೋಲೀಸ್ ಅಧಿಕಾರಿಗಳನ್ನು ಒತ್ತಾಯಿಸಿದೆ. ಅದೇ ರೀತಿ, ರಾಜ್ಯ ಸರ್ಕಾರ ಕೊಲೆಗೀಡಾದ ಇದ್ರಿಸ್ ಕುಟುಂಬಕ್ಕೆ 25 ಲಕ್ಷ ರೂ.ಗಳು ಮತ್ತು ಒಂದು ಸರ್ಕಾರಿ ಉದ್ಯೋಗ ಒದಗಿಸುವ ಪರಿಹಾರಗಳನ್ನು ಘೋಷಿಸಬೇಕೆಂದು ಒತ್ತಾಯಿಸಿದೆ. ಈ ಕುರಿತಂತೆ ರಾಜ್ಯದಾದ್ಯಂತ ಎಲ್ಲಾ ತಾಲೂಕಾ ಕೇಂದ್ರಗಳಲ್ಲಿ ದಿನಾಂಕ 06.04.2023 ರಂದು ಪ್ರತಿಭಟನೆಗಳನ್ನು ಸಂಘಟಿಸಿ ರಾಜ್ಯ ಸರ್ಕಾರವನ್ನು ಒತ್ತಾಯಿಸುವಂತೆ ತನ್ನ ಎಲ್ಲಾ ಘಟಕಗಳಿಗೆ ಹಾಗೂ ನಾಗರೀಕರಿಗೆ ಸಿಪಿಐ(ಎಂ) ಕರೆ ನೀಡಿತ್ತು. ಅದರಂತೆ ರಾಜ್ಯದ ವಿವಿಧೆಡೆಗಳಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ.

ರಾಜ್ಯದಲ್ಲಿ ಮುಸ್ಲಿಂ ಸಮುದಾಯ ರಂಜಾನ್ ಹಬ್ಬದಲ್ಲಿ ತೊಡಗಿರುವಾಗ ಅವರಿಗೆ ರಾಜ್ಯ ಸರ್ಕಾರ ನೆರವಾಗುವಂತಹ ಉಡುಗೊರೆ ನೀಡುವ ಬದಲು, ಬಡ ಮುಸ್ಲಿಂ ಸಮುದಾಯಕ್ಕೆ ನೀಡಲಾಗಿದ್ದ ಶೇ 4ರ ಮೀಸಲಾತಿಯನ್ನು ಕಿತ್ತುಕೊಂಡು ತಾರತಮ್ಯ ಮೆರೆದಿದೆ. ಮತ್ತೊಂದೆಡೆ ಹಿಂದೂ ಮತಾಂದರು ಕಾನೂನನ್ನು ಕೈಗೆತ್ತಿಕೊಂಡು ಅಮಾಯಕ ಬಡ ಮುಸ್ಲಿಂ ವ್ಯಕ್ತಿಯ ಕಗ್ಗೊಲೆಗೆ ಮುಂದಾಗಿದ್ದಾರೆ. ಈ ಎರಡು ಘಟನೆಗಳು ಜಗತ್ತಿನ ಮುಂದೆ ನಾಗರೀಕ ಸಮಾಜ ನಾಚಿಕೆಯಿಂದ ತಲೆ ತಗ್ಗಿಸುವಂತಹ ಹೇಯ ದುಷ್ಕೃತ್ಯಗಳಾಗಿವೆ. ಈ ಮತಾಂಧ ಕೊಲೆಗಳು ಹಾಗೂ ರಾಜಕಾರಣವನ್ನು ತಕ್ಷಣವೇ ನಿಲ್ಲಿಸುವಂತೆ ಸಿಪಿಐ(ಎಂ) ಒತ್ತಾಯಿಸಿದೆ.

ಮುಸ್ಲಿಂ ಅಲ್ಪ ಸಂಖ್ಯಾತರ ಮೇಲಿನ ಇಂತಹ ದಾಳಿಗಳಿಗೆ ಬಿಜೆಪಿ ಹಾಗೂ ಆರ್.ಎಸ್.ಎಸ್. ಗಳ ಮುಸ್ಲಿಂ ದ್ವೇಷದ ರಾಜಕಾರಣವೇ ಪ್ರೇರಣೆಯಾಗಿದೆ. ರಾಜ್ಯ ಸರ್ಕಾರದ ಅಧಿಕಾರವನ್ನು ಬಳಸಿ ಭಾರತದ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವಿರೋಧಿಯಾಗಿ, ದಲಿತರು, ಹಿಂದುಳಿದವರು ಮತ್ತು ಅಲ್ಪ ಸಂಖ್ಯಾತರ ಆಹಾರದ ಹಕ್ಕು ಹಾಗೂ ರಾಜ್ಯದ ಹೈನುಗಾರರೂ ಸೇರಿದಂತೆ ಈ ಎಲ್ಲರ ಉದ್ಯೋಗದ ಹಕ್ಕಿನ ಮೇಲೆ ದಾಳಿ ಮಾಡುವ ಮತ್ತು ಹೈನೋದ್ಯಮ, ಚರ್ಮೋದ್ಯಮ ಹಾಗೂ ಮಾಂಸೋದ್ಯಮಗಳನ್ನು ಕಾರ್ಪೋರೇಟ್ ಕಂಪನಿಗಳ ಲೂಟಿಗೆ ತೆರೆದಿಡುವ ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ–2020 ನ್ನು ಅಂಗೀಕರಿಸಿ ಜಾರಿಯಲ್ಲಿಟ್ಟಿರುವುದು ಮತ್ತು ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆಯ ಕಾಯ್ದೆಗೆ ಕ್ರಮವಹಿಸುತ್ತಿರುವುದು ಕೂಡಾ ಇಂತಹ ದಾಳಿಗಳಿಗೆ ಕುಮ್ಮಕ್ಕು ನೀಡುತ್ತದೆ ಎಂದು ಸಿಪಿಐ(ಎಂ) ಆರೋಪಿಸಿದೆ.











ಭಾಷೆಗಳು ಹಲವು ಆದರೂ ಭಾವನೆಗಳು ಒಂದೇ! ‘ಕಾರ್ಮಿಕ–ರೈತ ಮಹಾ ರ್‍ಯಾಲಿ’ ಯಲ್ಲಿ ಕಂಡಂತೆ... ಪುಟ 16 ರಿಂದ

ಸಂಸ್ಥೆಯ ಉದ್ಯೋಗಿಗಳೇ ಆಗಿರಬಹುದು.

ಮೈದಾನದ ಒಂದು ಮೂಲೆಯಲ್ಲಿ ಸಂತಾಲಿ ಜಿಲ್ಲೆಯ ಸುಲ್ತಾನ್‌ಪುರ ಗ್ರಾಮದ ಊಟದ ಕೆಲಸಗಾರರ ನಡುವೆ ಶಾಲೆಯ ಬಿಸಿಯೂಟ ಸಹಾಯಕಿಯರ ಗುಂಪು ಕುಳಿತಿತ್ತು. ಅವರ ಕುಟುಂಬಗಳಲ್ಲಿ ಕೂಲಿ ಕೆಲಸ ಮಾಡುವವರೂ ಇದ್ದರು. ಅವರೊಂದಿಗೆ ಮಾತನಾಡಿದಾಗ, ಪ್ರತಿದಿನ ಶಾಲೆಯ ಮಹಡಿಗಳನ್ನು ಗುಡಿಸಿ, ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟವನ್ನು ತಯಾರಿಸಬೇಕು ಮತ್ತು ಶಿಕ್ಷಕರು ಶಾಲೆಯಿಂದ ಹೊರಟು ಶಾಲೆಯನ್ನು ಮುಚ್ಚಿ ಹಿಂತಿರುಗುವವರೆಗೆ ಕಾಯಬೇಕು ಎಂದು ಹೇಳಿದರು. ವಾಸ್ತವವಾಗಿ, ಇದು ಅವರಿಗೆ ನಿಯೋಜಿಸಲಾದ ಕಾರ್ಯವಲ್ಲ. ಆದರೆ, ಅವರ್ಯಾರೂ ಸರ್ಕಾರಿ ನೌಕರರಲ್ಲ. 39 ವರ್ಷದ ಆಶಾ ಎಂಬ ಮಹಿಳೆ ಕಳೆದ 15 ವರ್ಷಗಳಿಂದ 160 ಮಕ್ಕಳಿಗೆ ಊಟ ನೀಡುತ್ತಿದ್ದು, ಕಳೆದ ಹಲವು ವರ್ಷಗಳಿಂದ ತಿಂಗಳಿಗೆ ಕೇವಲ ಒಂದು ಸಾವಿರ ರೂಪಾಯಿ ನೀಡುತ್ತಿದ್ದು, ಈಗ ಒಂದು ಸಾವಿರ ರೂಪಾಯಿ ಹೆಚ್ಚಿಸಿದ್ದಾರೆ ಎಂದು ತಿಳಿಸಿದರು. ಈಗ ಅವರ ವೇತನ ಎರಡು ಸಾವಿರ ರೂ.


ಇದೂ ಕೂಡ ಸರಿಯಾದ ಸಮಯಕ್ಕೆ ಬರುವುದಿಲ್ಲ. ಕೆಲವೊಮ್ಮೆ 2–3 ತಿಂಗಳಿಗೆ 4,000 ಅಥವಾ 5,000 ರೂ.ಗಳನ್ನು ಕೊಡುತ್ತಾರೆ ಎಂದೂ ಹೇಳಿದರು. ನಮ್ಮನ್ನು ಕಾಯಂ ನೌಕರರನ್ನಾಗಿ ಮಾಡಿ ಪ್ರತಿ ತಿಂಗಳು ಸರಿಯಾಗಿ ವೇತನ ನೀಡಿದರೆ ಕೂಲಿ ಹೆಚ್ಚಿಸಬಹುದು ಎಂದರು. ವರ್ಷದಲ್ಲಿ 12 ತಿಂಗಳು ಕೆಲಸ ಮಾಡಿದರೂ 10 ತಿಂಗಳಿಗೆ ಮಾತ್ರ ಕೂಲಿ ಪಡೆಯುತ್ತೇವೆ ಎಂದರು. ಆದರೆ, ಅವರನ್ನು ಸಂಘಟಿಸಿದ ನಾಯಕ ಅವರನ್ನು ರ್‍ಯಾಲಿಗೆ ಕರೆದಾಗ ಅವರ ಕಣ್ಣುಗಳಲ್ಲಿ ಭರವಸೆಯ ಮಿಂಚು ಕಾಣುತ್ತಿತ್ತು.

ರ್‍ಯಾಲಿಗೆ ನಿಯಮಿತವಾಗಿ ಬರುವ ಒಡನಾಡಿಗಳು

ಪಶ್ಚಿಮ ಬಂಗಾಳದ ರವಿ ದಾಸ್ ಎಂಬ 37 ವರ್ಷದ ಸಂಗಾತಿ ಪ್ರತಿ ರ್‍ಯಾಲಿಗೆ ಬರುತ್ತಾರೆ. ಅವರು ಹುಟ್ಟಿನಿಂದಲೇ ಅಂಗವಿಕಲ. ಅವರು ನಡೆಯಲು ಸಾಧ್ಯವಿಲ್ಲ. ಕೆಂಪು ಅಂಗಿ ಧರಿಸಿ, ಕೆಂಪು ಬಾವುಟ ಹಿಡಿದು ಮಂಡಿಯೂರಿ ರ್‍ಯಾಲಿಗೆ ಬಂದಿದ್ದರು. ವರದಿಗಾರರೊಬ್ಬರು ಅವರ ಬಳಿ ಬಂದು ವಿಚಾರಿಸಿದಾಗ, “ನಾನು ನನ್ನ ಶಾಲೆಯಿಂದಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಬಲಿಗ. ನಾನು ಓದಿದ್ದು ಐದನೇ ತರಗತಿವರೆಗೆ ಮಾತ್ರ. ದೇಶಾದ್ಯಂತ ನಡೆದ ಎಲ್ಲಾ ಚಳವಳಿಗಳಲ್ಲಿ ಭಾಗವಹಿಸಿದ್ದೇನೆ ಎಂದರು.

ರ್‍ಯಾಲಿಯ ಕೊನೆಯಲ್ಲಿ ಪಂಜಾಬ್–ಹರಿಯಾಣ ರೈತರೊಂದಿಗೆ ಸೇರಿ ಪಾದಯಾತ್ರೆ ನಡೆಸಿದ್ದರಿಂದ ಕಾರ್ಮಿಕರು, ರೈತರಲ್ಲಿ ಹೊಸ ರೀತಿಯ ಆತ್ಮವಿಶ್ವಾಸ ಮೂಡಿದ್ದು, ನಾವು ಒಬ್ಬಂಟಿಗರಲಲ್ಲ ಎಂಬ ಭಾವನೆ ಎಲ್ಲ ಕಾರ್ಮಿಕರಲ್ಲೂ ಮೂಡಿತ್ತು. ಅದೇ ರೀತಿ ಪಂಜಾಬ್–ಹರಿಯಾಣ ರೈತರು ಬಿಹಾರದ ರೈತರೊಂದಿಗೆ ಮತ್ತು ಮಹಾರಾಷ್ಟ್ರದ ರೈತರು ತಮಿಳುನಾಡು ರೈತರೊಂದಿಗೆ ತಮ್ಮ ಸಮಸ್ಯೆಗಳನ್ನು ಮತ್ತು ಹೋರಾಟಗಳನ್ನು ಹಂಚಿಕೊಂಡರು.

ನ್ಯೂಸ್‌ಕ್ಲಿಕ್
ಅನು: ನಮ್ಮ ವರದಿಗಾರ



ನಿರುದ್ಯೋಗವನ್ನು ತರುವ ಬಂಡವಾಳಶಾಹಿಯೇ ನಂತರ ಅದನ್ನು ನಿವಾರಿಸುತ್ತದೆ ಎಂಬುದು ನಿಜವಲ್ಲ

ಯುರೋಪಿನ ದೇಶಗಳಲ್ಲಿ ಬಂಡವಾಳಶಾಹಿಯ ಆರಂಭದಲ್ಲಿ ನಿರುದ್ಯೋಗ ಉಂಟಾದರೂ ನಂತರ ಕಾರ್ಮಿಕರ ಅದೃಷ್ಟ ಖುಲಾಯಿಸಿತು, ಆದ್ದರಿಂದ ಬಂಡವಾಳಶಾಹಿಯು ತಾನು ಸೃಷ್ಟಿಸಿದ ನಿರುದ್ಯೋಗವನ್ನು ನಂತರ ತಾನೇ ನಿವಾರಿಸುತ್ತದೆ ಎಂಬುದು ಒಂದು ತಪ್ಪು ಕಲ್ಪನೆ. ಬಂಡವಾಳಶಾಹಿ ತಾಂತ್ರಿಕ ಪ್ರಗತಿಯ ನಿರಂತರ ಅಳವಡಿಕೆಯಿಂದಾಗಿ ಕೆಲಸ ಕಳೆದುಕೊಂಡ ಎಲ್ಲ ಕಾರ್ಮಿಕರೂ ಪುನಃ ಸಕ್ರಿಯ ಕಾರ್ಮಿಕ ಪಡೆಯೊಂದಿಗೆ ಸೇರ್ಪಡೆಯಾಗುವ ಯಾವ ಕಾರ್ಯವಿಧಾನವೂ ಬಂಡವಾಳಶಾಹಿ ವ್ಯವಸ್ಥೆಯೊಳಗೆ ಇಲ್ಲ ಎಂಬುದು ಸ್ಪಷ್ಟ. ಯುರೋಪಿನ ದೇಶಗಳಲ್ಲಿ ಕಾರ್ಮಿಕರ ಅದೃಷ್ಟ ಖುಲಾಯಿಸಿದ್ದರೆ, ಅದು ಬಂಡವಾಳಶಾಹಿ ವ್ಯವಸ್ಥೆಯಿಂದಲ್ಲ, ಬದಲಾಗಿ ಸಾಮ್ರಾಜ್ಯಶಾಹಿ ವಿದ್ಯಮಾನದಿಂದಾಗಿ–ಅಂದರೆ ಈ ದೇಶಗಳಿಗೆ ವಿಶ್ವಾದ್ಯಂತ ಭೂಕಬಳಿಕೆಯನ್ನು ಮತ್ತು ವಸಾಹತುಗಳು ಮತ್ತು ಅರೆ–ವಸಾಹತುಗಳಿಗೆ ನಿರುದ್ಯೋಗದ ರಫ್ತು ಈ ಎರಡನ್ನೂ ಖಾತ್ರಿಪಡಿಸಿದ ವಿದ್ಯಮಾನದಿಂದಾಗಿಯೇ ಹೊರತು, ಬಂಡವಾಳಶಾಹಿ ವ್ಯವಸ್ಥೆಯೊಳಗಿನ ಯಾವುದೇ ಅಂಶದಿಂದಾಗಿ ಅಲ್ಲ. ಇಂತಹ ಅವಕಾಶ ಈಗ ಬಂಡವಾಳಶಾಹಿ ದಾರಿ ಹಿಡಿದಿರುವ ಮೂರನೇ ಜಗತ್ತಿನ ದೇಶಗಳಿಗೆ ಲಭ್ಯವಿಲ್ಲ ಎಂಬುದು ಬಹಳ ಮುಖ್ಯವಾದದ್ದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: **ಕೆ.ಎಂ.ನಾಗರಾಜ್**

ಬಂಡವಾಳಶಾಹಿಯು ತನ್ನ ಆರಂಭದ ಹಂತಗಳಲ್ಲಿ ನಿರುದ್ಯೋಗವನ್ನು ಸೃಷ್ಟಿಸುತ್ತದೆ. ಅದರಿಂದಾಗಿ ಬಡತನ ಹೆಚ್ಚುತ್ತದೆ. ಆದರೆ, ಬಂಡವಾಳಶಾಹಿಯು ಬೆಳೆಯುತ್ತಾ ಹೋದಂತೆ, ಆರಂಭದ ಹಂತಗಳಲ್ಲಿ ಅದು ಉಂಟುಮಾಡಿದ ಹಾನಿಯ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ನಿರುದ್ಯೋಗಿಗಳು ಬಹುಪಾಲು ಉದ್ಯೋಗ ಗಿಟ್ಟಿಸಿಕೊಳ್ಳುತ್ತಾರೆ. ನಿರುದ್ಯೋಗದ ಇಳಿಕೆಯ ನಂತರ, ವೇತನಗಳು ಏರುತ್ತವೆ. ಕಾರ್ಮಿಕರ ಉತ್ಪಾದಕತೆ ಹೆಚ್ಚುತ್ತಾ ಹೋದಂತೆ ವೇತನಗಳೂ ಏರುತ್ತಾ ಹೋಗುತ್ತವೆ. ಬಂಡವಾಳಶಾಹಿಯ ಬಗ್ಗೆ ಈ ರೀತಿಯ ಒಂದು ಅಭಿಪ್ರಾಯವು ಎಲ್ಲರಲ್ಲೂ ಮನೆಮಾಡಿದೆ ಎಂಬುದನ್ನು ಸಾಮಾನ್ಯವಾಗಿ ಕಾಣಬಹುದು.

ಈ ಅಭಿಪ್ರಾಯವನ್ನು ಚಾರಿತ್ರಿಕ ಸಾಕ್ಷ್ಯಾಧಾರಗಳು ಬೆಂಬಲಿಸುತ್ತವೆ ಎಂಬುದು ಮೇಲ್ನೋಟದಲ್ಲಿ ತೋರುತ್ತದೆ: ಕೈಗಾರಿಕಾ ಬಂಡವಾಳಶಾಹಿಯ ಉದಯದೊಂದಿಗೆ ಬ್ರಿಟನ್‌ನಲ್ಲಿ ಬಡತನ ವೃದ್ಧಿಸಿತು ಎಂಬುದನ್ನು ಮಾರ್ಕ್ಸ್‌ವಾದಿ ಇತಿಹಾಸಕಾರ ಎರಿಕ್ ಹಾಬ್ಬಾಮ್ ಅಂದಾಜು ಮಾಡಿದ್ದರು. ಆದರೆ, ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಿಂದ ಕಾರ್ಮಿಕರ ಸ್ಥಿತಿ–ಗತಿಗಳು ಉತ್ತಮಗೊಂಡವು. ಸ್ಥಿತ್ಯಂತರದ ಈ ಅವಧಿಯಲ್ಲಿ ಬಂಡವಾಳಶಾಹಿಯು ಕಾರ್ಮಿಕರಿಗೆ ಎಷ್ಟೇ ಕಷ್ಟ–ನಷ್ಟಗಳನ್ನು ಉಂಟುಮಾಡಿದ್ದರೂ ಸಹ, ಅಂತಿಮವಾಗಿ ಅದು ಅವರಿಗೆ ಪ್ರಯೋಜನಕಾರಿಯಾಗಿ ಪರಿಣಮಿಸುತ್ತದೆ ಎಂಬುದನ್ನು ಇದು ಸೂಚಿಸುವಂತೆ ಕಾಣಿಸಬಹುದು.

ಆದರೆ, ಈ ಪರಿಕಲ್ಪನೆಯು ಸಂಪೂರ್ಣವಾಗಿ ತಪ್ಪಾಗಿದೆ. ಏಕೆಂದರೆ, ಬಂಡವಾಳಶಾಹಿಯು ತನ್ನ ಆರಂಭದ ಅವಧಿಯಲ್ಲಿ ಕಾರ್ಮಿಕರ ಸ್ಥಿತಿ–ಗತಿಗಳಿಗೆ ಉಂಟುಮಾಡಿದ ಹಾನಿಯನ್ನು ನಂತರ ಸರಿಪಡಿಸುತ್ತದೆ ಎಂಬುದನ್ನು ಒಪ್ಪಿಕೊಳ್ಳಲು ಯಾವ ಸೈದ್ಧಾಂತಿಕ ಕಾರಣಗಳೂ ದೊರಕುವುದಿಲ್ಲ. ಮತ್ತು, ನಂತರದ ಅವಧಿಯಲ್ಲಿ ಕಂಡುಬಂದ ಕಾರ್ಮಿಕರ ಸ್ಥಿತಿ–ಗತಿಗಳ ಸುಧಾರಣೆಗಳ ಹಿಂದಿರುವ ಕಾರಣಗಳಿಗೂ ಮತ್ತು ಬಂಡವಾಳಶಾಹಿಯ ಹೊಂದಿರುವ ಯಾವ ಸಹಜ ಪ್ರವೃತ್ತಿಗೂ ಯಾವ ಸಂಬಂಧವೂ ಕಾಣುವುದಿಲ್ಲ.

ಬಂಡವಾಳಶಾಹಿಯು ತನ್ನ ಆರಂಭದ ಹಂತಗಳಲ್ಲಿ ಕಾರ್ಮಿಕರ ಸ್ಥಿತಿ–ಗತಿಗಳಿಗೆ ಉಂಟುಮಾಡಿದ ಹಾನಿಯನ್ನು ಆನಂತರದಲ್ಲಿ ಸರಿಪಡಿಸುತ್ತದೆ ಎಂಬ ಕಲ್ಪನೆಯನ್ನು ಇಂಗ್ಲಿಷ್ ಅರ್ಥಶಾಸ್ತ್ರಜ್ಞ ಡೇವಿಡ್ ರಿಕಾರ್ಡೊ ಅವರು ಯಂತ್ರೋಪಕರಣಗಳ ಬಳಕೆಯನ್ನು ಆರಂಭಿಸಿದ ಸಂದರ್ಭದಲ್ಲಿ ಒಂದು ಸಮರ್ಥನೆಯಾಗಿ ಮಂಡಿಸಿದ್ದರು. ಉತ್ಪಾದನೆಯಲ್ಲಿ ಯಂತ್ರೋಪಕರಣಗಳ ಬಳಕೆಯು ಆರಂಭದಲ್ಲಿ ಕಾರ್ಮಿಕರನ್ನು ಕೆಲಸದಿಂದ ಕಿತ್ತೊಗೆಯುತ್ತದೆ ಮತ್ತು ಅವರನ್ನು ಹೆಚ್ಚಿನ ತೊಂದರೆಗಳಿಗೆ ಈಡು ಮಾಡುತ್ತದೆ. ಆದರೆ ಅದು ಲಾಭದ ದರವನ್ನು ಹೆಚ್ಚಿಸುತ್ತದೆ ಮತ್ತು ಅದರಿಂದಾಗಿ ಬಂಡವಾಳದ ಶೇಖರಣೆಯ ದರವನ್ನೂ ಹೆಚ್ಚಿಸುತ್ತದೆ. ಪರಿಣಾಮವಾಗಿ, ಕೆಲಸ ಕಳೆದುಕೊಂಡ ಕಾರ್ಮಿಕರು ಮತ್ತೆ ಉದ್ಯೋಗದಲ್ಲಿ ತೊಡಗುವಂತಾಗುತ್ತದೆ ಎಂದು ಅವರು ವಾದಿಸಿದರು. ಅಷ್ಟೇ ಅಲ್ಲದೆ, ಕಾರ್ಮಿಕರು ಒಟ್ಟಾರೆಯಾಗಿ ತಮ್ಮನ್ನು ತಾವು ವೇಗವಾಗಿ ಪುನರುತ್ಪತ್ತಿ ಮಾಡಿಕೊಳ್ಳದಿದ್ದರೆ ಮತ್ತು ಆ ಮೂಲಕ ಕಾರ್ಮಿಕ ಪಡೆಯ ಬೆಳವಣಿಗೆಯ ದರವನ್ನು ನಿಯಂತ್ರಿಸದಿದ್ದರೆ ತಮ್ಮ ವೇತನದ ಮಟ್ಟವನ್ನೂ ಹೆಚ್ಚಿಸಿಕೊಳ್ಳಬಹುದು ಎಂದಿದ್ದರು.

ತಳಬುಡವಿಲ್ಲದ ನಂಬಿಕೆ

ರಿಕಾರ್ಡೊ ಅವರ ಈ ವಾದದಲ್ಲಿರುವ ಎರಡು ನ್ಯೂನತೆಗಳು ಸ್ಪಷ್ಟವಾಗಿ ಕಾಣುತ್ತವೆ.



ಮೊದಲನೆಯದು, ಉತ್ಪಾದನೆಯಲ್ಲಿ ಯಂತ್ರೋಪಕರಣಗಳ ಬಳಕೆಯನ್ನು ಅದು ಒಮ್ಮೆ–ಮಾತ್ರ ಘಟಿಸುವ ಕ್ರಿಯೆ ಎಂದು ಅವರು ಹೇಳಿದ್ದರು. ಆದರೆ ಬಂಡವಾಳಶಾಹಿಯು ಹೊಸ ಯಂತ್ರೋಪಕರಣಗಳನ್ನು ಮತ್ತು ಹೊಸ ಉತ್ಪಾದನಾ ವಿಧಾನಗಳನ್ನು ನಿರಂತರವಾಗಿ ಪರಿಚಯಿಸುತ್ತಲೇ ಹೋಗುತ್ತದೆ. ಒಮ್ಮೆ–ಮಾತ್ರ ಘಟಿಸುವ ಯಂತ್ರೋಪಕರಣಗಳ ಬಳಕೆಯು ಸೃಷ್ಟಿಸುವ ನಿರುದ್ಯೋಗವು ಅಂತಿಮವಾಗಿ ಬಂಡವಾಳದ ಶೇಖರಣೆಯ ದರದ ಹೆಚ್ಚಳದ ಮೂಲಕ ಮತ್ತು ಅದರಿಂದಾಗಿ ಕಾರ್ಮಿಕರ ಮೇಲಿನ ಬೇಡಿಕೆಯನ್ನು ಹೆಚ್ಚಿಸುವ ಮೂಲಕ ನಿವಾರಣೆಗೊಳ್ಳುತ್ತದೆ ಎಂಬ ಅವರ ವಾದವನ್ನು ನಾವು ಒಪ್ಪಿಕೊಂಡರೂ ಸಹ, ಅಂತಿಮವಾಗಿ ಸಂಭವಿಸಬಹುದಾದ ಈ ಘಟನಾವಳಿಯು ಎಂದಿಗೂ ಕಾರ್ಯರೂಪಕ್ಕೆ ಬರುವುದೇ ಇಲ್ಲ. ಏಕೆಂದರೆ, ಹೊಸ ಹೊಸ ಯಂತ್ರಗಳ ಆವಿಷ್ಕಾರ ಮತ್ತು ಅವುಗಳ ಬಳಕೆಯು ನಿರಂತರವಾಗಿ ಸಾಗುತ್ತಲೇ ಹೋಗುತ್ತದೆ.

ಆದ್ದರಿಂದ ಈ ವಿಷಯವನ್ನು ಒಂದು ಚಲನಾತ್ಮಕ ದೃಷ್ಟಿಯಲ್ಲಿ ನೋಡಬೇಕಾಗುತ್ತದೆ. ಒಂದುವೇಳೆ g ಎಂದರೆ ಬಂಡವಾಳ ದಾಸ್ತಾನಿನ ಬೆಳವಣಿಗೆಯ ದರ ಮತ್ತು ಉತ್ಪಾದನೆಯ ದರ (ತಾಂತ್ರಿಕ ಪ್ರಗತಿಯ ಹೊರತಾಗಿಯೂ ಬಂಡವಾಳ ದಾಸ್ತಾನು ಮತ್ತು ಉತ್ಪಾದನೆಯ ನಡುವಿನ ಅನುಪಾತವು ಬದಲಾಗದೆ ಉಳಿಯುತ್ತದೆ ಎಂದು ಭಾವಿಸಲಾಗಿದೆ, ಏಕೆಂದರೆ, ತಾಂತ್ರಿಕ ಪ್ರಗತಿಯ ಉದ್ದೇಶವೇ ಶ್ರಮಶಕ್ತಿಯ ಮೇಲಿನ ವೆಚ್ಚದ ಇಳಿಕೆ) ಮತ್ತು p ಎಂಬುದು ಕಾರ್ಮಿಕ ಉತ್ಪಾದಕತೆಯ ಬೆಳವಣಿಗೆಯ ದರವಾಗಿದ್ದರೆ, ಆಗ ಶ್ರಮಶಕ್ತಿಯ ಮೇಲಿನ ಬೇಡಿಕೆಯ ಬೆಳವಣಿಗೆಯ ದರವು $g-p$ ಆಗಿರುತ್ತದೆ. ಇದು n ಎಂಬ ಕಾರ್ಮಿಕ ಪಡೆಯ ನೈಸರ್ಗಿಕ ಬೆಳವಣಿಗೆಯ ದರಕ್ಕಿಂತ ಕಡಿಮೆಯಿದ್ದರೆ, ನಿರುದ್ಯೋಗ ದರವು ಕಾಲಾನಂತರದಲ್ಲಿ ಹೆಚ್ಚುತ್ತಲೇ ಹೋಗುತ್ತದೆ. ಆದ್ದರಿಂದ, ಬಂಡವಾಳಶಾಹಿಯ ಕಾರ್ಯವೈಖರಿಯಲ್ಲಿ $g-p$ ಅಂಶವು n ಗಿಂತ ಹೆಚ್ಚಾಗುವಂತೆ ಮಾಡುವಂತದ್ದೇನೂ ಇಲ್ಲ.

ನಿರುದ್ಯೋಗ ದರವು ವೃದ್ಧಿಸುತ್ತಿರುವಾಗ (ಇದರಿಂದಾಗಿ ವೇತನ–ದರವು ಬದುಕುಳಿಯುವ ಮಟ್ಟಕ್ಕೆ ಕಟ್ಟಿಹಾಕಲ್ಪಡುತ್ತದೆ) ಶ್ರಮದ ಉತ್ಪಾದಕತೆಯು ಹೆಚ್ಚುತ್ತಲೇ ಇದ್ದರೆ, ಆಗ ಉತ್ಪಾದನೆಯಿಂದ ಪಡೆಯಬಹುದಾದ ಲಾಭದ ದರವು ಏರುತ್ತಲೇ ಇರುತ್ತದೆ ಮತ್ತು ನಿರುದ್ಯೋಗ ದರವು ಗಮನಾರ್ಹವಾಗಿ ಕುಸಿಯುವವರೆಗೂ ಇದು ಬಂಡವಾಳದ ಶೇಖರಣೆಯ ದರವನ್ನು ಹೆಚ್ಚಿಸುತ್ತದೆ ಎಂಬ ನೆಲೆಯಲ್ಲಿ ಕೆಲವರು ರಿಕಾರ್ಡೊ ಅವರ ವಾದವನ್ನು ಸಮರ್ಥಿಸುತ್ತಾರೆ. ರಿಕಾರ್ಡೊ ಅವರ ವಾದದ ಎರಡನೇ ಸಮಸ್ಯೆ ಬರುವುದು ಇಲ್ಲಿಯೇ. ಅದೇನೆಂದರೆ, ಸಂಭಾವ್ಯ ಉತ್ಪಾದನೆಯು ಸಾಕಾರಗೊಳ್ಳುವಲ್ಲಿ ಮತ್ತು ಅದರಿಂದಾಗಿ ಲಾಭದ ದರ ಏರಿಕೆ ಮತ್ತು ಬಂಡವಾಳದ ಶೇಖರಣೆಯ ದರದ ಏರಿಕೆಯ ಮೇಲೆ ಎಂದೂ ಬೇಡಿಕೆಯ ನಿರ್ಬಂಧ ಇರುವುದಿಲ್ಲ ಎಂದು ಅವರು ಭಾವಿಸುತ್ತಾರೆ. ವಿಷಯವನ್ನು ಬೇರೆ ಮಾತುಗಳಲ್ಲಿ ಹೇಳುವುದಾದರೆ, "ಪೂರೈಕೆಯು ತನ್ನದೇ ಆದ ಬೇಡಿಕೆಯನ್ನು ಸೃಷ್ಟಿಸುತ್ತದೆ" ಎಂದು ಪ್ರತಿಪಾದಿಸುವ ಫ್ರೆಂಚ್ ಅರ್ಥಶಾಸ್ತ್ರಜ್ಞ ಸೇಯ್ಸ್ ನಿಯಮವು ಕಾರ್ಯಪ್ರವೃತ್ತವಾಗಿರುತ್ತದೆ ಎಂದು ಅವರು ಭಾವಿಸುತ್ತಾರೆ. ಆದರೆ, ಉತ್ಪಾದನಾ ಪರಿಸ್ಥಿತಿಯಲ್ಲಿ "ಸಾಕಾರಗೊಳ್ಳುವ ಸಮಸ್ಯೆ" ಇದೆ ಎಂಬುದನ್ನು ನಾವು ಒಮ್ಮೆ ಗುರುತಿಸಿದರೆ, ಕೂಲಿಯ ದರದಿಂದ ಹೊರಹೊಮ್ಮುವ ಲಾಭದ ದರ ಮತ್ತು ಅದರಿಂದಾಗಿ ಬಂಡವಾಳದ ಶೇಖರಣೆಯ ದರ ಮತ್ತು ಅದರೊಂದಿಗೆ ಶ್ರಮಶಕ್ತಿಯ ಮೇಲಿನ ಬೇಡಿಕೆಯು ಒಂದು ಮಿತಿಗೆ ಒಳಪಟ್ಟಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಆಗ, ತಾಂತ್ರಿಕ ಪ್ರಗತಿಯ ನಿರಂತರ ಅಳವಡಿಕೆಯಿಂದಾಗಿ ಕೆಲಸ ಕಳೆದುಕೊಂಡ ಎಲ್ಲ ಕಾರ್ಮಿಕರೂ ಪುನಃ ಸಕ್ರಿಯ ಕಾರ್ಮಿಕ ಪಡೆಯೊಂದಿಗೆ ಸೇರ್ಪಡೆಯಾಗುವ ಯಾವ ಕಾರ್ಯವಿಧಾನವೂ ಬಂಡವಾಳಶಾಹಿ ವ್ಯವಸ್ಥೆಯೊಳಗೆ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಯಂತ್ರೋಪಕರಣಗಳ ಅಳವಡಿಕೆಯು ಉದ್ಯೋಗದ ಮಟ್ಟ ಮತ್ತು ಕಾರ್ಮಿಕರ ಸ್ಥಿತಿ–ಗತಿಗಳ ಮೇಲೆ ಬೀರುವ ದುಷ್ಪರಿಣಾಮಗಳು ತಾತ್ಕಾಲಿಕ ಮಾತ್ರ ಎಂಬ ರಿಕಾರ್ಡೊ ಅವರ ಪ್ರತಿಪಾದನೆಯನ್ನು ವಿಮರ್ಶೆಗೆ ಒಳಪಡಿಸಿದ ಮಾರ್ಕ್ಸ್ ಈ ಮೇಲೆ ತಿಳಿಸಿದ ಎರಡೂ ಅಂಶಗಳನ್ನು ಹೇಳಿದ್ದರು. ಒಮ್ಮೆ ಈ ಅಂಶಗಳನ್ನು ಪರಿಶೀಲಿಸಿದರೆ, ಬಂಡವಾಳಶಾಹಿಯು ತನ್ನ ಆರಂಭದ ಹಂತಗಳಲ್ಲಿ ಉದ್ಯೋಗ ಪರಿಸ್ಥಿತಿಗೆ ಮತ್ತು ಕಾರ್ಮಿಕರ ಸ್ಥಿತಿ–ಗತಿಗಳಿಗೆ ಹಾನಿಕಾರಕವಾಗಿದ್ದರೂ, ಅಂತಿಮವಾಗಿ ಅವರ ಪರಿಸ್ಥಿತಿಯನ್ನು ಸುಧಾರಿಸುತ್ತದೆ ಎಂಬ ನಂಬಿಕೆಯು ತಳ ಬುಡ ಇಲ್ಲದ್ದು ಎಂಬುದು ಸ್ಪಷ್ಟವಾಗುತ್ತದೆ.

"ಹೊಸ ಜಗತ್ತಿಗೆ' ಯುರೋಪಿಯನ್ನರ ವಲಸೆ

ಹಾಗಾದರೆ, ಬಂಡವಾಳಶಾಹಿಯ ಬೆಳವಣಿಗೆಯ ಹಾದಿಯಲ್ಲಿ ಮೆಟ್ರೋಪಾಲಿಟನ್ (ಮಹಾನಗರೀಯ) ಕಾರ್ಮಿಕರ ಜೀವನ ಪರಿಸ್ಥಿತಿಗಳಲ್ಲಿ ನಿಸ್ಸಂದೇಹವಾಗಿ ಕಂಡುಬಂದ ತಿರುವು ಒಂದು ಚಾರಿತ್ರಿಕ ಸತ್ಯ ಎಂಬುದನ್ನು ವಿವರಿಸಬಹುದಾದರೂ ಹೇಗೆ? ಈ ಪ್ರಶ್ನೆಗೆ ಕೊಡಬಹುದಾದ ಉತ್ತರವೆಂದರೆ, ಯುರೋಪಿಯನ್ ಕಾರ್ಮಿಕರು "ಹೊಸ ಜಗತ್ತಿಗೆ" ದೊಡ್ಡ ಪ್ರಮಾಣದಲ್ಲಿ ಹೋದ ವಲಸೆಯೇ. ಈ ವಲಸೆಯು "ದೀರ್ಘ ಹತ್ತೊಂಬತ್ತನೇ ಶತಮಾನ" (ಅಂದರೆ, ಮೊದಲ ಮಹಾಯುದ್ಧದವರೆಗಿನ ಅವಧಿ) ಎಂದು ಕರೆಯಲ್ಪಡುವ ಅವಧಿಯಲ್ಲಿ ಸಂಭವಿಸಿತು. ಅರ್ಥಶಾಸ್ತ್ರಜ್ಞ ಡಬ್ಲ್ಯೂ ಆರ್ಥರ್ ಲೆವಿಸ್ ಅವರ ಪ್ರಕಾರ, ನೆಪೋಲಿಯನ್ ನಡೆಸಿದ ಯುದ್ಧದ ಅಂತ್ಯ ಮತ್ತು ಮೊದಲ ಮಹಾಯುದ್ಧದ ನಡುವಿನ ಅವಧಿಯಲ್ಲಿ, ಸರಿಸುಮಾರು ಐವತ್ತು ಮಿಲಿಯ ಯುರೋಪಿಯನ್ ಕಾರ್ಮಿಕರು ತಾವು ಹುಟ್ಟಿದ ದೇಶಗಳನ್ನು ತೊರೆದು ಯುಎಸ್, ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾದಂತಹ ಬಿಳಿಯರ ವಸಾಹತುಗಳ ಇತರ ಸಮಶೀತೋಷ್ಣ ಪ್ರದೇಶಗಳಿಗೆ ವಲಸೆ ಹೋದರು.

ಇದು "ಉನ್ನತ ವೇತನ" ವಲಸೆಯಾಗಿತ್ತು. ಏಕೆಂದರೆ, ಅವರ ಮೂಲ ದೇಶಗಳಲ್ಲಿಯೂ ಮತ್ತು ಅವರ ವಲಸೆಯ ದೇಶಗಳಲ್ಲಿಯೂ ವೇತನಗಳು, ಅದೇ ಸಮಯದಲ್ಲಿ ಸಂಭವಿಸಿದ ಇನ್ನೊಂದು ವಲಸೆಯ ಅಲೆಗೆ ವ್ಯತಿರಿಕ್ತವಾಗಿ, ಉನ್ನತವಾಗಿದ್ದವು. ಈ ಎರಡನೇ ಅಲೆಯು ಭಾರತ ಮತ್ತು ಚೀನಾದಂತಹ ಉಷ್ಣವಲಯದ ಮತ್ತು ಅರೆ–ಉಷ್ಣವಲಯದ ದೇಶಗಳಿಂದ ಫಿಜಿ, ಮಾರಿಷಸ್, ವೆಸ್ಟ್ ಇಂಡೀಸ್, ಪೂರ್ವ ಆಫ್ರಿಕಾ ಮತ್ತು ನೈಋತ್ಯ ಅಮೆರಿಕಾದಂತಹ ಉಷ್ಣವಲಯದ ಮತ್ತು ಅರೆ–ಉಷ್ಣವಲಯದ ದೇಶಗಳತ್ತ ಸಾಗಿತು. ಅಲ್ಪ–ವೇತನದ ವಲಸೆಯ ಭಾಗವಾಗಿದ್ದ ಈ ಉಷ್ಣವಲಯದ ವಲಸಿಗರಿಗೆ ಬಿಳಿಯರ ವಸಾಹತುಗಳ ಸಮಶೀತೋಷ್ಣ ಪ್ರದೇಶಗಳಿಗೆ ಮುಕ್ತವಾಗಿ ವಲಸೆ ಹೋಗಲು ಅನುಮತಿ ಇರಲಿಲ್ಲ (ಅವರಿಗೆ ಇಂದಿಗೂ ಇಲ್ಲ).

ಬ್ರಿಟನ್‌ನಲ್ಲಿ ಜರುಗಿದ ಕೃಷಿ ಕ್ರಾಂತಿಯು ವಲಸಿಗರ ಮೂಲ ದೇಶಗಳಲ್ಲಿ ಗ್ರಾಮೀಣ ಜನಸಂಖ್ಯೆಯ ಆದಾಯವನ್ನು ಹೆಚ್ಚಿಸಿತು ಎಂದು ಸೂಚಿಸುವ ಮೂಲಕ ಉನ್ನತ ವೇತನ ಮತ್ತು ಅಲ್ಪ ವೇತನದ ವಲಸೆಗಳ ನಡುವಿನ ವ್ಯತ್ಯಾಸವನ್ನು ಅರ್ಥಶಾಸ್ತ್ರಜ್ಞ ಆರ್ಥರ್ ಲೆವಿಸ್ ವಿವರಿಸುತ್ತಾರೆ. ಆದರೆ, ಅಂತಹ ಕೃಷಿ ಕ್ರಾಂತಿ ಸಂಭವಿಸಿದ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಿಲ್ಲ. ಮೊದಲ ವಲಸೆಗೆ ಸಂಬಂಧಿಸಿ ಹೇಳುವುದಾದರೆ, ಉನ್ನತ ವೇತನಗಳು ಲಭಿಸುವಂತಾದ ನಿಜ ಕಾರಣವೆಂದರೆ, ಸ್ಥಳೀಯ ಬುಡಕಟ್ಟು ಜನರಿಗೆ ಸೇರಿದ ಭೂಮಿಯನ್ನು ಬಲ ಪ್ರಯೋಗದ ಮೂಲಕ ವಲಸಿಗರು ಸ್ವಾಧೀನಪಡಿಸಿಕೊಂಡರು ಮತ್ತು ಉನ್ನತ ಮಟ್ಟದ ಆದಾಯ ಗಳಿಸುವ ರೈತರಾಗಿ ತಮ್ಮನ್ನು ತಾವು ನೆಲೆಗೊಳಿಸಿಕೊಂಡರು. ಈ ವಿದ್ಯಮಾನವು ಅವರು ಬಂದ ಮೂಲ ದೇಶಗಳಲ್ಲಿ ಮತ್ತು ಗಮ್ಯ ದೇಶಗಳಲ್ಲಿ ವೇತನದ ದರವನ್ನು ಹೆಚ್ಚಿಸಿತು.

ಈ ಸಮಶೀತೋಷ್ಣ ದೇಶಗಳಿಂದ ಸಮಶೀತೋಷ್ಣ ದೇಶಗಳಿಗೆ ಜರುಗಿದ ವಲಸೆಯ ಪ್ರಮಾಣವು ಬಹಳ ದೊಡ್ಡದಾಗಿತ್ತು: ಉದಾಹರಣೆಗೆ, ಬ್ರಿಟನ್‌ನಲ್ಲಿ 1820 ಮತ್ತು 1915ರ ನಡುವೆ, ಪ್ರತಿ ವರ್ಷವೂ ಹೆಚ್ಚುತ್ತಿದ್ದ ಜನಸಂಖ್ಯೆಯ ಸುಮಾರು ಪುಟ 14 ಕ್ಕೆ

ದೆಹಲಿಯಲ್ಲಿ ಮಜ್ದೂರ್–ಕಿಸಾನ್ ಸಂಘರ್ಷ ರ್‍ಯಾಲಿ ಒಟ್ಟುಗೂಡಿದ 'ಭಾರತದ ಶ್ರಮಜೀವಿಗಳು'

ಎಚ್.ಆರ್. ನವೀನ್ ಕುಮಾರ್

ದೆಹಲಿಯ ಸುತ್ತಮುತ್ತ ಸಮುದ್ರ ಇಲ್ಲ ಆದರೂ ದೆಹಲಿಯ ರಾಮಲೀಲ ಮೈದಾನ ಕೆಂಪು ಸಮುದ್ರದಂತೆ ಕಾಣುತ್ತಿತ್ತು. ದೇಶದ ವಿವಿಧ ರಾಜ್ಯಗಳಿಂದ ವಾಟಗಟ್ಟಲೆ ಸಾವಿರಾರು ಕಿಲೋಮೀಟರ್ ಗಳು ಪ್ರಯಾಣ ಮಾಡಿ ರಾಜಧಾನಿ ದೆಹಲಿಗೆ ಸಾವಿರಾರು ಸಂಖ್ಯೆಯಲ್ಲಿ ರೈತ ಕಾರ್ಮಿಕ ಕೂಲಿಕಾರರು ಕೈಯಲ್ಲಿ ಕೆಂಬಾವುಟ ಹಿಡಿದು ಬಂದಿದ್ದರು.

ದೇಶದ ರಾಜಧಾನಿಯ ರಸ್ತೆಗಳಲ್ಲಿ ದೇಶದ ಸಂಪತ್ತನ್ನ ಉತ್ಪಾದಿಸುವ ಶ್ರಮ ಜೀವಿಗಳು ಹೆಜ್ಜೆ ಹಾಕಿದರು. ಬಲವಾಗಿ ಕಟ್ಟಿದ್ದ ಮುಷ್ಟಿಯಲ್ಲಿ ತಮ್ಮ ಬದುಕಿನ ಮತ್ತು ದೇಶದ ಇಂದಿನ ಸ್ಥಿತಿಗೆ ಕಾರಣವಾದವರ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದರು. ಈ ದೃಶ್ಯ ದೆಹಲಿಯ ರಾಮ ಲೀಲಾ ಮೈದಾನದ ಸುತ್ತಮುತ್ತ ಸಾಮಾನ್ಯವಾಗಿತ್ತು.

ಕೇಂದ್ರದಲ್ಲಿ ಅಧಿಕಾರವನ್ನ ನಡೆಸುತ್ತಿರುವ ನರೇಂದ್ರ ಮೋದಿ ಸರ್ಕಾರ ಅನುಸರಿಸಿರುವ ಜನವಿರೋಧಿ ನೀತಿಗಳಿಂದಾಗಿ ಜನರು ಅನುಭವಿಸುತ್ತಿರುವ ಸಂಕಷ್ಟಗಳಿಗೆ ಪರಿಹಾರವನ್ನು ಹುಡುಕುವ ಕೆಲಸ ರೈತ ಕಾರ್ಮಿಕರ ಸಂಘರ್ಷ ರ್‍ಯಾಲಿಯಲ್ಲಿ ನಡೆಯಿತು.

ಅನ್ನದಾತ ರೈತನ ಆಧಾಯವನ್ನು ದ್ವಿಗುಣಗೊಳಿಸುತ್ತೇನೆಂದು ಭರವಸೆಕೊಟ್ಟು ಅಧಿಕಾರಕ್ಕೆ ಬಂದು ಬಿಜೆಪಿ ಸರ್ಕಾರವು ಕಳೆದ 9 ವರ್ಷಗಳಲ್ಲಿ ದೇಶದ ರೈತರು ಆದಾಯ ಮತ್ತು ಭೂಮಿಯನ್ನು ಸಂಪೂರ್ಣ ಕಳೆದುಕೊಳ್ಳುವಂತಹ ಕಾರ್ಪೊರೇಟ್ ಪರವಾದ ನೀತಿಗಳನ್ನು ಜಾರಿಗೊಳಿಸುತ್ತಾ ಬಂದಿದ್ದು ಇದರ ವಿರುದ್ಧ ನಿರಂತರವಾಗಿ ದೇಶಾದ್ಯಂತ ಹೋರಾಟಗಳನ್ನು ನಡೆಸುತ್ತಿರುವ ರೈತರು ಅಖಿಲ ಭಾರತ ಕಿಸಾನ್ ಸಭಾ ಎಐಕೆಎಸ್ ನೇತೃತ್ವದಲ್ಲಿ ಅಣಿ ನೆರೆದಿದ್ದರು.

ಕಾರ್ಮಿಕರ ಹಕ್ಕುಗಳನ್ನು ಉಳಿಸಿ ಅವರ ಬೆವರಿಗೆ ತಕ್ಕ ಪ್ರತಿಫಲವನ್ನು ನೀಡಬೇಕಾದ ಪ್ರಭುತ್ವ ಕಾರ್ಮಿಕ ವರ್ಗದ ಶ್ರಮಶಕ್ತಿಯನ್ನು ಅತ್ಯಂತ ಅಗ್ಗವಾಗಿ ಲೂಟಿ ಹೊಡೆದು ಅವರಿಂದ ರಕ್ತ ಬಸಿದು ಲಾಭ ಮಾಡುವ ಮಾಲೀಕರಿಗೆ ಮತ್ತು ಕಂಪನಿಗಳಿಗೆ ಅನುಕೂಲ ಮಾಡಿಕೊಡುವಂತಹ ರೀತಿಯಲ್ಲಿ ಕಾರ್ಮಿಕ ಕಾನೂನುಗಳನ್ನು ಬದಲಾಯಿಸಿದ್ದ ಕೇಂದ್ರ ಸರ್ಕಾರದ ವಿರುದ್ಧ ಸೆಂಟರ್ ಆಫ್ ಟ್ರೇಡ್ ಯೂನಿಯನ್ ಸಿಐಟಿಯು ನೇತೃತ್ವದಲ್ಲಿ ದೇಶದ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕ ವರ್ಗ ಈ ರ್‍ಯಾಲಿಯಲ್ಲಿ ಪಾಲ್ಗೊಂಡಿತ್ತು.

ಕೃಷಿಯ ಆಧಾರ ಸ್ಥಂಬವಾಗಿರುವ ಕೂಲಿಕಾರರು ಒಂದೆಡೆ ಕೂಲಿ ಇಲ್ಲದೆ ಮತ್ತೊಂದೆಡೆ ಅತ್ಯಂತ ಕಡಿಮೆ ಕೂಲಿಗೆ ಜೀತದಾಳುಗಳಂತೆ ದುಡಿಯುವ ಪರಿಸ್ಥಿತಿ ಭಾರತದಲ್ಲಿ ನಿರ್ಮಾಣವಾಗಿದೆ. ಇದರ ವಿರುದ್ಧ ಕೂಲಿಕಾರರ ಬದುಕನ್ನ ಹಸನುಮಾಡುವ ನೀತಿಗಳಿಗಾಗಿ ಆಗ್ರಹಿಸಿ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಎಐಎಡಬ್ಲ್ಯೂಯು ನೇತೃತ್ವದಲ್ಲಿ ಕೂಲಿಕಾರರು ದೊಡ್ಡಸಂಖ್ಯೆಯಲ್ಲಿ ಭಾಗವಹಿಸಿದ್ದರು.

ರೈತ ಕಾರ್ಮಿಕ ಕೂಲಿಕಾರರ ಬೃಹತ್ ಸಂಘರ್ಷ ರ್‍ಯಾಲಿ ದೇಶದ ದುಡಿಯುವ ವರ್ಗಕ್ಕೆ ಒಂದು ಆತ್ಮವಿಶ್ವಾಸವನ್ನ ಮೂಡಿಸುವಲ್ಲಿ ಮತ್ತು ಆಳುವ ವರ್ಗಕ್ಕೆ ಒಂದು ಎಚ್ಚರಿಕೆಯನ್ನು ನೀಡುವಲ್ಲಿ ಯಶಸ್ವಿಯಾಗಿದೆ.

ಏಪ್ರಿಲ್ 5 ರಂದು ನಿಗದಿಯಾಗಿದ್ದ ಈ ಸಂಘರ್ಷ ರ್‍ಯಾಲಿಗೆ ಮೂರು ತಿಂಗಳ ಮೊದಲು ದೆಹಲಿಯಲ್ಲಿ ಜಂಟಿ ಸಮಾವೇಶ ನಡೆದು ರೈತ ಕಾರ್ಮಿಕ ಕೂಲಿಕಾರರ ಪ್ರಶ್ನೆಗಳು ಮತ್ತು ಕೇಂದ್ರ ಸರ್ಕಾರದ ಜನವಿರೋಧಿ ಲೂಟಿಕೋರ ನೀತಿಗಳ ವಿರುದ್ಧ ಸಿಐಟಿಯು,ಎಐಕೆಎಸ್, ಎಐಎಡಬ್ಲ್ಯೂಯು ಸಂಘಟನೆಗಳ ನೇತೃತ್ವದಲ್ಲಿ ದೇಶಾದ್ಯಂತ ಹಳ್ಳಿ ಹಳ್ಳಿಗಳಲ್ಲಿ, ಕಾರ್ಖಾನೆಗಳ ಮಟ್ಟದಲ್ಲಿ ಜನವಸತಿ ಪ್ರದೇಶಗಳಲ್ಲಿ ವ್ಯಾಪಕ ಪ್ರಚಾರಾಂದೋಲನವನ್ನು ನಡೆಸಲಾಗಿದೆ. ಇದೆಲ್ಲದರ ಪ್ರತಿಫಲವೇ ದೊಡ್ಡ ಸಂಖ್ಯೆಯಲ್ಲಿ ರೈತರ ಕಾರ್ಮಿಕರು ದೆಹಲಿಯತ್ತ ನದಿಗಳಾಗಿ ಹರಿದು ಬಂದು ರಾಮಲೀಲ ಮೈದಾನದ ಕೆಂಪು ಸಾಗರಕ್ಕೆ ಸೇರಿದರು.

ಏಪ್ರಿಲ್ 4 ರಂದೇ ರಾಮಲೀಲ ಮೈದಾನ ಸೇರಿದಂತೆ ದೆಹಲಿಯ ವಿವಿಧ ಪ್ರದೇಶಗಳಲ್ಲಿ ಜಮಾವಣೆಗೊಳ್ಳಲು ಪ್ರಾರಂಭಿಸಿದ ರೈತ ಕಾರ್ಮಿಕ ಕೂಲಿಕಾರರು ಏಪ್ರಿಲ್ 5 ವೇದಿಕೆಯ ಮೇಲೆ ಮುಖಂಡರ ಮಾತುಗಳು ನಡೆಯುತ್ತಿರುವಾಗಲೂ ಬರುತ್ತಲೇ ಇದ್ದರು.

ದುಡಿಯುವ ವರ್ಗವಾದ ರೈತ ಕಾರ್ಮಿಕರ ಐಕ್ಯತೆಯನ್ನು ಗಟ್ಟಿಗೊಳಿಸಿ ನಮ್ಮೆದುರು ಬಲಿಷ್ಠವಾಗಿ ಬೆಳೆಯುತ್ತಿರುವ ವರ್ಗ ಶತೃವನ್ನ ಮಣಿಸಲು ಈ ಐಕ್ಯತೆ ಅತ್ಯಂತ ಮಹತ್ತರವಾದದ್ದು. ಈ ರೀತಿಯ ಐಕ್ಯ ಕಾರ್ಯಾಚರಣೆಗಳ ಮೂಲಕ ಮಾತ್ರ ದೇಶದ ಇಂದಿನ ಜನವಿರೋಧಿ ನೀತಿಗಳ ವಿರುದ್ಧ ಪರ್ಯಾಯ ಜನಪರ ನೀತಿಗಳನ್ನು ಜನರ ಮುಂದಿಡಲು ಸಾಧ್ಯ. ಇದಕ್ಕಾಗಿಯೇ ಇದು ರಾಷ್ಟ್ರ ಮಟ್ಟದಲ್ಲಿ ಎರಡನೇ ಬೃಹತ್ ಐಕ್ಯ ಚಳುವಳಿಯಾಗಿದ್ದು ತಳಮಟ್ಟದವರೆಗೆ ಈ ಐಕ್ಯತೆಯನ್ನು ಕೊಂಡೊಯ್ಯಲು ಆಮೂಲಕ ಕಾರ್ಪೊರೇಟ್ ಶಕ್ತಿಗಳಿಂದ ರೈತ ಕಾರ್ಮಿಕರು ಮತ್ತು ದೇಶವನ್ನು ರಕ್ಷಿಸಲು ಮಸ್ದೂರ್ ಕಿಸಾನ್ ಸಂಘರ್ಷ ರ್‍ಯಾಲಿ ಕರೆ ನೀಡಿತು.



ಈ ಬೃಹತ್ ರ್‍ಯಾಲಿಯಲ್ಲಿ ಸಿಐಟಿಯು ಅಖಿಲ ಭಾರತ ಅಧ್ಯಕ್ಷೆ ಡಾ.ಕೆ. ಹೇಮಲತಾ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ತಪನ್ ಸೇನ್, ಅಖಿಲ ಭಾರತ ರೈತ ಸಂಘದ ಅಧ್ಯಕ್ಷರಾದ ಡಾ. ಅಶೋಕ್ ಧವಳೆ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ವಿಜೂ ಕೃಷ್ಣನ್, ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘದ ಅಧ್ಯಕ್ಷ ಎ. ವಿಜಯರಾಘವನ್ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಬಿ. ವೆಂಕಟ್ ಮಾತನಾಡಿದರು. ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಅವರ ಅಧ್ಯಕ್ಷತೆಯಲ್ಲಿ ಜಂಟಿ ಪೂರ್ವಸಿದ್ಧತಾ ಸಮಿತಿಯು ಈ ರ್‍ಯಾಲಿಯನ್ನು ಆಯೋಜಿಸಿತ್ತು. ಪಟ್ನಾಯಕ್ ಮಾತನಾಡುತ್ತ, ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಕಾರರು ಸಮಾಜದ ಮೂರು ಪ್ರಮುಖ ವರ್ಗಗಳು, ಇವರು ಒಟ್ಟುಗೂಡಿರುವುದೇ ಮೋದಿ ಸರ್ಕಾರಕ್ಕೆ, ಅದರ ಧೋರಣೆಗಳಿಗೆ ಆಗಿರುವ ಸೋಲು ಎಂದರು.

ಸಿಐಟಿಯು ಸಂಯೋಜಿತ 12 ವಲಯವಾರು ಒಕ್ಕೂಟಗಳ ಮುಖಂಡರು, ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರ, ಬ್ಯಾಂಕ್, ವಿಮೆ, ಬಿ.ಎಸ್.ಎನ್.ಎಲ್. ಮತ್ತು ಇತರ ವಲಯಗಳ ನೌಕರರ ಸಂಘಟನೆಗಳ ಮುಖಂಡರು ಸಹಾ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು.

2024ರ ಚುನಾವಣೆಯಲ್ಲಿ...

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮುಖಂಡರು, 'ಕೆಂಪು ಸಮುದ್ರವೇ ರಾಷ್ಟ್ರ ರಾಜಧಾನಿಗೆ ಪ್ರವೇಶಿಸಿದಂತೆ ದುಡಿಯುವ ಜನರು ದೆಹಲಿಯಲ್ಲಿ ಸೇರಿದ್ದಾರೆ. ಮೋದಿ ಸರ್ಕಾರವು ಅನುಸರಿಸುತ್ತಿರುವ ಕಾರ್ಪೊರೇಟ್ ಪರ ನೀತಿಗಳಿಂದಾಗಿ ಭಾರತದ ದುಡಿಯುವ ಜನರಲ್ಲಿ ಹೆಚ್ಚುತ್ತಿರುವ ಆಕ್ರೋಶಗಳನ್ನು ಈ ಬೃಹತ್ ಜನಸ್ತೋಮ ವ್ಯಕ್ತಪಡಿಸಿದೆ. ಭಾರತದ ಸಂಪತ್ತನ್ನು ಮತ್ತು ದುಡಿಯುವ ಜನರ ಬೆವರಿನಿಂದ ಹುಟ್ಟುಹಾಕಿದ ಸಾರ್ವಜನಿಕ ವಲಯದ ಕಂಪನಿಗಳನ್ನು ಮೋದಿ ಸರ್ಕಾರ ದೊಡ್ಡ ಕಾರ್ಪೊರೇಟ್ ದೈತ್ಯರಿಗೆ ಹಸ್ತಾಂತರಿಸುತ್ತಿದೆ. ದುಡಿಯುವ ಜನರ ಹಕ್ಕುಗಳನ್ನು ಕಸಿದುಕೊಳ್ಳುವ ಕಾರ್ಮಿಕ ವಿರೋಧಿ ಕಾನೂನುಗಳನ್ನು ಜಾರಿಗೆ ತಂದಿದೆ. ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ರೈತರಿಗೆ ನೀಡಿದ ಭರವಸೆಗಳನ್ನು ಈಡೇರಿಸಿಲ್ಲ. 100 ದಿನದ ನರೇಗಾ ಯೋಜನೆಗೆ ಕೇಂದ್ರ ಸರ್ಕಾರ ಅಡ್ಡಿಪಡಿಸುತ್ತಿದೆ. ಹಾಗಾಗಿ 2024ರ ಲೋಕಸಭಾ ಚುನಾವಣೆಯಲ್ಲಿ ಮೋದಿ ಸರಕಾರವನ್ನು ಸೋಲಿಸುತ್ತೇವೆ ಎಂದು ಪಣತೊಟ್ಟು, ಭಾರತದ ಜನರಿಗೆ ಅಗತ್ಯವಿರುವ ಉದ್ಯೋಗ, ಶಿಕ್ಷಣ, ಆರೋಗ್ಯ, ಕನಿಷ್ಟ ವೇತನ, ಸಾಮಾಜಿಕ ಭದ್ರತೆ ಮತ್ತು ಸಾರ್ವಜನಿಕ ವಲಯವನ್ನು ರಕ್ಷಿಸಲು, ಕಾರ್ಪೊರೇಟ್ ಮತ್ತು ಕೋಮುವಾದಿ ರಾಜಕೀಯವನ್ನು ಸೋಲಿಸುವುದು ಸೇರಿದಂತೆ ಜನರ ಕಲ್ಯಾಣ ನೀತಿಗಳನ್ನು ಉತ್ತೇಜಿಸಲು ಪ್ರತಿಜ್ಞೆ ಮಾಡಿದರು.

ಒಂದು ವರ್ಷ ಕಾಲ ನಡೆದ ರೈತರ ಹೋರಾಟದ ಯಶಸ್ಸಿನಿಂದ ಮತ್ತು ಜನವಿರೋಧಿ ನೀತಿಗಳ ವಿರುದ್ಧ ನಡೆದ ಇತ್ತೀಚಿನ ಅನೇಕ ಹೋರಾಟಗಳ ವಿಜಯಗಳಿಂದ ಉತ್ಸಾಹ ತುಂಬಿಕೊಂಡಿದ್ದ ಜನರು ದೇಶದ ಮೂಲೆ ಮೂಲೆಗಳಿಂದ ದೆಹಲಿಗೆ ಬಂದಿದ್ದರು. ಕರ್ನಾಟಕ, ಹರಿಯಾಣ, ಪಂಜಾಬ್, ರಾಜಸ್ಥಾನ, ಉತ್ತರ ಪ್ರದೇಶ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಕೇರಳ, ತಮಿಳುನಾಡು, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಒಡಿಶಾ, ಅಸ್ಸಾಂ, ತ್ರಿಪುರ, ಮಣಿಪುರ, ಛತ್ತೀಸ್‌ಗಢ, ಗೋವಾ, ಗುಜರಾತ್ ಸೇರಿದಂತೆ ಬೇರೆ ರಾಜ್ಯಗಳಿಂದ ಸಾವಿರಾರು ಕೈಗಾರಿಕಾ ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರು ಆಗಮಿಸಿ ಭಾಗವಹಿಸಿದ್ದರು.

ಕರ್ನಾಟಕದಿಂದ..

ದೆಹಲಿಯಲ್ಲಿ ನಡೆದ ಮಜ್ದೂರ್–ಕಿಸಾನ್ ಸಂಘರ್ಷ ರ್‍ಯಾಲಿಯಲ್ಲಿ ಕರ್ನಾಟಕ ದ ವಿವಿಧ ಜಿಲ್ಲೆಗಳಿಂದ ಅಂದಾಜು ಒಂದು ಸಾವಿರದಷ್ಟು ಶ್ರಮಿಕರು ಭಾಗಿಯಾಗಿದ್ದರು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಬಿಸಿಯೂಟ ಕಾರ್ಮಿಕರ ಸಂಘದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತಾ, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಯಶವಂತ. ಜಂಟಿ ಕಾರ್ಯದರ್ಶಿ ಎಚ್.ಆರ್.ನವೀನ್, ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಪುಟ್ಟಮಾದು ಮತ್ತು ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರೆ ಮುಂತಾದವರು ಇದರಲ್ಲಿ ಭಾಗಿಯಾಗಿದ್ದರು.

ನಿರುದ್ಯೋಗವನ್ನು ತರುವ ಬಂಡವಾಳಶಾಹಿಯೇ... ಪುಟ 13 ರಿಂದ

ಅರ್ಧದಷ್ಟು ಜನರು ವಲಸೆ ಹೋದರು ಎಂದು ಅಂದಾಜಿಸಲಾಗಿದೆ. ಗಾತ್ರದ ದೃಷ್ಟಿಯಲ್ಲಿ ಇದು, ಸ್ವಾತಂತ್ರ್ಯಾ ನಂತರದ ಅವಧಿಯಲ್ಲಿ ಭಾರತದಿಂದ ವಲಸೆ ಹೋದ ಸರಿಸುಮಾರು 500 ಮಿಲಿಯನ್ ಜನರಿಗೆ ಹೋಲುತ್ತದೆ. ಇಷ್ಟು ಅಗಾಧ ಪ್ರಮಾಣದ ವಲಸೆಯ ಸಾಧ್ಯತೆಯು ಇಂದು ಮೂರನೇ ಜಗತ್ತಿನ ವ್ಯಕ್ತಿಗಳಿಗೆ ಲಭ್ಯವಿಲ್ಲ. ಆದರೆ ಮುಂದುವರೆದ ಬಮಡವಾಳಶಾಹಿ (ಮೆಟ್ರೊಪಾಲಿಟನ್) ದೇಶಗಳ ಜನರಿಗೆ ಲಭ್ಯವಿದ್ದ ಈ ಸಾಧ್ಯತೆಯೇ ಹತ್ತೊಂಬತ್ತನೇ ಶತಮಾನದಲ್ಲಿ ಯುರೋಪಿಯನ್ ಕಾರ್ಮಿಕರ ಭಾಗ್ಯದ ಬಾಗಿಲು ತೆರೆದ ಕಾರಣವಾಗಿತ್ತು. ಕಾರ್ಮಿಕರಿಗೆ ಒದಗಿ ಬಂದ ಇಂತಹ ಒಂದು ಅದೃಷ್ಟದ ತಿರುವನ್ನು ಬಂಡವಾಳಶಾಹಿಯ ಸಹಜ ಪ್ರವೃತ್ತಿಗಳು ವಿವರಿಸುವುದಿಲ್ಲ. ಆದರೆ, ಒಂದು ಬೃಹತ್ ಸಂಖ್ಯೆಯ ಜನರು ವಿದೇಶಕ್ಕೆ ವಲಸೆ ಹೋಗಬಹುದಾದ ಮತ್ತು ಮೂಲ ನಿವಾಸಿಗಳ ಭೂಮಿಯನ್ನು ವಶಪಡಿಸಿಕೊಳ್ಳುವ ಮೂಲಕ ತಮ್ಮನ್ನು ತಾವು ಅನುಕೂಲಸ್ಥ ರೈತರಾಗಿ ನೆಲೆಗೊಳಿಸಿಕೊಳ್ಳಬಹುದು ಎಂಬ ಅಂಶವು ಈ ತಿರುವನ್ನು ವಿವರಿಸುತ್ತದೆ. ಮೂಲ ನಿವಾಸಿಗಳಿಂದ ಭೂಮಿಯನ್ನು ಕಸಿದುಕೊಳ್ಳುವ ಸಾಧ್ಯತೆಯು ಸಾಮ್ರಾಜ್ಯಶಾಹಿ ವಿದ್ಯಮಾನದಿಂದಾಗಿಯೇ ಉದ್ಭವಿಸಿತು.

ನಿರುದ್ಯೋಗದ ರಫ್ತಿಗೆ ಅವಕಾಶ

ಮೆಟ್ರೋಪಾಲಿಟನ್ ಕಾರ್ಮಿಕರ ಭಾಗ್ಯದ ಬಾಗಿಲು ತೆರೆದ ಈ ಪ್ರಕ್ರಿಯೆಗೆ ಸಾಮ್ರಾಜ್ಯಶಾಹಿಯು ಇನ್ನೊಂದು ರೀತಿಯ ಸಹಾಯವನ್ನೂ ಮಾಡಿತು. ಬಂಡವಾಳಶಾಹಿ ವ್ಯವಸ್ಥೆಯು ಬೇಡಿಕೆ–ನಿರ್ಬಂಧಿತವಾಗಿರುವ ಕಾರಣದಿಂದ ಯಂತ್ರೋಪಕರಣಗಳ ಅಳವಡಿಕೆಯಿಂದ ಕೆಲಸ ಕಳೆದುಕೊಂಡ ಕಾರ್ಮಿಕರನ್ನು ಪುನಃ ನೇಮಕ ಮಾಡಿಕೊಳ್ಳುವುದನ್ನು ತಡೆಯುತ್ತದೆ ಎಂಬುದನ್ನು ಈ ಹಿಂದೆಯೇ ಉಲ್ಲೇಖಿಸಲಾಗಿದೆ. ಆದರೆ, ವಸಾಹತುಗಳು ಮತ್ತು ಅರೆ–ವಸಾಹತುಗಳಲ್ಲಿನ ಕುಶಲಕರ್ಮಿ ಉತ್ಪಾದಕರಿಗೆ ನಷ್ಟವನ್ನುಂಟುಮಾಡಿ ಯಂತ್ರ–ನಿರ್ಮಿತ ಸರಕುಗಳನ್ನು ಮಾರಾಟ ಮಾಡುವ ಮೂಲಕ ಬೇಡಿಕೆಯ ಮೇಲಿನ ನಿರ್ಬಂಧವನ್ನು ಮುರಿಯಬಹುದು. ಇದು ಚರಿತ್ರೆಯಲ್ಲಿ ದಾಖಲಾಗಿರುವ ಸಂಗತಿಯೂ ಹೌದು. ಈ ಪ್ರಕ್ರಿಯೆಯ ಪರಿಣಾಮವಾಗಿ ಮೆಟ್ರೋಪಾಲಿಟನ್ ದೇಶಗಳಲ್ಲಿ ನಿರುದ್ಯೋಗದ ಮಟ್ಟದಲ್ಲಿ ಇಳಿಕೆಯಾಗುತ್ತದೆ. ವಾಸ್ತವವಾಗಿ ಈ ಪ್ರಕ್ರಿಯೆಯು ಮೆಟ್ರೋಪಾಲಿಟನ್ ದೇಶಗಳು ನಿರುದ್ಯೋಗವನ್ನು ವಸಾಹತುಗಳಿಗೆ ಮತ್ತು ಅರೆ–ವಸಾಹತುಗಳಿಗೆ ರಫ್ತು ಮಾಡಿದಂತಾಗುತ್ತದೆ. ಈ ವಸಾಹತುಗಳು ಮತ್ತು ಅರೆ–ವಸಾಹತುಗಳು ಮೆಟ್ರೋಪಾಲಿಟನ್ ದೇಶಗಳ ಆಳ್ವಿಕೆಗೆ ಒಳಪಟ್ಟಿರುವುದರಿಂದ ಅಂತಹ ಅಪ–ಕೈಗಾರಿಕೀಕರಣದ ಪರಿಣಾಮ ಹೊಂದಿದ ಆಮದುಗಳಿಂದ ತಮ್ಮ ಅರ್ಥವ್ಯವಸ್ಥೆಯನ್ನು ರಕ್ಷಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ.

ಈ ಎಲ್ಲ ಅಂಶಗಳು, ಬಂಡವಾಳಶಾಹಿಯೇ ತನ್ನ ಆರಂಭದ ಹಂತಗಳಲ್ಲಿ ಮೆಟ್ರೋಪಾಲಿಟನ್ ದೇಶಗಳ ದುಡಿಯುವ ಜನರ ಮೇಲೆ ಉಂಟುಮಾಡಿದ ಹಾನಿಯನ್ನು ಸರಿಪಡಿಸುತ್ತದೆ ಎಂಬ ಒಂದು ತಪ್ಪು ಕಲ್ಪನೆಗೆ ವ್ಯತಿರಿಕ್ತವಾಗಿ, ಇದು ಸಾಮ್ರಾಜ್ಯಶಾಹಿ ವಿದ್ಯಮಾನವೇ ಹೌದು ಎಂಬುದನ್ನು ಹೇಳುತ್ತವೆ. ವಿಶ್ವಾದ್ಯಂತ ಭೂ ಕಬಳಿಕೆಯನ್ನು ಮತ್ತು ವಸಾಹತುಗಳು ಮತ್ತು ಅರೆ–ವಸಾಹತುಗಳಿಗೆ ನಿರುದ್ಯೋಗದ ರಫ್ತು ಈ ಎರಡನ್ನೂ ಖಾತ್ರಿಪಡಿಸುವ ಈ ವಿದ್ಯಮಾನವು ಮೆಟ್ರೋಪಾಲಿಟನ್ ದೇಶಗಳ ದುಡಿಯುವ ಜನರ ಅದೃಷ್ಟವನ್ನು ಖುಲಾಯಿಸಿತು, ನಿಜ. ಆದರೆ, ತಮ್ಮ ಅದೃಷ್ಟವನ್ನು ಬದಲಿಸಿಕೊಳ್ಳುವಲ್ಲಿ ಮೆಟ್ರೋಪಾಲಿಟನ್ ದೇಶಗಳ ದುಡಿಯುವ ಜನರು ಸಾಮ್ರಾಜ್ಯಶಾಹಿ ಯೋಜನೆಯಲ್ಲಿ ಕೈ ಜೋಡಿಸಿದ್ದರು ಎಂಬುದು ಈ ಮಾತಿನ ಅರ್ಥವಲ್ಲ. ಬಂಡವಾಳಶಾಹಿ ವ್ಯವಸ್ಥೆಯು ಕಾರ್ಯನಿರ್ವಹಿಸುವ ವಿಧಾನ ಇರುವುದೇ ಹಾಗೆ.

ಫ್ರಾನ್ಸ್: ಪೆಂಶನ್ ಬದಲಾವಣೆಗಳ ರದ್ದಿಗೆ ಪಟ್ಟು ಹಿಡಿದಿರುವ ಕಾರ್ಮಿಕರು

ಫ್ರಾನ್ಸ್ ನಲ್ಲಿ ಅಧ್ಯಕ್ಷ ಮ್ಯಾಕ್ರಾನ್ ಜಿದ್ದಿನಿಂದ ತರಲು ಹೊರಟಿರುವ ಪೆಂಶನ್ ಬದಲಾವಣೆಗಳನ್ನು ರದ್ದು ಮಾಡಬೇಕೆಂದು ಕಾರ್ಮಿಕರು ಪಟ್ಟು ಹಿಡಿದಿದ್ದಾರೆ. ಏಪ್ರಿಲ್ 6 ರಂದು ನಡೆದ ಪ್ರಮುಖ ದೇಶವ್ಯಾಪಿ ಪ್ರತಿಭಟನೆಯಲ್ಲಿ 20 ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಿದರು. ಹಿಂದಿನ ದಿನ ಟ್ರೇಡ್ ಯೂನಿಯನ್ ನಾಯಕರು ಮತ್ತು ಪ್ರಧಾನಿ ಬೋರ್ನೆ ನಡುವೆ ಮಾತುಕತೆಗಳು ವಿಫಲವಾದ ಮೇಲೆ ಈ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ದೇಶವ್ಯಾಪಿ ಪ್ರತಿಭಟನೆಯನ್ನು ಹತ್ತಿಕ್ಕಲು ಸರಕಾರ ಪೋಲಿಸ್ ದಮನವನ್ನು ಹರಿಯ ಬಿಟ್ಟಿತು. ದೇಶವ್ಯಾಪಿ 111 ಜನರನ್ನು ಬಂಧಿಸಲಾಯಿತು.

ಪ್ರತಿಭಟನೆಯ ನಂತರ ಸಿಜಿಟಿ (ಪ್ರಮುಖ ಫ್ರೆಂಚ್ ಕೇಂದ್ರೀಯ ಟ್ರೇಡ್ ಯೂನಿಯನ್) ಪೆಂಶನ್ ಬದಲಾವಣೆಗಳನ್ನು ಸಾರಾಸಗಟಾಗಿ ಹಿಂತೆಗೆಯಬೇಕು. ಅಷ್ಟರವರೆಗೆ ಹೋರಾಟ ಮುಂದುವರೆಯುತ್ತದೆ. ಎಪ್ರಿಲ್ 13ರಂದು ಇನ್ನೊಂದು ಸಾರ್ವತ್ರಿಕ ಮುಷ್ಕರ ಮತ್ತು ದೇಶವ್ಯಾಪಿ ಪ್ರತಿಭಟನೆಗೆ ಕರೆ ಕೊಟ್ಟಿದ್ದಾರೆ. ಏಪ್ರಿಲ್ 13ರಂದು ಸಭೆ ಸೇರಿ ಮ್ಯಾಕ್ರಾನ್ ಸರಕಾರ ತಂದಿರುವ ಪೆಂಶನ್ ಬದಲಾವಣೆಗಳು ಸಂವಿಧಾನ–ಬದ್ಧವಾಗಿವೆಯೇ ಎಂದು ಸಾಂವಿಧಾನಿಕ ಕಮಿಶನ್ ಪರಿಶೀಲಿಸಲಿದೆ. ಅದು ದೇಶದ ನಾಗರಿಕರ, ಕಾರ್ಮಿಕರ ಕೋಪ, ಆಕ್ರೋಶಗಳನ್ನು ಗಣನೆಗೆ ತೆಗೆದುಕೊಳ್ಳಲು ಕರೆ ನೀಡಿದೆ. ಈ ಕರೆ ಮತ್ತು ಪ್ರತಿಭಟನೆಗೆ ಓಗಕಇಖ ಎಂದು ಕರೆಯಲಾಗುವ ಎಡ ರಂಗ ಸಹ ಪೂರ್ಣ ಬೆಂಬಲ ನೀಡಿದೆ.



ಪೆಂಶನ್ ಬದಲಾವಣೆಗಳ ವಿರುದ್ಧ ಹೋರಾಟದ ಸಾಗರ

ನಿವೃತ್ತಿ ವಯಸ್ಸನ್ನು ಮತ್ತು ಪೂರ್ಣ ಪೆಂಶನ್ ಪಡೆಯಲು ಮಾಡಬೇಕಾಗಿರುವ ಕೆಲಸದ ವರ್ಷಗಳನ್ನು ಮ್ಯಾಕ್ರಾನ್ ಪ್ರಸ್ತಾವಿಸಿರುವ ಪೆಂಶನ್ ಬದಲಾವಣೆಗಳು ಹೆಚ್ಚಿಸಿದ್ದು ಇದು ಕಾರ್ಮಿಕರ ಜನತೆಯ ಆಕ್ರೋಶಕ್ಕೆ ಕಾರಣವಾಗಿದೆ. ತೀವ್ರ ಪ್ರತಿಭಟನೆಗಳಿಗೆ ಕಾರಣವಾಗಿದೆ. ಎಫ್ರಿಲ್ 6 ರಂದು ನಡೆದ ಪ್ರತಿಭಟನೆಯು ಜನವರಿ 19ರ ನಂತರ ನಡೆಯುತ್ತಿರುವ ಪ್ರಮುಖ ದೇಶವ್ಯಾಪಿ ಹೋರಾಟದಲ್ಲಿ 11ನೆಯದು. ಆದರೂ ಈ ಪ್ರತಿಭಟನೆಗಳನ್ನು ನಿರ್ಲಕ್ಷಿಸುವ ದಮನಿಸುವ ಪ್ರಯತ್ನವನ್ನು ಮ್ಯಾಕ್ರಾನ್ ಮಾಡಿದ್ದು ಪೆಂಶನ್ ಬದಲಾವಣೆಗಳನ್ನು ತಂದೇ ತರಬೇಕೆಂಬ ಜಿದ್ದಿಗೆ ಬಿದ್ದಿದ್ದಾರೆ.

ಆದರೆ ದೇಶವ್ಯಾಪಿ ಪ್ರತಿಭಟನೆಯಿಂದಾಗಿ ಪಾರ್ಲಿಮೆಂಟಿನಲ್ಲಿ ಆಳುವ ರಂಗದ ಹಲವು ಸದಸ್ಯರು ಸಹ ಈ ಕಾನೂನನ್ನು ವಿರೋಧಿಸಿ ಅದು ಬಿದ್ದು ಹೋಗಬಹುದೆಂಬ ಆತಂಕದಿಂದ ಮ್ಯಾಕ್ರಾನ್ ಪಾರ್ಲಿಮೆಂಟನ್ನು ಬೈ ಪಾಸ್ ಮಾಡಿದ್ದಾರೆ. ಇದಕ್ಕಾಗಿ ಸಂವಿಧಾನದ ಕಲಮು 49.3 ನ್ನು ಬಳಸಿ ಕಾನೂನನ್ನು ಪಾರ್ಲಿಮೆಂಟಿನ ಸಮ್ಮತಿಯ ಅಗತ್ಯವಿಲ್ಲದೆ ಪಾಸು ಮಾಡಿಸಿಕೊಂಡಿದ್ದಾರೆ. ಅದು ಸಂವಿಧಾನ ಬದ್ಧವೇ ಎಂದು ಎಂದು ಸಾಂವಿಧಾನಿಕ ಕಮಿಶನ್ ನಿರ್ಧರಿಸಲಿದೆ. ಅದಕ್ಕೆ ಜನರ ಕಾರ್ಮಿಕರ ಅಭಿಪ್ರಾಯ ತಿಳಿಸಲು ಎಪ್ರಿಲ್ 13ರ ಪ್ರತಿಭಟನೆಗೆ ಕರೆ ಕೊಡಲಾಗಿದೆ. ಅದೂ ಸಂವಿಧಾನ–ಬದ್ಧವೆಂದು ತೀರ್ಪು ಕೊಟ್ಟರೆ ಬಹುಶಃ ಪ್ರತಿಭಟನೆ ತೀವ್ರ ಸ್ವರೂಪ ತೆಗೆದುಕೊಳ್ಳಬಹುದು. ಈಗಿನ ಫ್ರೆಂಚ್ ರಾಜಕೀಯ ವ್ಯವಸ್ಥೆಯ ಮೇಲೆ ಜನತೆಯ ವಿಶ್ವಾಸ ಪೂರ್ತಿಯಾಗಿ ಬಿದ್ದು ಹೋಗಬಹುದು. ಇದು ತೀವ್ರ ದೇಶವ್ಯಾಪಿ ರಾಜಕೀಯ ಬಿಕ್ಕಟ್ಟಿಗೆ ಮತ್ತು ಬದಲಾವಣೆಗೆ ಕಾರಣವಾಗಬಹುದು.

ಇರಾನ್–ಸೌದಿ ರಾಜಿ ಸಂಧಾನದತ್ತ

ಜಗದ ಸುತ್ತ

ವಸಂತ್‌ರಾಜ್ ಎನ್.ಕೆ.


ಸೌದಿ ಇರಾನ್ ವಿದೇಶ ಮಂತ್ರಿಗಳು ಬೆಜಿಂಗ್ ನಲ್ಲಿ

ಪಶ್ಚಿಮ ಏಶ್ಯಾದ ಪ್ರಮುಖ ದೇಶಗಳೂ ಹಲವು ವರ್ಷಗಳಿಂದ ಪರಸ್ಪರ ವೈರತ್ವವನ್ನೂ ಹೊಂದಿದ್ದ ಇರಾನ್ ಮತ್ತು ಸೌದಿ ಅರೇಬಿಯಾ ರಾಜಿ ಸಂಧಾನ ಆರಂಭಿಸಿವೆ. ಬೆಜಿಂಗ್ ನಲ್ಲಿ ಚೀನಾದ ಮಧ್ಯಸ್ಥಿಕೆಯಲ್ಲಿ ಈ ಪ್ರಕ್ರಿಯೆ ಆರಂಭವಾಗಿದೆ. ಇರಾನ್ ವಿದೇಶ ಮಂತ್ರಿ ಹೊಸೈನ್ ಅಮೀರಾಬ್ದುಲ್ಲಾಹಿಯನ್ ಎರಡೂ ದೇಶಗಳು ಪರಸ್ಪರ ರಾಜಧಾನಿ ಮತ್ತು ಎರಡು ನಗರಗಳಲ್ಲಿ ರಾಯಭಾರ ಕಚೇರಿ ಆರಂಭಿಸುವ ಘೋಷಣೆಯನ್ನು ಟ್ವೀಟ್ ಮೂಲಕ ಮಾಡಿದ್ದಾರೆ. ಅವರು ಸೌದಿ ವಿದೇಶ ಮಂತ್ರಿ ಯುವರಾಜ ಫೈಸಲ್ ಬಿನ್ ಫರ್ಹಾನ್ ಅಲ್ ಸೌದ್ ಅವರ ಜತೆ ಮಾತುಕತೆಯ ನಂತರ ಈ ಘೋಷಣೆ ಮಾಡಿದ್ದಾರೆ. ಎರಡು ದೇಶಗಳ ನಡುವೆ ವಿಮಾನಯಾನ, ಅಧಿಕೃತ ಮತ್ತು ಖಾಸಗಿ ಪ್ರವಾಸ, ವೀಸಾ ವಿನಿಮಯ ಗಳನ್ನು ಶೀಘ್ರ್ನೇ ಪುನಃ ಸ್ಥಾಪಿಸಬೇಕು ಎಂದೂ ಒಪ್ಪಲಾಗಿದೆ. ಪರಸ್ಪರ ಆರ್ಥಿಕ ಭದ್ರತೆ ಹೆಚ್ಚಿಸುವ ಕ್ರಮಗಳ ಕುರಿತು ಸಹ ಮಾತುಕತೆ ಆಗಿದೆಯೆನ್ನಲಾಗಿದೆ.

ಕಳೆದ ಏಳು ವರ್ಷಗಳಿಂದ ಎರಡೂ ದೇಶಗಳ ನಡುವೆ ಬಿಗುವು, ಪ್ರತ್ಯಕ್ಷ ಪರೋಕ್ಷ ಸಂಘರ್ಷ ಏರ್ಪಟ್ಟಿದ್ದು, ಈ ರಾಜಿ ಸಂಧಾನ ಅವನ್ನು ಕೊನೆಗೊಳಿಸುವತ್ತ ಸಾಗುತ್ತಿದೆ. ಎರಡೂ ದೇಶದ ನಡುವೆ 2016ರಿಂದ ಯಾವುದೇ ಅಧಿಕೃತ ಸಂಪರ್ಕವಿರಲಿಲ್ಲ. 2016ರಲ್ಲಿ ನಡೆದ ಒಂದು ಘಟನೆಯಿಂದ ಸಂಬಂಧ ಬಿಗಡಾಯಿಸಿತ್ತು. ಸೌದಿ ಅರೇಬಿಯಾ ಶಿಯಾ ಧಾರ್ಮಿಕ ನಾಯಕ ಮತ್ತು 46 ಅವರ ಸಹಚರರಿಗೆ ಮರಣ ದಂಡನೆ ವಿಧಿಸಿತ್ತು. ಅದಕ್ಕೆ ಪ್ರತಿಯಾಗಿ ಇರಾನಿ ಪ್ರತಿಭಟನಾಕಾರರು ಸೌದಿ ಕಚೇರಿಗಳಿಗೆ ದಾಳಿ ಮಾಡಿದ್ದರು.

ಈ ಒಪ್ಪಂದದಿಂದ ಪಶ್ಚಿಮ ಏಶ್ಯಅದಲ್ಲಿ ಹಲವು ಸಂಘರ್ಷಗಳು ಕೊನೆಗೊಳ್ಳುವ, ಹೊಸ ಸಂಘರ್ಷಗಳು ಆರಂಭವಾಗದಿರುವ ಸಾಧ್ಯಭತೆ ಹೆಚ್ಚಿದೆ. ವಿಶೇಷವಾಗಿ ಯೆಮೆನ್ ನಲ್ಲಿ ನಡೆಯುತ್ತಿರುವ ಮತ್ತು ಇರಾನ್ ಸೌದಿ ಅರೇಬಿಯಾ ಗಳು ಪರೋಕ್ಷವಾಗಿ ಆಳವಾಗಿ ತೊಡಗಿಸಿಕೊಂಡಿರುವ ದೀರ್ಘ ಯುದ್ಧ ಕೊನೆಗೊಳ್ಳುವ ಸಾಧ್ಯಷತೆ ಹೆಚ್ಚಿದೆ.

ಚೀನಾದ ಸಕ್ರಿಯ ಮಧ್ಯಿಸ್ತಿಕೆಯಿಂದಾಗಿ ಈ ರಾಜಿ ಸಂಧಾನ ಸಾಧ್ಯರವಾಯಿತು ಎಂಬುದು ಗಮನಾರ್ಹ. ಯು.ಎಸ್ ನ ನಿಕಟ ಮಿತ್ರವಾಗಿದ್ದ ಸೌದಿ ಅರೇಬಿಯಾ ಅದರಿಂದ ದೂರ ಸರಿಯುತ್ತಿರುವುದು ಮತ್ತು ಪಶ್ಚಿಮ ಏಶ್ಯಲ್ಲಿ ಯು.ಎಸ್ ನ ಪ್ರಭಾವ ಕುಗ್ಗುತ್ತಿರುವುದರ ಸಂಕೇತ ಕೂಡಾ ಈ ಬೆಳವಣಿಗೆ. ಚೀನಾ ಇತ್ತೀಚೆಗೆ ಸೌದಿ ಅರೇಬಿಯಾ ದ ಜತೆ ದೀರ್ಘ ಆರ್ಥಿಕ ಸಹಕಾರದ ಒಪ್ಪಂದವೊಂದಕ್ಕೆ ಸಹಿ ಹಾಕಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಚೀನಾ ಪಶ್ಚಿಮ ಏಶ್ಯಾದಲ್ಲಿ ಯಾವುದೇ ಮಿಲಿಟರಿ ಅಸ್ತಿತ್ವವಿಲ್ಲದೆ ಯಾವುದೇ ಆರ್ಥಿಕ/ಮಿಲಿಟರಿ ಒತ್ತಡವಿಲ್ಲದೆ ಈ ರಾಜಿ ಸಂಧಾನ ಮಾಡಿದೆ ಎಂಬುದು ಗಮನಾರ್ಹ. ಒಂದು ಪ್ರದೇಶದಲ್ಲಿ ತನ್ನ ಮಿಲಿಟರಿ ಅಸ್ತಿತ್ವದಿಂದ ಬೆದರಿಕೆ/ಒತ್ತಡಗಳ ಮೂಲಕ ಎರಡು ದೇಶಗಳ ನಡುವೆ ಜಗಳ ಹಚ್ಚುವ ಅಥವಾ ತಮ್ಮದೇ ದೇಶ/ಪ್ರದೇಶಗಳ ಹಿತಾಸಕ್ತಿಗಳಿಗೆ ವಿರುದ್ಧವಾಗಿ ವರ್ತಿಸುವಂತೆ ಮಾಡುವ ಯು.ಎಸ್ ನ ಅವತಾರಗಳನ್ನು ಕಂಡಿರುವ ಪಶ್ಚಿಮ ಏಶ್ಯಾದ ದೇಶಗಳಿಗೆ ಚೀನಾದ ಧೋರಣೆ ಆಕರ್ಷಕವಾಗಿ ಕಂಡಿರಬೇಕು.

ಸೌದಿ ಅರೇಬಿಯಾ ಮತ್ತು ಪಶ್ಚಿಮ ಏಶ್ಯಾದ ಕೊಲ್ಲಿ ದೇಶಗಳು ಯು.ಎಸ್ ನ ಪ್ರಭಾವಲಯದಿಂದ ದೂರ ಸರಿಯುತ್ತಿರುವುದು ಇನ್ನೊಂದು ಇತ್ತೀಚಿನ ಪ್ರಕರಣದಲ್ಲೂ ಕಂಡು ಬಂದಿದೆ. ಸೌದಿ ಅರೇಬಿಯ ಸೇರಿದಂತೆ 8 ಪ್ರಮುಖ ಔಕಇಅ (ತೈಲ ಉತ್ಪಾದಕ ರಫ್ತು ಮಾಡುವ) ದೇಶಗಳು ಯು.ಎಸ್ ಆಣತಿಯನ್ನು ಆಶಯಗಳನ್ನು ಧಿಕ್ಕರಿಸಿ ತಮ್ಮ ಉತ್ಪಾದನೆಯನ್ನು ಮೇ ನಿಂದ ವರ್ಷದ ಕೊನೆಯ ವರೆಗೆ ಪ್ರತಿ ದಿನ 10 ಲಕ್ಷ ಬ್ಯಾರೆಲ್ ದಷ್ಟು ಉತ್ಪಾದನೆಯನ್ನು ಕಡಿತ ಮಾಡುವ ನಿರ್ಣಯ ತೆಗೆದಕೊಂಡಿವೆ. ರಶ್ಯ ಈ ಮೊದಲೇ ಅದೇ ಅವಧಿಯಲ್ಲಿ 5 ಲಕ್ಷ ಬ್ಯಾರೆಲ್ ಪ್ರತಿ ದಿನ ಕಡಿತ ಮಾಡಲು ನಿರ್ಧರಿಸಿತ್ತು. ಅಂದರೆ ರಶ್ಯಾದ ನಿರ್ಣಯವನ್ನು ಬೆಂಬಲಿಸಿವೆ. ಈ ನಿರ್ಣಯದಲ್ಲಿ ಸೌದಿ ಅರೇಬಿಯ ಅಲ್ಲದೆ ಯು.ಎ.ಇ, ಕುವೈತ್, ಇರಾಕ್, ಅಲ್ಜೀರಿಯಾ, ಒಮನ್ ಸಹ ಭಾಗಿಯಾಗಿವೆ ಎಂದು ಗಮನಿಸಬೇಕು.

ಇದು ತೈಲ ಬೆಲೆಯನ್ನು ತಗ್ಗಿಸಿ ರಶ್ಯಾದ ಆರ್ಥಿಕಕ್ಕೆ ಹೊಡೆತ ಕೊಡುವ ಯು.ಎಸ್ ತಂತ್ರಕ್ಕೆ ಪ್ರತಿ ತಂತ್ರವೆಂದು ಗಮನಿಸಬೇಕು. ಒಂದು ಕಡೆ ಯು.ಎಸ್./ಯುರೋ ಕೂಟ ರಶ್ಯಾದ ಮೇಲೆ ವಿಧಿಸಿದ ದಿಗ್ಬಂಧನಗಳು, ಇನ್ನೊಂದು ಕಡೆ ರಶ್ಯಾದ ತೈಲದ ಮೇಲೆ ಬೆಲೆ ಮಿತಿ ಹೇರಿದ ಜಿ7 ಕ್ರಮಗಳು ತೈಲ ಬೇಡಿಕೆ–ಪೂರೈಕೆಯ ವ್ಯವಸ್ಥೆಯನ್ನು ಏರುಪೇರು ಮಾಢಿದ್ದವು. ಯು.ಎಸ್ ತನ್ನ ವ್ಯೂಹಾತ್ಮಕ ಮೀಸಲು ತೈಲಾಗಾರದಿಂದ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮುಂತಾದ ಕ್ರಮಗಳ ಮೂಲಕ ಅದನ್ನು ಇನ್ನಷ್ಟು ಬಿಗಡಾಯಿಸಲು ಪ್ರಯತ್ನಿಸುತ್ತಿದೆ. ಇದು ರಶ್ಯಾದ ಮಾತ್ರವಲ್ಲ ಈ ಎಲ್ಲ ದೇಶಗಳ ಆದಾಯಕ್ಕೆ ಹೊಡೆತ ಕೊಡುವಂಥದ್ದು. ಅದಕ್ಕಾಗಿ ಈ ದೇಶಗಳು ಈ ಪ್ರತಿತಂತ್ರ ಹೂಡಿವೆ. ಹಿಂದೆ ಇಂಥ ನಿರ್ಣಯ ತೆಗೆದುಕೊಳ್ಳಲು ಈ ದೇಶಗಳು ಹಿಂಜರಿಯುತ್ತಿದ್ದವು. ಉಕ್ರೇನ್ ಯುದ್ಧದ ನಂತರ ಅಂತತರಾಷ್ಟ್ರೀಯ ರಾಜಕಾರಣದಲ್ಲಿ ಭಾರೀ ಬದಲಾವಣೆ ಬಂದಿದೆ ಮತ್ತು ಎಲ್ಲ ಪ್ರದೇಶಗಳಲ್ಲಿ ಯು.ಎಸ್ ನ್ನು ತೀವ್ರ ಸಂಶಯದಿಂದ ಕಾಣಲಾಗುತ್ತಿದೆ.

ಫಿನ್ ಲ್ಯಾಂಡ್: ನಾಟೋ ಸದಸ್ಯತ್ವ, ಬಲಪಂಥೀಯ ಸರಕಾರ

ಫಿನ್ ಲ್ಯಾಂಡ್ ಇತ್ತೀಚೆಗೆ ಎರಡು ಕಾರಣಗಳಿಗೆ ಸುದ್ದಿಯಲ್ಲಿತ್ತು. ಆದರೆ ಬಹುಶಃ ಎರಡಕ್ಕೂ ನೇರ ಸಂಬಂಧವಿಲ್ಲ. ಫಿನ್ ಲ್ಯಾಂಡ್ ನಾಟೋ ಮಿಲಿಟರಿ ಕೂಟದ 31ನೆಯ ಸದಸ್ಯ ದೇಶವಾಗಿ ಎಪ್ರಿಲ್ 4ರಂದು ಪ್ರವೇಶ ಪಡೆಯಿತು. ಮೇ 2022ರಲ್ಲಿ ಉಕ್ರೇನ್ ಯುದ್ಧದಿಂದ ಉಂಟಾದ 'ರಾಷ್ಟ್ರೀಯ ಭದ್ರತಾ ಆತಂಕ'ಗಳ ಹಿನ್ನೆಲೆಯಲ್ಲಿ ಸ್ವೀಡನ್ ಮತ್ತು ಫಿನ್ ಲ್ಯಾಂಡ್ ನಾಟೋ ಮಿಲಿಟರಿ ಕೂಟಕ್ಕೆ ಸೇರಲು ಅರ್ಜಿ ಹಾಕಿದ್ದವು. ಇದು ಆ ಎರಡು ದೇಶಗಳು ಹಲವಾರು ದಶಕಗಳಿಂದ ಪಾಲಿಸಿಕೊಂಡು ಬಂದಿದ್ದ ಮಿಲಿಟರಿ ತಟಸ್ಥತೆಯ ನೀತಿಯ ಏಕಾಏಕಿ ಬದಲಾವಣೆ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಕಳೆದ ವಾರ ಟರ್ಕಿಯ ಪಾರ್ಲಿಮೆಂಟ್ ಫಿನ್ ಲ್ಯಾಂಡ್ ಪ್ರಸ್ತಾವಕ್ಕೆ ಮಂಜೂರಾತಿ ನೀಡುವ ಮೂಲಕ ಇದು ಸಾಧ್ಯಿವಾಗಿದೆ. ಕುರ್ದಿಶ್ ಗೆರಿಲ್ಲಾಗಳಿಗೆ ಈ ಎರಡು ದೇಶಗಳು ರಾಜಕೀಯ ಆಶ್ರಯ ಮತ್ತು ಬೆಂಭಲ ನೀಡಿವೆ ಮತ್ತು ಟರ್ಕಿಗೆ ಶಸ್ತ್ರಾಸ್ತ್ರ ಮಾರಾಟದ ಮೇಲೆ ನಿರ್ಬಂಧ ಹೇರಿವೆಯೆಂದು ಟರ್ಕಿ ದೂರಿ ಮಂಜೂರಾತಿ ತಡೆ ಹಿಡಿದಿತ್ತು. ಫಿನ್ ಲ್ಯಾಂಡ್ ತನ್ನ ಆತಂಕಗಳನ್ನು ನಿವಾರಿಸಿದೆ. ಆದರೆ ಸ್ವೀಡನ್ ಇನ್ನೂ ನಿವಾರಿಸಿಲ್ಲವೆಂದು ಟರ್ಕಿ ಸರಕಾರ ಹೇಳಿದೆ.

ಫಿನ್ ಲ್ಯಾಂಡ್ ಜತೆಗೆ 1300 ಕಿ,ಮಿ ಉದ್ದವಾದ ಗಡಿ ಇರುವ ರಶ್ಯಾ ಇದಕ್ಕೆ ಪ್ರತಿಕ್ರಿಯಿಸುತ್ತಾ ಅದು ಸೂಕ್ತ ಭದ್ರತಾ ಕ್ರಮಗಳನ್ನು ಕೈಗೊಳ್ಳುವುದು ಎಂದಿದೆ. ಇತರ ನಾಟೋ ದೇಶಗಳ ಪಡೆಗಳು ಮತ್ತು ಶಸ್ತ್ರಾಸ್ತ್ರಗಳನ್ನು ಫಿನ್ ಲ್ಯಾಂಡ್ ನಲ್ಲಿ ನೆಲೆಸಿದರೆ ಇನ್ನಷ್ಟು ಭದ್ರತಾ ಕ್ರಮಗಳನ್ನು ಕೈಗೊಳ್ಳುವುದು ಎಂದಿದೆ.

ಕೆಲವೇ ದಿನಗಳ ಮೊದಲು ಈ ರಾಜಕೀಯ ನಿರ್ಣಯವನ್ನು ತೆಗೆದುಕೊಂಡ ಹಿಂದಿನ ಪ್ರಧಾನಿ ಸನ್ನಾ ಮರಿನ್ ಚುನಾವಣೆಗಳಲ್ಲಿ ಸೋತಿತು. ಅವರ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷ (ಎಸ್.ಡಿ.ಪಿ)ಸೋತು ಮೂರನೆಯ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ನಡು–ಬಲಪಂಥೀಯ ನೇಶನಲ್ ಕೊಲಿಶನ್ ಪಕ್ಷ 48 ಸೀಟು (10 ಹೆಚ್ಚು ಸೀಟು) ಮತ್ತು 20.8% ಮತ ಪಡೆದು ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದೆ. ಉಗ್ರ–ಬಲಪಂಥೀಯ ಫಿನ್ಸ್ ಪಕ್ಷ 46 ಸೀಟು (7 ಹೆಚ್ಚು ಸೀಟು) ಮತ್ತು 20.1% ಮತ ಪಡೆದು ಎರಡನೆಯ ಸ್ಥಾನ ಪಡೆದಿದೆ. ನೇಶನಲ್ ಕೊಲಿಶನ್ ಫಿನ್ಸ್ ಪಕ್ಷದ ಜತೆ ಸೇರಿ ಸರಕಾರ ನಡೆಸಲಿದೆ. ಅಂದರೆ ಫೀನ್ ಲ್ಯಾಂಡ್ ಬಲಪಂಥದತ್ತ ಸರಿದಿದೆ.

ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷ (ಎಸ್.ಡಿ.ಪಿ) 43 ಸೀಟು (3 ಹೆಚ್ಚು ಸೀಟು) ಮತ್ತು 19.9% ಮತ ಪಡೆದು ಮೂರನೆಯ ಸ್ಥಾನ ಪಡೆದಿದೆ. ಗ್ರೀನ್ ಲೀಗ್ 23 ಸೀಟು (7 ಸೀಟು ಕಡಿಮೆ) ,ತ್ತು ಎಡ ಕೂಟ 11 (5 ಸೀಟು ಕಡಿಮೆ) ಪಡೆದಿವೆ. ಸನ್ನಾ ಮರೀನ್ ನಾಟೋ ಸೇರುವ ಪ್ರಮಾದ ಮಾಡಿದ್ದಲ್ಲದೆ, ನಿರುದ್ಯೋಗ ಭತ್ಯೆ ಪಡೆಯುವ ಶರತ್ತುಗಳನ್ನು ಕಠಿಣಗೊಳಿಸಿದ್ದು, ಮುಷ್ಕರದ ವಿರುದ್ಧ ಕಟು ಕ್ರಮ ಕೈಗೊಂಡು 'ಮಿತವ್ಯಯ'ದ ಕ್ರಮಗಳನ್ನು ಜಾರಿಗೊಳಿಸಿದ್ದು ಅವರ ಸರಕಾರಕ್ಕೆ ಮುಳುವಾಯಿತು ಎನ್ನಲಾಗಿದೆ. ಮುಂದಿನ ಸರಕಾರ ನಾಟೋ ನಿರ್ಣಯಕ್ಕೆ ಬದ್ಧವಾಗಿರುವುದಲ್ಲದೆ 'ಮಿತವ್ಯಯ'ದ ಹೆಸರಲ್ಲಿ ಇನ್ನಷ್ಟು ಜನರ ಕಾರ್ಮಿಕರ ಕಲ್ಯಾಣ ಕ್ರಮಗಳನ್ನು ಕಡಿತ ಮಾಡಲಿದೆ.


ಫಿನ್ ಲ್ಯಾಂಡ್ ನಾಟೋ ಸದಸ್ಯ

NEW No. MAG(3)/NPP/205/2021-2022
JANASHAKTHI KANNADA VARA PATRIKE APRIL 10-16, 2023 Price: Rs. 10/- Date of Publication: 7 APRIL 2023 RNI No. KARKAN /2006/17926 Posted on 10-04-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

ಭಾಷೆಗಳು ಹಲವು ಆದರೂ ಭಾವನೆಗಳು ಒಂದೇ! 'ಕಾರ್ಮಿಕ-ರೈತ ಮಹಾ ರ್‍ಯಾಲಿ' ಯಲ್ಲಿ ಕಂಡಂತೆ





ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು), ಅಖಿಲ ಭಾರತ ರೈತ ಸಂಘ (ಎಐಕೆಎಸ್), ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ (ಎಐಎಡಬ್ಲ್ಯೂಯು) ಇವುಗಳ ನೇತೃತ್ವದಲ್ಲಿ ಕಾರ್ಮಿಕರು-ರೈತರು-ಕೃಷಿ ಕಾರ್ಮಿಕರ ಮಹಾ ರ್‍ಯಾಲಿ/ಬೃಹತ್ ಸಭೆ ಏಪ್ರಿಲ್ 5ರ ಬುಧವಾರ ರಾಜಧಾನಿ ನವದೆಹಲಿಯ ರಾಮಲೀಲಾ ಮೈದಾನದಲ್ಲಿ ನಡೆಯಿತು. ದೇಶದ ವಿವಿಧ ಭಾಗಗಳಿಂದ ಲಕ್ಷಾಂತರ ಕಾರ್ಮಿಕರು-ರೈತರು-ಕೃಷಿ ಕಾರ್ಮಿಕರು ಈ ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ಅವರ ಭಾಷೆಗಳು ವಿಭಿನ್ನವಾಗಿದ್ದರೂ, ಅವರ ಭಾವನೆಗಳು ಒಂದೇ ಆಗಿವೆ ಎಂಬುದು ಸ್ಪಷ್ಟವಾಗಿದೆ. ಬುಧವಾರ ಪೂರ್ವದಲ್ಲಿ ಸೂರ್ಯ ಉದಯಿಸುತ್ತಿದ್ದಂತೆ, ಕಾರ್ಮಿಕರು ಮತ್ತು ರೈತರು ಕೆಂಪು ಧ್ವಜಗಳೊಂದಿಗೆ ರಾಮ್ ಲೀಲಾ ಮೈದಾನದಲ್ಲಿ ಅಲೆಗಳಲ್ಲಿ ಮೆರವಣಿಗೆಯಲ್ಲಿ ಬಂದು ಸೇರತೊಡಗಿದರು. ಇವರಲ್ಲಿ ಭೂರಹಿತ ಕೃಷಿ ಕಾರ್ಮಿಕರು, ಅಂಗನವಾಡಿ ಮತ್ತು ಆಶಾ ಮಹಿಳಾ ಕಾರ್ಯಕರ್ತೆಯರು ಮತ್ತು ವಲಸೆ ಕಾರ್ಮಿಕರು ಗಣನೀಯವಾಗಿ ಸಜ್ಜುಗೊಂಡಿರುವುದು ಕಂಡುಬಂದಿದೆ. ಎಲ್ಲರೂ 'ಕಾರ್ಮಿಕ-ರೈತ ಮಹಾ ರ್‍ಯಾಲಿ' ಎಂಬ ಬ್ಯಾನರ್‌ನಡಿಯಲ್ಲಿ ರ್‍ಯಾಲಿ ನಡೆಸುತ್ತಿದ್ದರು.

ವಿವಿಧ ರಾಜ್ಯಗಳು ಆಯಾ ರಾಜ್ಯ ಭಾಷೆಗಳಲ್ಲಿ ಘೋಷಣೆಗಳನ್ನು ಕೂಗಿದಾಗ, ಅವರು ಆಳುವವರ ಅನ್ಯಾಯದ ವಿರುದ್ಧ ಮತ್ತು ಕಾರ್ಮಿಕರು ಮತ್ತು ರೈತರು ಒಟ್ಟಾಗಿ ನಿಂತು ಅದನ್ನು ಸೋಲಿಸಲು ಸಜ್ಜುಗೊಳಿಸುತ್ತಿರುವುದು ಚೆನ್ನಾಗಿ ಅರ್ಥವಾಯಿತು. ನಾನು ಯಾರೊಂದಿಗೆ ಮಾತನಾಡಿದರೂ, ಕಾರ್ಪೊರೇಟ್‌ಗಳ ಜೊತೆ ಸೇರಿ ಆಡಳಿತಗಾರರ ಲೂಟಿಯಿಂದ ಅವರೆಲ್ಲ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಸ್ಪಷ್ಟಪಡಿಸಿದರು. ತಮ್ಮ ನೋವಿಗೆ ಕಾರಣ ಆಡಳಿತಗಾರರು ಮತ್ತು ಅವರ ಕಾರ್ಪೊರೇಟ್ ಬೆಂಬಲಿತ ವಿನಾಶಕಾರಿ ಭೌತಿಕ ನೀತಿಗಳು ಎಂದು ಅವರು ಹಿಂಜರಿಕೆಯಿಲ್ಲದೆ ನಮಗೆ ಹೇಳಿದರು.

ನಮ್ಮ ಆಹಾರ ಚಪಾತಿ ಮತ್ತು ಉಪ್ಪು

ನ್ಯೂಸ್‌ಕ್ಲಿಕ್‌ಗಾಗಿ ನಾವು ಎಪ್ಪತ್ತು ವರ್ಷದ ವ್ಯಕ್ತಿಯನ್ನು ಸಂದರ್ಶಿಸಿದೆವು. ಅವರ ಕುಟುಂಬದಲ್ಲಿ 19 ಜನರಿದ್ದು, ಅವರೆಲ್ಲರೂ ಕಳೆದ ಹತ್ತು ತಿಂಗಳಿನಿಂದ ಮಧ್ಯಾಹ್ನದ ಚಪಾತಿ ಮತ್ತು ಉಪ್ಪನ್ನು ಮಾತ್ರ ಸೇವಿಸುತ್ತಿದ್ದಾರೆ ಎಂದು ಅವರು ಹೇಳಿದರು. ತಮ್ಮ ಕುಟುಂಬದ ದುಸ್ಥಿತಿಯ ಬಗ್ಗೆ ಅವರು ಹೇಳುತ್ತಿದ್ದಂತೆ, "19 ಜನರಿರುವ ನಮ್ಮ ಕುಟುಂಬದಲ್ಲಿ ಕೇವಲ 5 ಜನರು ಮಾತ್ರ ಸಂಪಾದಿಸುತ್ತಿದ್ದಾರೆ. ನಮ್ಮ ಪ್ರದೇಶದಲ್ಲಿ ಕಾರ್ಖಾನೆಗಳಿಲ್ಲದ ಕಾರಣ ಯಾರೂ ಕಾರ್ಮಿಕರಿಲ್ಲ. ನಾನು ಅನಕ್ಷರಸ್ಥ. ಇದು ನನ್ನ ಮಕ್ಕಳ ಮೇಲೂ ಪರಿಣಾಮ ಬೀರಿದೆ. ಹಾಗಾಗಿ ನಾವೆಲ್ಲರೂ ದಿನಗೂಲಿಯಾಗಿ ಬದುಕುತ್ತಿದ್ದೇವೆ. ನಮಗೆ ಜಮೀನು ಇಲ್ಲ, ಜಮೀನುದಾರರು ತಮ್ಮ ಜಮೀನಿನಲ್ಲಿ ಕೂಲಿ ಮಾಡಿ ಕೊಡುವ ಕೂಲಿಯಲ್ಲಿ ಬದುಕುತ್ತಿದ್ದೇವೆ. 100 ದಿನಗಳ ಯೋಜನೆ ನಂತರ, ಪರಿಸ್ಥಿತಿ ಮೊದಲಿಗಿಂತ ಸ್ವಲ್ಪ ಉತ್ತಮವಾಗಿದೆ. ಸರಕಾರ ನೀಡುವ ಪಡಿತರದಿಂದ ಜೀವನ ನಡೆಸುತ್ತಿದ್ದೇವೆ ಎಂದರು. ವೃದ್ಧಾಪ್ಯ ವೇತನ ಯೋಜನೆ ಬಗ್ಗೆ ಅವರಿಗೆ ಏನೂ ಗೊತ್ತಿಲ್ಲ. ಒಂದು ಪೈಸೆಯನ್ನೂ ಪಡೆದಿಲ್ಲ ಎಂದರು. ಸರ್ಕಾರದ ಪರವಾಗಿ ಯಾರೂ ಈ ಬಗ್ಗೆ ನನಗೆ ಹೇಳಿಲ್ಲ. "ನಾವು ಕೇವಲ ಓಟಿಕ್ಕಾಗಿ ಬದುಕುತ್ತಿದ್ದೇವೆಯೇ?" ಎಂದು ರಾಮ್ ಕೇಳಿದರು.

ಬಿಹಾರದ ತಮ್ಮ ಹಳ್ಳಿಯಲ್ಲಿ ಭೂರಹಿತ ಕೃಷಿ ಕಾರ್ಮಿಕರು ಜೀವನ ನಿರ್ವಹಣೆಗೆ ಕಷ್ಟಪಡುತ್ತಿದ್ದಾರೆ ಎಂದು ರಾಮ್ ಹೇಳಿದರು. ದೆಹಲಿಗೆ ಬಂದಾಗ ಅದು ಅಷ್ಟು ಸುಲಭವಾಗಿರಲಿಲ್ಲ. ತಮ್ಮ ಗ್ರಾಮದ ಕೆಲವರಿಗೆ ಪಿಂಚಣಿ ಸಿಗುತ್ತಿದ್ದರೂ ತಿಂಗಳಿಗೆ ಕೇವಲ 400 ರೂ. ಯಾವುದೇ ಸಾಮಾಜಿಕ ಭದ್ರತೆ ಇಲ್ಲದೇ ನಮ್ಮ ಬದುಕು ಸಾಗುತ್ತಿದೆ ಎಂದು ರಾಮ್ ಹೇಳಿದರು. ಆ ಕೆಲಸ ಸಿಗದಿದ್ದರೆ ಸಾಯುತ್ತೇವೆ ಎಂದು ರಾಮ್ ಹೇಳಿದರು.

"ಬರ ನಮ್ಮನ್ನು ಕೊಲ್ಲುತ್ತದೆ": ಆಂಧ್ರ ರೈತರು

ದಕ್ಷಿಣ ಭಾರತದ ಕಾರ್ಮಿಕರು-ರೈತರು ಎದ್ದು ಕಾಣುತ್ತಿದ್ದರು. ಕೇರಳ, ತಮಿಳುನಾಡು, ಕರ್ನಾಟಕ, ಆಂಧ್ರದ ಸಾವಿರಾರು ಕಾರ್ಮಿಕರು, ರೈತರು ಕೆಂಪು ಅಂಗಿ ಧರಿಸಿ ಬಂದಿದ್ದರು. ಮಹಿಳೆಯರೂ ಸಾಕಷ್ಟು ಸಂಖ್ಯೆಯಲ್ಲಿ ಕೆಂಪು ಸೀರೆ ಉಟ್ಟು ಬಂದಿದ್ದರು. "ನಮಗೆ ಉದ್ಯೋಗ ಕೊಡಿ" ಎಂಬ ಘೋಷಣೆಯುಳ್ಳ ಬೇಡಿಕೆಯ ಫಲಕಗಳನ್ನು ಅವರು ಹಿಡಿದಿದ್ದರು. ನ್ಯೂಸ್‌ಕ್ಲಿಕ್ ವರದಿಗಾರರೊಬ್ಬರು ಆಂಧ್ರದ ರೈತನನ್ನು ಸಂದರ್ಶಿಸಿದರು: "ರೈತರಾದ ನಾವು ಭತ್ತ, ಹತ್ತಿ ಮತ್ತು ಇತರ ಅನೇಕ ಬೆಳೆಗಳನ್ನು ಬೆಳೆಯುತ್ತಿದ್ದೇವೆ. ನಾವು ತಯಾರಿಸುವ ಉತ್ಪನ್ನಗಳಿಗೆ ಕನಿಷ್ಠ ಮೂಲ ಬೆಲೆ ಸಿಗದಿರುವುದು ನಮ್ಮ ಮುಖ್ಯ ಸಮಸ್ಯೆಯಾಗಿದೆ. ಈ ವರ್ಷ ನನ್ನ ಬೆಳೆ ಬೆಳೆಯಲು 50 ಸಾವಿರ ರೂ. ಆದರೆ ನನಗೆ ಸಿಕ್ಕಿದ್ದು ಕೇವಲ 20 ಸಾವಿರ ರೂ. ಈಗ ವಿದ್ಯುತ್ ಶುಲ್ಕವನ್ನು ಹೆಚ್ಚಿಸಲು ಪಾಲಿಕೆ ಮುಂದಾಗಿದೆ. ಇದು ಜಾರಿಯಾದರೆ ಇನ್ನೂ 4,000 ಅಥವಾ 5,000 ರೂ. ಅದನ್ನು ನಿಭಾಯಿಸಲು ನಮಗೆ ಸಾಧ್ಯವೇ ಇಲ್ಲ' ಎಂದು ಆಂಧ್ರಪ್ರದೇಶದ ಕರ್ನೂಲ್‌ನ ರೈತ ರಂಗಸ್ವಾಮಿ ಹೇಳಿದರು.

"ಕಳೆದ ಮೂರು ವರ್ಷಗಳಿಂದ ಕೃಷಿಯಲ್ಲಿ ನಷ್ಟ ಅನುಭವಿಸುತ್ತಿದ್ದೇನೆ. ಕಳೆದ ವರ್ಷ ಹತ್ತಿಗೆ ಕ್ವಿಂಟಲ್‌ಗೆ 13 ಸಾವಿರ ರೂ. ಈ ವರ್ಷ 5 ಸಾವಿರ ಕಡಿಮೆಯಾಗಿದೆ. ಕೇಂದ್ರ ಸರ್ಕಾರ ನಮ್ಮ ನೆರವಿಗೆ ಬಾರದಿದ್ದಲ್ಲಿ ನಮ್ಮ ರಾಜ್ಯದಲ್ಲಿ ಆತ್ಮಹತ್ಯೆಗಳ ಸಂಖ್ಯೆ ಹೆಚ್ಚಾಗಲಿದೆ' ಎಂದು ರಂಗಸ್ವಾಮಿ ಹೇಳಿದರು. ರ್‍ಯಾಲಿಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು, ತಮ್ಮ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಘೋಷಣೆಗಳನ್ನು ಕೂಗುತ್ತಿದ್ದುದು ಎಲ್ಲರ ಮನ ಕಲಕುವಂತಿತ್ತು. ಯಾವುದೇ ಔಪಚಾರಿಕ ಸಂಘಟನೆಯಿಲ್ಲದೆ ಮೈಲುಗಟ್ಟಲೆ ಮೆರವಣಿಗೆ ನಡೆಸಿ, ಆಡಳಿತಗಾರರ ದಬ್ಬಾಳಿಕೆ ವಿರುದ್ಧ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಲು ಘೋಷಣೆಗಳನ್ನು ಕೂಗಿದರು. ಒಂದು ರಾಜ್ಯದ ಮಹಿಳೆಯರು ಮತ್ತೊಂದು ರಾಜ್ಯದ ಮಹಿಳೆಯರೊಂದಿಗೆ ಸಮಸ್ಯೆಗಳನ್ನು ಮತ್ತು ಹೋರಾಟದ ಸ್ವರೂಪಗಳನ್ನು ಹಂಚಿಕೊಂಡರು. ಬಹುಶಃ ಇವರೆಲ್ಲ 'ಆಶಾ' ಪುಟ 14 ಕ್ಕೆ

ರ್‍ಯಾಲಿಗೆ ನಿಯಮಿತವಾಗಿ ಬರುವ ಒಡನಾಡಿಗಳು

ಪಶ್ಚಿಮ ಬಂಗಾಳದ ರವಿ ದಾಸ್ ಎಂಬ 37 ವರ್ಷದ ಸಂಗಾತಿ ಪ್ರತಿ ರ್‍ಯಾಲಿಗೆ ಬರುತ್ತಾರೆ. ಅವರು ಹುಟ್ಟಿನಿಂದಲೇ ಅಂಗವಿಕಲ. ಅವರು ನಡೆಯಲು ಸಾಧ್ಯವಿಲ್ಲ. ಕೆಂಪು ಅಂಗಿ ಧರಿಸಿ, ಕೆಂಪು ಬಾವುಟ ಹಿಡಿದು ಮಂಡಿಯೂರಿ ರ್‍ಯಾಲಿಗೆ ಬಂದ್ದಿದ್ದರು. ವರದಿಗಾರರೊಬ್ಬರು ಅವರ ಬಳಿ ಬಂದು ವಿಚಾರಿಸಿದಾಗ, "ನಾನು ನನ್ನ ಶಾಲೆಯಿಂದಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಬಲಿಗ. ನಾನು ಓದಿದ್ದು ಐದನೇ ತರಗತಿವರೆಗೆ ಮಾತ್ರ. ದೇಶಾದ್ಯಂತ ನಡೆದ ಎಲ್ಲ ಚಳವಳಿಗಳಲ್ಲಿ ಭಾಗವಹಿಸಿದ್ದೇನೆ ಎಂದರು.



JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Editor : **NITYANANDASWAMI**